ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 10 ಸೋಮವಾರ 2023

ಸಂಪುಟ: 44 | ಸಂಚಿಕೆ: 85 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ದಿ ಗ್ರ್ಯಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಶತಮಾನೋತ್ಸವ

ಸಹಕಾರಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿ

ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಅವರಲ್ಲಿ ಮಾತುಕತೆ; ಸಹಕಾರ ಸಚಿವ ಕೆ.ಎನ್.ರಾಜಣ್ಣ



ಮೈಸೂರಿನ ಜೆಕೆ ಮೈದಾನದ ಮೈಸೂರು ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ದಿ ಗ್ರ್ಯಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ ಸಮಾರಂಭದಲ್ಲಿ ಬ್ಯಾಂಕಿನ ಸ್ಮರಣ ಸಂಚಿಕೆ 'ಶತಸಿರಿ' ಬಿಡುಗಡೆ ಮಾಡಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು. ಸಚಿವ ಕೆ.ಎನ್.ರಾಜಣ್ಣ, ವಿಧಾನಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಡಾ.ತಿಮ್ಮಯ್ಯ, ಶಾಸಕ ಶ್ರೀವತ್ಸ, ಮೇಯರ್ ಶಿವಕುಮಾರ್ ಇನ್ನಿತರರಿದ್ದಾರೆ.

ಮೈಸೂರು,ಜು.9(ಪಿಎಂ)– ಸಹಕಾರಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೊಳಿಸುವ ಸಂಬಂಧ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್ ಅವರಲ್ಲಿ ಮಾತುಕತೆ ನಡೆಸಿದ್ದು, ಸಹಕಾರಿ ವಲಯದಲ್ಲಿ ಮೀಸಲಾತಿ ಜಾರಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಮೈಸೂರಿನ ಜೆಕೆ ಮೈದಾನದ ಮೈಸೂರು ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ದಿ ಗ್ರ್ಯಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ ಸಮಾರಂಭದಲ್ಲಿ ಶತಮಾನೋತ್ಸವದ ಶಿಲಾನ್ಯಾಸ ಅನಾವರಣಗೊಳಿಸಿ ಅವರು ಮಾತನಾಡಿದರು.

ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ತಾವು ಸಹಕಾರ ಮಂತ್ರಿ ಇದ್ದಾಗ ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೆ ಪ್ರಯತ್ನಿಸಿದ್ದನ್ನು ತಿಳಿಸಿ, ಇದೀಗ ಜಾರಿಗೊಳಿಸಬೇಕೆಂದು ಪ್ರಸ್ತಾಪಿಸಿದ್ದಾರೆ. ಮೀಸಲಾತಿ ಸಂಬಂಧ ಅವರ ಅವಧಿಯಲ್ಲಿ ಮಂತ್ರಿಮಂಡಲದ ಉಪಸಮಿತಿ ರಚನೆಯಾದರೂ ಕೆಲಸ ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ಇದೀಗ ಅವರ ಸಲಹೆಯನ್ನು ಪರಿಗಣಿಸಲಾಗುವುದು. ಈ ಬಗ್ಗೆ ನಾನು ಈಗಾಗಲೇ ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಅವರಲ್ಲಿ ಮಾತುಕತೆ ನಡೆಸಿದ್ದೇನೆ. ಪ್ರಸ್ತುತವಿರುವ ಕಾಯ್ದೆಯಡಿಯಲ್ಲಿ ಏನೆಲ್ಲಾ ಮೀಸಲಾತಿ ತರಲು ಅವಕಾಶ ವಿದೆ. ಹೊಸ ತಿದ್ದುಪಡಿ ಕಾಯ್ದೆಗಳಿಗೆ ತರಬೇಕಾಗುತ್ತದೆಯೇ ಎಂಬ ಇತ್ಯಾದಿ ಅಂಶಗಳನ್ನು ವಿಚಾರ ಮಾಡಲು ಅವರಿಗೆ ಮನವಿ ಮಾಡಿದ್ದೇನೆ ಎಂದು ತಿಳಿಸಿದರು.

ಸಹಕಾರಿ ಸಂಸ್ಥೆಗಳು ಸರ್ಕಾರದ ಸಂಸ್ಥೆಗಳಲ್ಲ. ಸಹಕಾರ ಸಂಸ್ಥೆಗಳಲ್ಲಿರುವ ಸದಸ್ಯರ ಆಸ್ತಿಯದು. ಸರ್ಕಾರ ಯಾವುದೇ ರೀತಿಯಲ್ಲಿ ಅವುಗಳಿಗೆ ಹಣಕಾಸು ತೊಡಗಿಸುವುದಿಲ್ಲ. ಸುಲಲಿತವಾಗಿ ಕಾರ್ಯಚಟುವಟಿಕೆ ನಡೆಯುವ ಸಂಬಂಧ ಪರಿವೀಕ್ಷಣೆಯಷ್ಟೇ ಸರ್ಕಾರದ ಕೆಲಸ. ಸಹಕಾರ ಸಂಘಗಳಲ್ಲಿ ಆಡಳಿತ ಮಂಡಳಿ ನಿರ್ಲಕ್ಷ್ಯ, ಅಧಿಕಾರಿ ವರ್ಗದ ಭ್ರಷ್ಟಾಚಾರ ಇತ್ಯಾದಿ ಕಾರಣಕ್ಕೆ ಅಸ್ತಿತ್ವ ಕಳೆದುಕೊಳ್ಳುವ ಸಂದರ್ಭ ಬಂದಲ್ಲಿ ಸರ್ಕಾರ ಮಧ್ಯ ಪ್ರವೇಶಿಸಿ ಸರಿದಾರಿಗೆ ತರುವ ಕೆಲಸ ಮಾಡುತ್ತದೆ. ಇಷ್ಟು ಹೊರತುಪಡಿಸಿದರೆ ಸರ್ಕಾರದ ಯಾವುದೇ ರೀತಿಯ ಹಸ್ತಕ್ಷೇಪ ಇಲ್ಲವಾಗಿದ್ದು, ಇರಲೂ ಬಾರದಾಗಿದೆ. ಆದರೂ ಸಹಕಾರ ವಲಯ ಕೆಲವೇ ಜನರ ಸ್ವತ್ತು ಆಗಬಾರದು ಎಂಬುದನ್ನು ಒಪ್ಪುತ್ತೇನೆ. ಈ ನಿಟ್ಟಿನಲ್ಲಿ ಮೀಸಲಾತಿ ಯಾವ ರೀತಿ ಜಾರಿ ಸಾಧ್ಯವೆಂದು ಪರಿಶೀಲಾಗುವುದು. ಒಟ್ಟಾರೆ ಮೀಸಲಾತಿ ಜಾರಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

1923ರಲ್ಲಿ ಪ್ರೊಎನ್.ಎಸ್.ಸುಬ್ಬರಾವ್ ಅವರ ಮುಂದಾಲೋಚನೆಯಿಂದ ಈ ಬ್ಯಾಂಕ್ ಸ್ಥಾಪನೆಯಾಯಿತು. ಇದು ಪದವೀಧರ ಸದಸ್ಯರನ್ನೊಳಗೊಂಡು ಸಹಕಾರ ಸಂಸ್ಥೆ ಎಂಬುದು ಹೆಮ್ಮೆಯ ವಿಚಾರ. ▶ 6ನೇ ಪುಟಕ್ಕೆ

ಪ್ರತಿ ಗ್ರಾಪಂನಲ್ಲಿ ಕೃಷಿ ಪತ್ತಿನ ಸಹಕಾರ ಸಂಘ

“ ಗ್ರಾಮೀಣ ಪ್ರದೇಶದ ಪತ್ತಿನ ವ್ಯವಸ್ಥೆ ಇನ್ನು ಹೆಚ್ಚು ಸದೃಢಗೊಳಿಸಲು ರಾಜ್ಯದ ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಸ್ಥಾಪನೆಗೆ ಇಲಾಖೆ ಮುಂದಾಗಿದೆ. ಇದೇ ಡಿಸೆಂಬರ್ ಅಂತ್ಯದೊಳಗೆ ಈ ಸಂಬಂಧ ಎಲ್ಲಾ ಪ್ರಕ್ರಿಯೆ ಪೂರ್ಣಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ.

–ಕೆ.ಎನ್.ರಾಜಣ್ಣ, ಸಚಿವ

“ 1923ರಲ್ಲಿ ದಿ ಗ್ರ್ಯಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಅನ್ನು ಪ್ರೊ.ಎನ್.ಎಸ್.ಸುಬ್ಬರಾವ್ ಅವರು ಸ್ಥಾಪನೆ ಮಾಡಿದರು. ಅವರು ಮೈಸೂರು ವಿವಿ ಉಪಕುಲಸಚಿವರೂ ಆಗಿದ್ದರು. ಪ್ರಸ್ತುತ ಬ್ಯಾಂಕ್ ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿ ಸ್ವಂತ ಕಟ್ಟಡ ಹೊಂದಿದೆ. ಪ್ರಾರಂಭದಲ್ಲಿ 87 ಸದಸ್ಯರನ್ನು ಹೊಂದಿದ್ದ ಬ್ಯಾಂಕ್ ಇಂದು 13 ಸಾವಿರಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದೆ.

–ಎನ್.ಶ್ರೀನಿವಾಸ, ಬ್ಯಾಂಕ್ ಅಧ್ಯಕ್ಷ

ಇಂದು ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ




- ಬೆಳಗ್ಗೆ 8 ಗಂಟೆಯಿಂದ ಭಕ್ತರ ದರ್ಶನಕ್ಕೆ ಅವಕಾಶ
- ಬೆಳಗ್ಗೆ 10.30ಕ್ಕೆ ಚಿನ್ನದ ಪಲ್ಲಕ್ಕಿ ಉತ್ಸವ, ರಾತ್ರಿ ದರ್ಬಾರ್ ಉತ್ಸವ

ಮೈಸೂರು, ಜು.9(ಎಂಟಿವೈ)– ನಾಡದೇವಿ ಚಾಮುಂಡೇಶ್ವರಿಯ ದೇವಿಯ ವರ್ಧಂತಿ ಮಹೋತ್ಸವ ಸೋಮವಾರ (ಜು.10) ಚಾಮುಂಡಿಬೆಟ್ಟದಲ್ಲಿ ವಿಜೃಂಭಣೆಯಿಂದ ನೆರವೇರವೇರಲಿದ್ದು, ಅದಕ್ಕಾಗಿ ಸೂಕ್ತ ಸಿದ್ಧತೆಯೊಂದಿಗೆ ಬಂದೋಬಸ್ತ್ ಏರ್ಪಡಿಸಲಾಗಿದೆ. ಆಷಾಡ ಮಾಸದ ಕೃಷ್ಣ ಪಕ್ಷದ ಅಷ್ಟಮಿಯ ರೇವತಿ ನಕ್ಷತ್ರದ ದಿನದಂದು ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಮಹೋತ್ಸವ(ಜನ್ಮದಿನ) ಆಚರಿಸಲಾಗುತ್ತಿದ್ದು, ನಾಳೆ ಮುಂಜಾನೆಯಿಂದ ಚಾಮುಂಡೇಶ್ವರಿ ದೇವಾಲಯದಲ್ಲಿ ವಿಶೇಷ ಪೂಜಾ ಮಹೋತ್ಸವ ಜರುಗಲಿದೆ. ದೇವಾಲಯದಲ್ಲಿ ಪ್ರಧಾನ ಆಗಮಿಕರಾದ ಡಾ.ಎನ್.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ಮುಂಜಾನೆ 5.30ರಿಂದ ತಾಯಿಯ ವಿಗ್ರಹಕ್ಕೆ ವಿಶೇಷ ಪೂಜಾ ಕೈಂಕರ್ಯಗಳು ಆರಂಭವಾಗಲಿದೆ. ಅಭ್ಯಂಜನ(ಎಣ್ಣೆಸ್ನಾನ), ▶ 8ನೇ ಪುಟಕ್ಕೆ

ತಿಂಗಳಾಂತ್ಯದಲ್ಲಿ ದಸರಾ ಉನ್ನತ ಸಮಿತಿ ಸಭೆ

●ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ●ಮಹಿಷಾ ದಸರಾ ಆಚರಣೆಗೆ ಅವಕಾಶವಿದೆ

ಮೈಸೂರು,ಜು.9(ಪಿಎಂ)– ಮುಖ್ಯಮಂತ್ರಿಗಳ ಸಮಯ ಕೋರಿ ಈ ತಿಂಗಳಾಂತ್ಯದಲ್ಲಿ ದಸರಾ ಮಹೋತ್ಸವದ ಉನ್ನತ ಸಮಿತಿ ಸಭೆ ನಡೆಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.




ಮೈಸೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಐದು ವರ್ಷಗಳಿಂದ ಚಾಮುಂಡಿಬೆಟ್ಟದ ಮಹಿಷಾಸುರ ಪ್ರತಿಮೆ ಬಳಿ ಮಹಿಷಾ ದಸರಾ ಆಚರಣೆಗೆ ತಡೆಯೊಡ್ಡಿರುವ ಸಂಬಂಧ ಪ್ರತಿಕ್ರಿಯಿಸಿ, ನಮ್ಮ ಸಂವಿಧಾನದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆ, ಆಚಾರ–ವಿಚಾರ, ಧಾರ್ಮಿಕ ಹಕ್ಕು ಕಲ್ಪಿಸಲಾಗಿದೆ. ಅದರಡಿ ಆಚರಣೆಗೆ ಅವಕಾಶವಿದೆ. ▶ 8ನೇ ಪುಟಕ್ಕೆ

ಜೈನಮುನಿ ಕಾಮಕುಮಾರ ನಂದಿ ಮಹಾರಾಜ ಪಂಚಭೂತಗಳಲ್ಲಿ ಲೀನ



ಚಿಕ್ಕೋಡಿ, ಜು.9– ಭೀಕರವಾಗಿ ಕೊಲೆಗೀಡಾಗಿದ್ದ ಚಿಕ್ಕೋಡಿಯ ಜೈನ ಮುನಿ ಕಾಮಕುಮಾರ ನಂದಿ ಮಹಾರಾಜರ ಅಂತ್ಯಕ್ರಿಯೆ ನೆರವೇರಿದೆ.



ಹಿರೇಕೋಡಿಯ ನಂದಿಪರ್ವತ ಆಶ್ರಮದ ಪಕ್ಕದ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು. ನಾಂದಣಿ ಮಠದ ಜಿನಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿ ನೇತೃತ್ವದಲ್ಲಿ ಅಂತಿಮ ಕಾರ್ಯ ನಡೆಯಿತು. ನಂದಿ ಮಹಾರಾಜರ ಪೂರ್ವಾಶ್ರಮದ ಅಣ್ಣನ ಮಗ ಭೀಮಗೊಂಡ ಉಗಾರೆ ಅಗ್ನಿಸ್ಪರ್ಶ ಮಾಡಿದರು. ಬೆಳಗಾವಿ ಭಾಗದ ಶಾಸಕರು, ಪರಿಷತ್ ಸದಸ್ಯರು, ಮಾಜಿ ಸಚಿವರು, ಜೈನ ಧರ್ಮದ ಗಣ್ಯರು ಮುನಿಗಳ ಅಂತಿಮ ದರ್ಶನ ಪಡೆದಿದ್ದಾರೆ. ಜೈನಮುನಿಗಳ ಅಗಲಿಕೆಯಿಂದ ಭಕ್ತರಲ್ಲಿ ಶೋಕ ಮಡುಗಟ್ಟಿದೆ.

ಸಿಬಿಐ ತನಿಖೆಗೆ ವಹಿಸಿ ಆಗ್ರಹ: ಚಿಕ್ಕೋಡಿ ಜೈನಮುನಿಗಳ ಕೊಲೆ ಕೇಸ್ ಬಗ್ಗೆ ಸಾಕಷ್ಟು ಅನುಮಾನ ಇವೆ. ಹೀಗಾಗಿ ಸಿಬಿಐಗೆ ವಿಚಾರಣೆ ನೀಡಬೇಕೆಂದು ಶಾಸಕ ಅಭಯ್ ಪಾಟೀಲ್ ಒತ್ತಾಯ ಮಾಡಿದ್ದಾರೆ. ಆರೋಪಿ ನಾರಾಯಣ ಮಾಳಿ ಒಬ್ಬನೇ ಇದ್ದ ಅಂತಿದ್ದಾರೆ. ಆದರೆ ಬಹಳ ಒತ್ತಡ ಹೇರಿದ ಮೇಲೆ ಪೊಲೀಸರು ಹುಸೇನ್ ದಲ್ಲಾಯಿ ಹೆಸರು ಹೇಳಿದ್ದಾರೆ. ▶ 8ನೇ ಪುಟಕ್ಕೆ

ತಿ.ನರಸೀಪುರದಲ್ಲಿ ಯುವಕನ ಹತ್ಯೆ

ತಿ.ನರಸೀಪುರ, ಜು.9– ಕ್ಷುಲ್ಲಕ ಕಾರಣಕ್ಕೆ ಗುಂಪೊಂದು ಯುವಕನನ್ನು ಹತ್ಯೆ ಮಾಡಿರುವ ಘಟನೆ ತಿ.ನರಸೀಪುರ ಟೌನ್‌ನ ತಲಕಾಡು ಮುಖ್ಯರಸ್ತೆಯಲ್ಲಿರುವ ಸಂತೆಮಾಳದ ಬಳಿ ಭಾನುವಾರ ರಾತ್ರಿ ನಡೆದಿದೆ. ಶನಿವಾರ ಹನುಮ ಜಯಂತಿಯಲ್ಲಿ ಮುಂಚೂಣಿಯಲ್ಲಿ ಪಾಲ್ಗೊಂಡಿದ್ದ ಯುವ ಬ್ರಿಗೇಡ್ ಕಾರ್ಯಕರ್ತನೂ ಆದ ತಿ.ನರಸೀಪುರ ಟೌನ್ ಶ್ರೀರಾಂಪುರ ಕಾಲೋನಿ ನಿವಾಸಿ ವೇಣುಗೋಪಾಲ ನಾಯಕ(30) ಹತ್ಯೆಯಾಗಿರುವ ಯುವಕ.



ವೇಣುಗೋಪಾಲ

ಈತನನ್ನು ಭಾನುವಾರ ರಾತ್ರಿ ಸುಮಾರು 8.30ರ ವೇಳೆಯಲ್ಲಿ ಕೆಲ ಯುವಕರು ಬಾಟಲಿಯಿಂದ ಚುಚ್ಚಿ ಹತ್ಯೆ ಮಾಡಿದ್ದಾರೆ ಎನ್ನಲಾಗಿದೆ.

ತಿ.ನರಸೀಪುರದಲ್ಲಿ ಶನಿವಾರ ಅದ್ಧೂರಿಯಾಗಿ ಹನುಮ ಜಯಂತಿ ಆಚರಿಸಲಾಗಿತ್ತು ಮೆರವಣಿಗೆಯಲ್ಲಿ ಸ್ನೇಹಿತರೊಂದಿಗೆ ಮುಂಚೂಣಿಯಲ್ಲಿ ಭಾಗವಹಿಸಿದ್ದ ವೇಣುಗೋಪಾಲ ನಾಯಕ ಹಾಗೂ ಇತರರ ನಡುವೆ ಕ್ಷುಲ್ಲಕ ವಿಚಾರಕ್ಕೆ ಗಲಾಟೆ ನಡೆದಿತ್ತು ಆಗ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಇತರರು, ಗಲಾಟೆ ಬಿಡಿಸಿ ಸಮಾಧಾನಪಡಿಸಿದ್ದರು ಎಂದು ಹೇಳಲಾಗಿದೆ. ಆದರೆ ಇದೇ ವಿಚಾರವಾಗಿ ಭಾನುವಾರ ಬೆಳಗ್ಗೆ ವೇಣುಗೋಪಾಲ ನಾಯಕ ಮತ್ತಿತರರ ನಡುವೆ ಗಲಾಟೆಯಾಗಿತ್ತು ಎನ್ನಲಾಗಿದ್ದು, ರಾತ್ರಿ ವೇಣುಗೋಪಾಲ ನಾಯಕನಿಗೆ ಕರೆ ಮಾಡಿದ ಕೆಲವರು ಗಲಾಟೆ ವಿಚಾರವಾಗಿ ಮಾತನಾಡೋಣ ಎಂದು ಸಂತೆಮಾಳದ ಬಳಿ ಕರೆಸಿಕೊಂಡು ಹತ್ಯೆ ಮಾಡಿದ್ದಾರೆ ಎಂದು ಪ್ರಾಥಮಿಕ ವರದಿಗಳಿಂದ ತಿಳಿದುಬಂದಿದೆ. ನರಸೀಪುರ ಠಾಣೆ ಸಬ್‌ಇನ್ಸ್‌ಪೆಕ್ಟರ್ ತಿರುಮಲೇಶ್ ತಮ್ಮ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ದೌಡಾಯಿಸಿ, ▶ 8ನೇ ಪುಟಕ್ಕೆ

ತುರ್ತು ಸೇವಾ ಸಹಾಯವಾಣಿ–112ರಲ್ಲಿ ಪ್ರಸ್ತುತ ವರ್ಷ 11,585 ದೂರು ದಾಖಲು

●ಕರೆ ಬಂದ 5-6 ನಿಮಿಷದಲ್ಲೇ ಸಿಬ್ಬಂದಿ ಹಾಜರ್ ●ಕರೆ ಮಾಡಿದವರಿಗೆ ಪಾಲನಾ ಸಂದೇಶ ರವಾನೆ

ಮೈಸೂರು, ಜು.9(ಜಿಎ)–ಮೈಸೂರು ನಗರದಲ್ಲಿ ತುರ್ತು ಸೇವಾ ಸಹಾಯವಾಣಿ–112ಗೆ ಪ್ರಸ್ತುತ ವರ್ಷ ಈವರೆಗೆ 11,585 ದೂರುಗಳು ದಾಖಲಾಗಿದ್ದು, ಅಷ್ಟು ದೂರುಗಳಿಗೆ ಸ್ಪಂದಿಸಲಾಗಿದೆ. ಪ್ರತಿ ನಿತ್ಯವೂ 65ಕ್ಕೂ ಅಧಿಕ ಕರೆಗಳು ಬರುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಮೈಸೂರು ನಗರ ಪೊಲೀಸ್ ಇಲಾಖೆ ವತಿಯಿಂದ ನಗರಾದ್ಯಂತ 20 ತುರ್ತುಸೇವಾ ವಾಹನಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತಿದ್ದು, ಪೊಲೀಸ್, ಅಗ್ನಿಶಾಮಕ ಮತ್ತು ವಿಪತ್ತು ವಿಷಯಗಳ ತುರ್ತು ಸೇವೆಗಾಗಿ ಕರೆ ಮಾಡಿ ದೂರು ಹೇಳಿದ ಕೇವಲ 5ರಿಂದ 6 ನಿಮಿಷದಲ್ಲೇ ಸ್ಥಳಕ್ಕೆ ಭೇಟಿ ನೀಡಿ ಸ್ಪಂದಿಸಲಾಗುತ್ತಿದ್ದು, ಈ ವರ್ಷ ಈಗಾಗಲೇ 11,585 ದೂರುಗಳಿಗೆ ಸ್ಪಂದನೆ ದೊರೆತ್ತಿದ್ದು, 597 ದೂರುಗಳಿಗೆ ಎಫ್‌ಐಆರ್ ದಾಖಲಿಸಿದ್ದಾರೆ. ಸಮಸ್ಯೆ ಬಗೆಹರಿಸಿದ ನಂತರ ಅದನ್ನು 112 ಟ್ವಿಟರ್ ಖಾತೆಯಲ್ಲಿ ಸಿಬ್ಬಂದಿ ಹಂಚಿಕೊಳ್ಳುತ್ತಾರೆ.

ತುರ್ತುಸೇವಾ ವಾಹನದಲ್ಲಿ ಒಬ್ಬರು ಎಎಸ್‌ಐ ಸೇರಿ ಇಬ್ಬರು ಸಿಬ್ಬಂದಿ ಇರಲಿದ್ದು, ಸದಾ ಸಂಚರಿಸುತ್ತಿರುತ್ತಾರೆ. ತುರ್ತು ಸೇವಾ ವಾಹನಗಳಿಗೆ ಯಾವುದೇ ಠಾಣೆ ವ್ಯಾಪ್ತಿಯಿಲ್ಲ. ನೇರವಾಗಿ ನಗರ ಪೊಲೀಸ್ ಆಯುಕ್ತರ ಕಚೇರಿಯಿಂದ ಸೂಚನೆಗಳನ್ನು ನೀಡಲಾಗುತ್ತದೆ. ಸ್ಥಳಕ್ಕೆ ಭೇಟಿ ನೀಡುವ ಪೊಲೀಸರು ಮೊದಲು ಸಮಸ್ಯೆ ಪರಿಶೀಲಿಸಿ, ಸಂಬಂಧಪಟ್ಟವರೊಂದಿಗೆ ಚರ್ಚಿಸುತ್ತಾರೆ. ತಮ್ಮಿಂದ ಸಾಧ್ಯವಾದರೆ ಸ್ಥಳದಲ್ಲಿಯೇ ಪರಿಹರಿಸುತ್ತಾರೆ. ಗಂಭೀರ ಪರಿಸ್ಥಿತಿಯಿದ್ದರೆ ಘಟನಾ ಸ್ಥಳದ ವ್ಯಾಪ್ತಿಯ ಪೊಲೀಸ್ ಠಾಣೆಗೆ ಮಾಹಿತಿ ನೀಡುತ್ತಾರೆ. ಜೊತೆಗೆ ಕರೆ ಮಾಡಿದವರಿಗೂ ಸಂದೇಶದ ಮೂಲಕ ಮಾಹಿತಿ ತಲುಪುತ್ತಿರುತ್ತದೆ. ಸಮಸ್ಯೆಯನ್ನು ನೋಡಿದವರು ಅಥವಾ ಸಮಸ್ಯೆಯಲ್ಲಿ ಸಿಲುಕಿದವರು 112ಗೆ ಕರೆ ಮಾಡಿದ ತಕ್ಷಣ ಕಂಟ್ರೋಲ್ ರೂಂ ಸಿಬ್ಬಂದಿ ಕರೆ ಸ್ವೀಕರಿಸಿ, ಸಮಸ್ಯೆಯ ವಿವರಗಳನ್ನು ಪಡೆದುಕೊಂಡು ಘಟನಾ ಸ್ಥಳದ ಹತ್ತಿರದಲ್ಲಿರುವ 112 ವಾಹನಕ್ಕೆ ಮಾಹಿತಿ ನೀಡುತ್ತಾರೆ. ಎಲ್ಲಿಂದ ಕರೆ ಮಾಡಿದ್ದಾರೆ ಎಂಬುದನ್ನು ಜಿಪಿಎಸ್ ಲೋಕೇಷನ್ ಮೂಲಕ ಪತ್ತೆಹಚ್ಚಿ ಸಮೀಪವಿರುವ 112 ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡುವ ಮೂಲಕ ಸಮಸ್ಯೆಯನ್ನು ಬಗೆಹರಿಸುತ್ತಾರೆ.

ತುರ್ತು ಸಹಾಯ ವಾಣಿ–112 ಜೊತೆಗೆ '112 ಇಂಡಿಯಾ' ಆ್ಯಪ್ ಮೂಲಕವೂ ದೂರು ನೀಡಬಹುದಾಗಿದೆ. ಆ್ಯಪ್ ಡೌನ್‌ಲೋಡ್ ಮಾಡಿಕೊಂಡು 'ಪ್ಯಾನಿಕ್ ಅಲರ್ಟ್' ಎಂಬುದನ್ನು ಕ್ಲಿಕ್ ಮಾಡಿದರೆ ತಕ್ಷಣವೇ ಮಾಹಿತಿ ಕಂಟ್ರೋಲ್ ರೂಂಗೆ ರವಾನೆ ಆಗಲಿದೆ. ಬಳಿಕ ಕಂಟ್ರೋಲ್ ರೂಂನಿಂದಲೇ ತಮ್ಮ ಮೊಬೈಲ್ ನಂಬರ್‌ಗೆ ಕರೆ ಬರಲಿದೆ. ಒಂದು ವೇಳೆ ಕರೆ ಸ್ವೀಕರಿಸಲು ಸಾಧ್ಯವಾಗದಿದ್ದರೆ ▶ 8ನೇ ಪುಟಕ್ಕೆ



ಜು.7ರಂದು ಮುಂಜಾನೆ 3.16ರ ಸಮಯದಲ್ಲಿ ಐಫೋನ್ ಕಳುವಾದ ಬಗ್ಗೆ ದೂರು ಸ್ವೀಕರಿಸಿದ 112 ಸಿಬ್ಬಂದಿ 5 ನಿಮಿಷದಲ್ಲಿ ಸ್ಥಳಕ್ಕೆ ಭೇಟಿ ನೀಡಿ, ಮೊಬೈಲ್ ಪತ್ತೆ ಹಚ್ಚಿ ವಾರಸುದಾರರಿಗೆ ಹಿಂದಿರುಗಿಸಿರುವುದನ್ನು '112 ಮೈಸೂರು ಸಿಟಿ' ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

“ 112 ಸೇವೆಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಕರೆ ಬಂದ 5–7 ನಿಮಿಷದಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಯನ್ನು ಬಗೆಹರಿಸುವ ಕಾರ್ಯಕ್ಕೆ ಸಿಬ್ಬಂದಿ ಮುಂದಾಗಿದ್ದಾರೆ. ಸೇವೆಯ ಬಗ್ಗೆ ಮತ್ತಷ್ಟು ಜಾಗೃತಿ ಮೂಡಿಸಲು ವಿಶೇಷ ಸಭೆಗಳನ್ನು ಆಯೋಜಿಸುವ ಚಿಂತನೆ ಇದೆ. **–ಎಸ್.ಜಾಹ್ನವಿ, ಡಿಸಿಪಿ**



ಮೈಸೂರು ಮಿತ್ರ

ಚಾಮುಂಡೇಶ್ವರಿ ವರ್ಧಂತಿ: ಮಕ್ಕಳಿಗೆ ಸಮವಸ್ತ್ರ ಹಾಗೂ ಪುಸ್ತಕ ವಿತರಣೆ

ಮೈಸೂರು: ಎಸ್‌ಕೆ ಫೌಂಡೇಶನ್ (ಕಿರಾಳು) ವತಿಯಿಂದ ಚಾಮುಂಡೇಶ್ವರಿ ವರ್ಧಂತಿ ಅಂಗವಾಗಿ ಶಾಲಾ ಮಕ್ಕಳಿಗೆ ಸಮವಸ್ತ್ರ ಹಾಗೂ ಪುಸ್ತಕ ವಿತರಣಾ ಕಾರ್ಯಕ್ರಮವನ್ನು ಜು.10ರಂದು ಬೆಳಗ್ಗೆ 11 ಗಂಟೆಗೆ ಅಕ್ಕನ ಬಳಗ ಶಾಲೆಯಲ್ಲಿ ಏರ್ಪಡಿಸಲಾಗಿದೆ ಎಂದು ಎಸ್‌ಕೆ ಫೌಂಡೇಶನ್ ಅಧ್ಯಕ್ಷ ಸಂತೋಷ್ ಕಿರಾಳು ತಿಳಿಸಿದ್ದಾರೆ. ಮುಖ್ಯ ಅತಿಥಿಗಳಾಗಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಮಾಜ ಸೇವಕ ಪ್ರದೀಪ್ ಸಿಂಗ್, ಮೈಸೂರು ವಿವಿ ಕನಕ ನೌಕರರ ಸಂಘದ ಅಧ್ಯಕ್ಷ ಡಾ.ಬಸವರಾಜ, ಅಕ್ಕನ ಬಳಗ ಶಾಲೆಯ ಹಳೆಯ ವಿದ್ಯಾರ್ಥಿ ರಾಮಾನುಜಂ, ಕಿರಾಳು, ಶಾಲೆ ಮುಖ್ಯ ಶಿಕ್ಷಕಿ ಸುಗುಣಾವತಿ, ಕಾಂಗ್ರೆಸ್ ಮುಖಂಡ ಕಾಡನಹಳ್ಳಿ ಸ್ವಾಮಿಗೌಡ ಇತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಪೌರಾಣಿಕ ನಾಟಕಗಳ ಪ್ರದರ್ಶನ



ಮೈಸೂರು,ಜು.9(ಜಿಎ)–ಕೆಂಪೇಗೌಡ ಜನ್ಮ ದಿನಾಚರಣೆ ಅಂಗವಾಗಿ ಕುರುಕ್ಷೇತ್ರ, ಕೃಷ್ಣ ಸಂಧಾನ ಮತ್ತು ದಕ್ಷ ಯಜ್ಞ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಸಹ ನಿರ್ದೇಶಕಿ ಮತ್ತು ಸಂಯೋಜಕರೂ ಆದ ಸ್ವಪ್ನ ನಾಗರಾಜ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಕನ್ನಡ ಸಂಸ್ಕೃತಿ ಇಲಾಖೆ, ಅರ್ಧನಾರೀಶ್ವರ ಕಲಾಭಿವೃದ್ಧಿ ಟ್ರಸ್ಟ್ ಮತ್ತು ಶ್ರೀ ನುಗ್ಗೆಳ್ಳಮ್ಮ ಕಲಾಸಂಘದ ವತಿಯಿಂದ 12ರವರೆಗೂ ನಗರದ ಟೌನ್ ಹಾಲ್‌ನಲ್ಲಿ ಕುರುಕ್ಷೇತ್ರ, ಕೃಷ್ಣ ಸಂಧಾನ ಮತ್ತು ದಕ್ಷ ಯಜ್ಞನಾಟಕ ಪ್ರದರ್ಶನ ಏರ್ಪಡಿಸಿದ್ದು, ಜು.11ರಂದು ಬೆಳಗ್ಗೆ 11 ಗಂಟೆಗೆ ಇದೇ ಮೊದಲ ಬಾರಿಗೆ ಮಹಿಳೆ ನಿರ್ದೇಶನದಲ್ಲಿ ಕುರುಕ್ಷೇತ್ರ ನಾಟಕ ಪ್ರದರ್ಶನವಾಗಲಿದೆ ಎಂದು ತಿಳಿಸಿದರು.

ಜು.10ರಂದು ಚನ್ನಪಟ್ಟಣದ ಲಕ್ಷ್ಮಿನರಸಿಂಹ ಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿಯವರು ಧರ್ಮರಾಜ್ಯ ಸ್ಥಾಪನೆ ನಾಟಕ ಪ್ರದರ್ಶಿಸಲಿದ್ದಾರೆ. ಹಾಗೇ ಜು.11ರಂದು ನುಗ್ಗೆಳಮ್ಮ ಕಲಾ ಸಂಘದ ವತಿಯಿಂದ ಮಹಿಳಾ ನಿರ್ದೇಶಕಿ ನಿರ್ದೇಶನ ಮಾಡಿರುವ ಕುರುಕ್ಷೇತ್ರ ನಾಟಕ ಪ್ರದರ್ಶನವಾಗಲಿದೆ. ಅಂದು ಸಂಜೆ 4 ಗಂಟೆಗೆ ವೇದಿಕೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.



ರಾಜ್ಯ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷರಾಗಿ ಆಯ್ಕೆಯಾದ ರವಿ ಶಾಸ್ತ್ರಿ ಅವರನ್ನು ಮೈಸೂರು ಬ್ರಾಹ್ಮಣ ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಪತ್ರಕರ್ತ ಅನಿಲ್‌ಕುಮಾರ್, ಉದ್ಯಮಿ ಅಪೂರ್ವ ಸುರೇಶ್, ಜೈರಾಮ್, ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಕಡಕೋಳ ಜಗದೀಶ್, ಸುಚೇಂದ್ರ, ಚಕ್ರಪಾಣಿ, ಶ್ರೀಕಾಂತ್ ಕಶ್ಯಪ್ ಇನ್ನಿತರರು ಉಪಸ್ಥಿತರಿದ್ದರು.

ಆದರ್ಶ ವಿದ್ಯಾಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.9– ಜಿಲ್ಲೆಯ ಎಚ್.ಡಿ.ಕೋಟೆ, ಹುಣಸೂರು, ಕೆ.ಆರ್.ನಗರ, ಮೈಸೂರು ದಕ್ಷಿಣ ವಲಯ, ನಂಜನಗೂಡು ಮತ್ತು ಟಿ.ನರಸೀಪುರ ಬ್ಲಾಕಿನ ಆದರ್ಶ ವಿದ್ಯಾಲಯದಲ್ಲಿ 2023–24ನೇ ಶೈಕ್ಷಣಿಕ ಸಾಲಿಗೆ 7, 8, 9ನೇ ತರಗತಿಯಲ್ಲಿ ಕಾರಣಾಂತರಗಳಿಂದ ಖಾಲಿ ಇರುವ ಸ್ಥಾನಗಳಿಗೆ ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ ಮಾಡಲು ಸದರಿ ಬ್ಲಾಕ್ಗಳ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸಂಬಂಧಿಸಿದ ಶಾಲೆಗಳಿಂದ ನಿಗದಿತ ನಮೂನೆ ಅರ್ಜಿಗಳನ್ನು ಪಡೆದು ಜು.13ರರೊಳಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಎಚ್.ಡಿ ಕೋಟೆಯ ಆದರ್ಶ ವಿದ್ಯಾಲಯದ ಮುಖ್ಯಶಿಕ್ಷಕರ ಮೊ.ಸಂ.9449574590, ಕೆ.ಆರ್.ನಗರದ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರ ಮೊ.ಸಂ. 9988002847, ನಂಜನಗೂಡಿನ ಆದರ್ಶ ವಿದ್ಯಾಲಯದ ಮುಖ್ಯಶಿಕ್ಷಕರ ಮೊ.ಸಂ.9741513007, ಹುಣಸೂರಿನ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರ ಮೊ.ಸಂ.7892118767, ಮೈಸೂರು ದಕ್ಷಿಣ ವಲಯದ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರ ಮೊ.ಸಂ. 9902242111 ಮತ್ತು ಟಿ.ನರಸೀಪುರದ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರ ಮೊ.ಸಂ.9611218858 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಆರೋಗ್ಯ ಇಲಾಖೆಯಲ್ಲಿ ಸಹಾಯಕ ಮಲೇರಿಯಾ ಅಧಿಕಾರಿಯಾಗಿ 38 ವರ್ಷಗಳ ಸುದೀರ್ಘ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಭೀಮಣ್ಣ ಅವರನ್ನು ಜಿಲ್ಲಾ ಸರ್ಕಾರಿ ನೌಕರರ ಸಂಘದ ವತಿಯಿಂದ ಸನ್ಮಾನಿಸಿ, ಬೀಳ್ಕೊಡಲಾಯಿತು. ಈ ವೇಳೆ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು, ಪದಾಧಿಕಾರಿಗಳಾದ ರೇವಣ್ಣ, ಟಿ.ಸತೀಶ್ ಜವರೇಗೌಡ, ರಾಘವೇಂದ್ರ, ಸತೀಶ್ ಕುಮಾರ್, ರಮೇಶ್, ರಘು, ಬಸವರಾಜ್ ಇದ್ದರು.

ಗಾಂಜಾ ಸರಬರಾಜು; ಆರೋಪಿಗೆ 10 ವರ್ಷ ಸಜೆ, ಲಕ್ಷ ರೂ. ದಂಡ

ಮೈಸೂರು,ಜು.9–ಮೈಸೂರಿಗೆ ಗಾಂಜಾ ಸರಬರಾಜು ಮಾಡುತ್ತಿದ್ದ ಆಂಧ್ರಪ್ರದೇಶದ ಗಾಂಜಾ ಮಾರಾಟಗಾರನಿಗೆ ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿ ಅವರು 10 ವರ್ಷ ಕಠಿಣ ಶಿಕ್ಷೆ ಮತ್ತು ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಆಂಧ್ರಪ್ರದೇಶದ ವಿಶಾಖಪಟ್ನಂ ನಿವಾಸಿ ಬೆನೋತ್ ವೆಂಕಣ್ಣ(47) ಶಿಕ್ಷೆಗೆ ಗುರಿಯಾದವನಾಗಿದ್ದು, ಈತ ಮೈಸೂರಿನ ಕೆಲವರಿಗೆ ಸಗಟಾಗಿ ಗಾಂಜಾ ಸರಬರಾಜು ಮಾಡುತ್ತಿದ್ದ ಎಂದು ಹೇಳಲಾಗಿದೆ. 2021ರ ಜ.7ರಂದು ಭಾತ್ಮೀದಾರರು ನೀಡಿದ ಖಚಿತ ಮಾಹಿತಿ ಮೇರೆಗೆ ಉದಯಗಿರಿ ಠಾಣೆಯ ಅಂದಿನ ಇನ್ಸ್‌ಪೆಕ್ಟರ್ ಎಂ.ಎಂ. ಪೂಣಚ್ಚ, ಸಬ್‌ಇನ್ಸ್‌ಪೆಕ್ಟರ್ ಮದನ್ ಕುಮಾರ್ ಹಾಗೂ ಸಿಬ್ಬಂದಿ ಸಾತಗಳ್ಳಿ ಬಸ್ ಡಿಪೋ ಬಳಿ ಈತನನ್ನು ವಶಕ್ಕೆ ಪಡೆದು ಆತನ ಬಳಿ ಇದ್ದ ಸೂಟ್‌ಕೇಸ್, ಬ್ಯಾಗನ್ನು ಪರಿಶೀಲಿಸಿದಾಗ ವಿವಿಧ ಗಾತ್ರದ ಟೇಪ್‌ಗಳಲ್ಲಿಸುತ್ತಿದ್ದ ಪೊಟ್ಟಣಗಳಲ್ಲಿ ಒಟ್ಟು 22 ಕೆ.ಜಿ. ಗಾಂಜಾ ಪತ್ತೆಯಾಗಿತ್ತು. ಆತನನ್ನು ವಿಚಾರಣೆಗೊಳಪಡಿಸಿದಾಗ ತಾನು ಕಳೆದ 2 ವರ್ಷದ ಹಿಂದೆ ರಾಜೀವ್‌ನಗರದ ಅಹಮದ್ ಪಾಷ ಎಂಬಾತನಿಗೆ ಗಾಂಜಾ ಮಾರಾಟ ಮಾಡಿದ್ದು, ಈಗ ಆತನಿಗೆ ಈ ಗಾಂಜಾವನ್ನು ಮಾರಾಟ ಮಾಡಲು ಬಂದಿದ್ದು, ಆತನ ಮನೆ ಗುರುತು ಸಿಗದೆ ಹುಡುಕುತ್ತಿದ್ದೆ ಎಂದು ಪೊಲೀಸರಿಗೆ ತಿಳಿಸಿದ್ದಾನೆ.

ಗಾಂಜಾ ವಶಪಡಿಸಿಕೊಂಡು ಆತನನ್ನು ಬಂಧಿಸಿದ್ದ ಇನ್ಸ್‌ಪೆಕ್ಟರ್ ಪೂಣಚ್ಚ ಅವರ ತಂಡ ಪ್ರಕರಣ ದಾಖಲಿಸಿತ್ತು. ನಂತರ ಈ ಠಾಣೆಗೆ ಸಬ್ ಇನ್ಸ್‌ಪೆಕ್ಟರ್ ಆಗಿ ಜಯಕೀರ್ತಿ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಚಿಣ್ಣಪ್ಪ ವಾದ ಮಂಡಿಸಿದ್ದರು.

ಎ.ಜೆ.ರಾಬರ್ಟ್ ನಿಧನ



ಮೈಸೂರು,ಜು.9–ಮೈಸೂರಿನ ರಾಮಕೃಷ್ಣ ನಗರದ ನಿವಾಸಿ ಎ.ಜೆ.ರಾಬರ್ಟ್(68) ಶನಿವಾರ ನಿಧನರಾದರು. ಮೃತರು ಪತ್ನಿ ರೋಸಿ, ಮಕ್ಕಳು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಸ್ಟರ್ಲಿಂಗ್ ಥಿಯೇಟರ್ ಹಿಂಭಾಗದಲ್ಲಿರುವ ಮೈಸೂರು ದಕ್ಷಿಣ ಸೆಮೆಂಟ್ರಿಯಲ್ಲಿ ನಾಳೆ (ಜು.10) ಬೆಳಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ವಿದ್ಯಾರ್ಥಿನಿಲಯಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತರ ದಿಢೀರ್ ಭೇಟಿ

● ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ● ಆಹಾರ ಗುಣಮಟ್ಟ, ಸ್ವಚ್ಛತೆ ಪರಿಶೀಲಿಸಿದ ಆಯುಕ್ತ ಕೆ.ಎ.ದಯಾನಂದ





ಮೈಸೂರು,ಜು.9(ಎಂಟಿವೈ)– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳಿಗೆ ಇಲಾಖೆ ಆಯುಕ್ತ ಕೆ.ಎಂ. ದಯಾನಂದ ಅವರು ದಿಢೀರ್ ಭೇಟಿ ನೀಡಿ, ಸ್ವಚ್ಛತೆ ಹಾಗೂ ಆಹಾರ ಗುಣಮಟ್ಟವನ್ನು ಪರಿಶೀಲಿಸಿ ವಿದ್ಯಾರ್ಥಿಗಳಿಂದ ಕುಂದುಕೊರತೆ ಆಲಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಹಿಳಾ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಹಾಸ್ಟೆಲ್ ಹಾಗೂ ಬೋಗಾದಿಯಲ್ಲಿರುವ ಮೆಟ್ರಿಕ್ ನಂತರದ ಬಾಲಕರ ಹಾಸ್ಟೆಲ್‌ಗಳಿಗೆ ಧಿಡೀರ್ ಬೇಟಿ ನೀಡಿ ಪರಿಶೀಲಿಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ವಿದ್ಯಾರ್ಥಿಗಳು ಹಾಸ್ಟೆಲ್‌ಗೆ ಸ್ವಂತಃ ಕಟ್ಟಡ, ಹೆಚ್ಚುವರಿ ಕೊಠಡಿಗಳ ಅವಶ್ಯಕತೆ ಇರುವುದಾಗಿ ಆಯುಕ್ತರಿಗೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತ ದಯಾನಂದ, ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಿಗೆ ಹೆಚ್ಚಿನ ಬೇಡಿಕೆ ವ್ಯಕ್ತವಾಗುತ್ತಿದ್ದು, ವಿದ್ಯಾರ್ಥಿಗಳ ಬೇಡಿಕೆಗೆ ಸ್ಪಂಧಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಮೈಸೂರಲ್ಲಿ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಿದ್ದು, ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ. ಆ ಕಾರಣದಿಂದಲೇ ಮೈಸೂರಲ್ಲಿ ಶಿಕ್ಷಣ ಪಡೆಯಲು ರಾಜ್ಯದ ವಿವಿಧ ಜಿಲ್ಲೆಗಳಿಂದ ವಿದ್ಯಾರ್ಥಿಗಳು ಮೈಸೂರಿಗೆ ಆಗಮಿಸುತ್ತಿದ್ದಾರೆ. ಆ ಕಾರಣದಿಂದ ಹಾಸ್ಟೆಲ್‌ಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ ಎಂದರು.

ವಿದ್ಯಾರ್ಥಿಗಳಿಗೆ ಗುಣಮಟ್ಟದ ಸೇವೆ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. ಉತ್ತಮ ಆಹಾರ, ಸ್ವಚ್ಛತೆ ಕಾಪಾಡಲು ಕ್ರಮ ಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಬೇಡಿಕೆಗೆ ಅನುಗುಣವಾಗಿ ಹಾಸ್ಟೆಲ್‌ಗಳ ಸಂಖ್ಯೆ ಹೆಚ್ಚಳಕ್ಕೂ ಚಿಂತಿಸಲಾಗಿದೆ. ಬೋಗಾದಿ ಹಾಸ್ಟೆಲ್‌ನಲ್ಲಿ ಹೆಚ್ಚುವರಿ ಕೊಠಡಿ ನಿರ್ಮಿಸಲು 20 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ. ಕೆ.ಆರ್.ನಗರದಲ್ಲಿ ಅರಸು ಭವನದ ಕಾಮಗಾರಿ ಮುಗಿಯುವ ಹಂತದಲ್ಲಿದ್ದು, ಅಲ್ಲಿಯೆ ತಾಲ್ಲೂಕು ಕಚೇರಿ ಕಾರ್ಯಾರಂಭ ಮಾಡಲಾಗುವುದು ಎಂದು ತಿಳಿಸಿದರು.

ಇಲಾಖೆಯ ಹಾಸ್ಟೆಲ್‌ಗಳು ಉತ್ತಮವಾಗಿವೆ. ವಾರ್ಡನ್‌ಗಳು ಇನ್ನೂ ಹೆಚ್ಚಿನ ಗಮನ ಹರಿಸಿ ಶುಚಿತ್ವ ಹಾಗು ಗುಣಮಟ್ಟದ ಆಹಾರ ಕೊಡಲು ಪ್ರಯತ್ನಿಸಬೇಕು. ವಿದ್ಯಾಥಿಗಳು ಸರ್ಕಾರದ ಸವಲತ್ತುಗಳನ್ನು ಉಪಯೋಗಿಸಿಕೊಂಡು ಉತ್ತಮ ನಾಗರೀಕರಾಗಿ ಹೊರ ಹೊಮ್ಮಬೇಕು. ಉನ್ನತ ಶಿಕ್ಷಣ ಪಡೆದ ಬಳಿಕ ಉನ್ನತ ಹುದ್ದೆ ಅಲಂಕರಿಸುವ ಮೂಲಕ ಪೋಷಕರು ಹಾಗೂ ತಾವು ಕಲಿತ ಕಾಲೇಜು ಮತ್ತು ಹಾಸ್ಟೆಲ್‌ಗಳಿಗೂ ಹೆಸರು ತರಬೇಕು ಎಂದು ಇಲಾಖೆ ಆಯುಕ್ತ ಕೆ.ಎಂ.ದಯಾನಂದ ಸಲಹೆ ನೀಡಿದರು. ಈ ಸಂದರ್ಭದಲ್ಲಿ ನಿಲಯಪಾಲಕರಾದ ಮೀನಾ, ಶಿವಕುಮಾರ್ ಉಪಸ್ಥಿತರಿದ್ದರು.

ಪೈ ವಿಸ್ತಾದಲ್ಲಿ ಬ್ರಾಂಡೆಡ್ ಬಟ್ಟೆಗಳ ಮಾರಾಟ ಮೇಳ



ಮೈಸೂರು, ಜು.9– ನಗರದ ಬೆಂಗಳೂರು–ನೀಲಗಿರಿ ರಸ್ತೆಯಲ್ಲಿನ ಗ್ರಾಮಾಂತರ ಬಸ್ ನಿಲ್ದಾಣದ ಎದುರಿನ ಹೋಟೆಲ್ ಪೈ ವಿಸ್ತಾದಲ್ಲಿ ನಡೆಯುತ್ತಿರುವ ಬ್ರಾಂಡೆಡ್ ಬಟ್ಟೆಗಳ ಮಾರಾಟ ಮೇಳ ಜು.12ರಂದು ಮುಕ್ತಾಯಗೊಳ್ಳಲಿದೆ. ಮೇಳವು ಬೆಳಗ್ಗೆ 10ರಿಂದ ರಾತ್ರಿ 10ರವರೆಗೆ ನಡೆಯಲಿದ್ದು, 10 ಸಾವಿರ ವಿವಿಧ ಪ್ರಕಾರದ ಪುರುಷರು, ಮಹಿಳೆಯರು ಮತ್ತು ಮಕ್ಕಳ ಪ್ಯಾಂಟ್‌ಗಳು, ಟೀಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೋ ಇತರೆ ರೆಡಿಮೇಡ್ ಗಾರ್ಮೆಂಟ್ಸ್‌ಗಳು, ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್ ಬಟ್ಟೆಗಳು, ಬ್ರಾಂಡೆಡ್ ಲೇಡಿಸ್ ಕುರ್ತಿಸ್, ಕುರ್ತಿ, ಪಾಶ್ಚಿಮಾತ್ಯ ಬಟ್ಟೆಗಳು ದೊರೆಯಲಿವೆ. ರಾಜಾಸ್ಥಾನಿ ರಾಯಲ್ ಪ್ರಿಂಟೆಡ್ ಬೆಡ್‌ಶೀಟ್‌ಗಳು, ದಿಂಬಿನ ಕವರ್‌ಗಳು, ಸೋಫಾ ಕವರ್‌ಗಳು ರಿಯಾಯಿತಿ ದರದಲ್ಲಿ ದೊರೆಯಲಿವೆ.

ಕವಿಗಳಿಂದ ಮಾತ್ರ ಸೃಷ್ಟಿ ಮರುಸೃಷ್ಟಿ



ಮೈಸೂರು, ಜು.9(ಜಿಎ)–ಸೃಷ್ಟಿಯನ್ನು ಮರುಸೃಷ್ಟಿ ಮಾಡುವವರು ಕವಿ ಮಾತ್ರ ಎಂದು ಮಹಾರಾಜ ಕಾಲೇಜು ಕನ್ನಡ ವಿಭಾಗದ ಪ್ರಾಧ್ಯಾಪಕಿ ಡಾ. ಷಹಸೀನ ಬೇಗಂ ಅಭಿಪ್ರಾಯಪಟ್ಟರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಲೇಖಕಿ ತ್ರಿವೇಣಿ ಅವರು ರಚಿಸಿರುವ 'ಕಂಚುವಾಳ ದಾಸವಾಳ' ಎಂಬ ಕವನ ಸಂಕಲನದ ವಿಶ್ಲೇಷಣೆ ವೇಳೆ ಮಾತನಾಡಿದ ಅವರು, ಕವನ ಸಂಕಲನದಲ್ಲಿ 48 ಕವನಗಳನ್ನು ರಚಿಸಿದ್ದು, ಪ್ರಕೃತಿ ನಾಶವಾದರೆ, ಮನುಷ್ಯನು ನಾಶವಾಗುತ್ತಾನೆ ಎಂಬುದನ್ನು ವಿವರಿಸುತ್ತ ಪ್ರಕೃತಿಯ ಬಗ್ಗೆ ಕಳವಳದ ಜೊತೆಗೆ ಕಾಳಜಿಯನ್ನು ತೋರಿದ್ದಾರೆ ಎಂದು ತಿಳಿಸಿದ್ದು, ಕೃತಿಯು ಅತ್ಯಂತ ಸರಳವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಭೌತಶಾಸ್ತ್ರಜ್ಞ ಡಾ.ಕೆ.ಎಸ್.ಮಲ್ಲೇಶ್, ಕವಿಯತ್ರಿ ಸಿ.ತ್ರಿವೇಣಿ, ವಸಂತಕುಮಾರ್ ಉಪಸ್ಥಿತರಿದ್ದರು.

ಹಿಂದೂ ಎನ್ನುವುದು ಒಂದು ಧರ್ಮವೇ ಅಲ್ಲ

ತೋಂಟದಾರ್ಯ ಸಿದ್ಧರಾಮ ಸ್ವಾಮೀಜಿ



ಧಾರವಾಡ: ನಾವು ಹಿಂದೂ ವಿರೋಧಿಗಳಲ್ಲ, ಹಿಂದೂ ಎನ್ನುವುದು ಒಂದು ಧರ್ಮವೇ ಅಲ್ಲ ಎಂದು ಗದಗ ತೋಂಟದಾರ್ಯ ಮಠದ ಡಾ.ಸಿದ್ಧರಾಮ ಸ್ವಾಮೀಜಿ ಹೇಳಿದ್ದಾರೆ.

ಧಾರವಾಡದಲ್ಲಿ ಮಾತನಾಡಿದ ಅವರು, ಹಿಂದೂ ಜೀವನ ಪದ್ಧತಿಯಷ್ಟೇ. ಓರ್ವ ಸ್ಥಾಪಕ ಇದ್ದರೆ ಮಾತ್ರ ಅದೊಂದು ಧರ್ಮ ಎನಿಸಿಕೊಳ್ಳುತ್ತದೆ. ಧರ್ಮ ಎಂದರೆ ಅದರದ್ದೇಯಾದ ಸಂವಿಧಾನ ಇರಬೇಕು. ಒಂದೇ ದೇವರನ್ನು ಪೂಜಿಸುತ್ತಿರಬೇಕು. ಈ ಹಿನ್ನೆಲೆಯಲ್ಲಿ ಲಿಂಗಾಯತ ಸ್ವತಂತ್ರ ಧರ್ಮವಾಗಿದೆ. ಬಸವಣ್ಣನವರು ಇದರ ಸ್ಥಾಪಕರು ಎಂದಿದ್ದಾರೆ. ಲಿಂಗಾಯತ ಧರ್ಮಕ್ಕೆ ವಚನ ಸಾಹಿತ್ಯವೇ ಸಂವಿಧಾನವಾಗಿದೆ. ನಾವೆಲ್ಲ ಇಷ್ಟಲಿಂಗವನ್ನು ಅರ್ಚಿಸುವಂತವರಾಗಿದ್ದೇವೆ. ಹಿಂದೂ ಧರ್ಮದಲ್ಲಿ ಓರ್ವ ಪ್ರವರ್ತಕ, ಪ್ರವಾದಿ, ಯಾವುದೇ ನಿರ್ದಿಷ್ಟವಾದ ಗ್ರಂಥ ಇಲ್ಲ. ನಿರ್ದಿಷ್ಟವಾದ ದೇವರಿಲ್ಲ. ಅಲ್ಲಿ 33 ಕೋಟಿ ದೇವರನ್ನು ಪೂಜಿಸುತ್ತಾರೆ. ಅದು ವೈದಿಕ ಧರ್ಮವಾಗಿದೆ. ಅದನ್ನೇ ಹಿಂದೂ ಧರ್ಮ ಎಂದು ಪರಿವರ್ತನೆ ಮಾಡಿಕೊಂಡಿದ್ದಾರೆ ಎಂದಿದ್ದಾರೆ. ಭಗವದ್ಗೀತೆಯಲ್ಲಿ 18 ಅಧ್ಯಾಯಗಳಿವೆ. ಅದರಲ್ಲಿ ಯಾವ ಶ್ಲೋಕದಲ್ಲಿಯೂ ಹಿಂದೂ ಎಂಬ ಪದ ಇಲ್ಲ. ವೇದ, ಉಪನಿಷತ್‌ಗಳಲ್ಲಿ ಆ ಪದದ ಪ್ರಯೋಗ ಆಗಿಲ್ಲ. ಹೀಗಾಗಿ ನಾವು ಸ್ವತಂತ್ರ ಧರ್ಮ ಪಡೆದಲ್ಲಿ ಹಿಂದೂ ವಿರೋಧಿ ಆಗುವುದಿಲ್ಲ ಎಂದಿದ್ದಾರೆ.

ರಾಜ್ಯದಲ್ಲಿ ಮಳೆ ಅವಾಂತರಕ್ಕೆ 21 ಮಂದಿ ಬಲಿ, 47ಕ್ಕೂ ಹೆಚ್ಚು ಜಾನುವಾರು ಸಾವು



ಕಾರವಾರ, ಜು.9– ರಾಜ್ಯದಲ್ಲಿ ಮಳೆ ಸೃಷ್ಟಿಸಿದ ಅವಾಂತರಕ್ಕೆ 21 ಮಂದಿ ಬಲಿಯಾಗಿದ್ದು, 40ಕ್ಕೂ ಹೆಚ್ಚು ಜಾನುವಾರುಗಳು ಮೃತಪಟ್ಟಿವೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಹೇಳಿದ್ದಾರೆ.

ಭಾರೀ ಮಳೆಯಿಂದ ಉಂಟಾದ ಪ್ರವಾಹದಲ್ಲಿ ಕೊಚ್ಚಿ ಹೋಗಿ ಇಬ್ಬರು ಮೃತಪಟ್ಟ ಸಂಬಂಧ ಕುಮಟಾ ತಾಲೂಕಿನ ಬೆಟ್ಕುಳಿ ಗ್ರಾಮಕ್ಕೆ ಭೇಟಿ ನೀಡಿದ ಸಚಿವರು, ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಇದೇ ವೇಳೆ, ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ವಿತರಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರಾವಳಿ ಭಾಗದಲ್ಲಿ ಮಳೆಯಿಂದ ಅವಾಂತರ ಸೃಷ್ಟಿಯಾಗಿದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲೂ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಮಳೆ ಹಾನಿಗೆ ಸರ್ಕಾರ ಪರಿಹಾರ ಕೊಡಲು ಸಿದ್ಧವಿದ್ದು, ಹಾನಿಯಾದ ಮನೆಗಳಿಗೆ 1.25 ಲಕ್ಷ ಪರಿಹಾರ ನೀಡುತ್ತೇವೆ ಎಂದರು. ರಾಜ್ಯಕ್ಕೆ ಮುಂಗಾರು ಪ್ರವೇಶವಾಗಿದ್ದರೂ ಕೆಲವು ಜಿಲ್ಲೆಗಳಲ್ಲಿ ಮಳೆ ಕೊರತೆ ಇದೆ. ಜುಲೈ ಕೊನೆ ವಾರದವರೆಗೆ ಕಾದು ನೋಡಿ ಮೋಡ ಬಿತ್ತನೆ ಬಗ್ಗೆ ಮಾಹಿತಿ ಪಡೆದು ಕೇಂದ್ರದ ನಿಯಮಗಳ ಅನ್ವಯ ಮೋಡ ಬಿತ್ತನೆ ಬಗ್ಗೆ ಚಿಂತಿಸಲಾಗಿದೆ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರಿಗೆ ಹುಟ್ಟುಹಬ್ಬದ ಸಂಭ್ರಮ





ಮೈಸೂರು,ಜು.9–ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರು ತಮ್ಮ ಹುಟ್ಟುಹಬ್ಬವನ್ನು ಭಾನುವಾರ ತಮ್ಮ ಅಭಿಮಾನಿಗಳೊಂದಿಗೆ ಆಚರಿಸಿಕೊಂಡರು.

ಆರ್.ಟಿ.ನಗರದಲ್ಲಿ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿ, ತಾಯಿ ನಾಗಮ್ಮನವರ ಆಶೀರ್ವಾದ ಪಡೆದು ಅಭಿಮಾನಿಗಳು ತಂದಿದ್ದ ಕೇಕ್ ಕತ್ತರಿಸಿ ಸಿಹಿ ಹಂಚಿ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡು ಮಾತನಾಡಿದ ಅವರು, ಮೈಸೂರು–ಚಾಮರಾಜನಗರದ ಜನರ ಆಶೀರ್ವಾದದಿಂದ ಇಂದು ನಾನು ಎಂಎಲ್‌ಸಿ ಆಗಿದ್ದೇನೆ. ಅಧಿಕಾರ ಇರಲಿ ಇಲ್ಲದಿರಲಿ ಅವರ ಪ್ರೀತಿಗೆ ನಾನು ಚಿರಋಣಿಯಾಗಿರುತ್ತೇನೆ. ಮಾಜಿ ಸಚಿವ ಸಾ.ರಾ.ಮಹೇಶ್, ಆಶೀರ್ವಾದ, ಮಾಜಿ ಶಾಸಕ ದಿವಂಗತ ಶಂಕರಲಿಂಗೇಗೌಡರ ಮಾರ್ಗದರ್ಶನ, ಸುತ್ತೂರು ಶ್ರೀಗಳ ಸಮಯ ಪಾಲನೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ದೇವರನ್ನು ನಾವು ನೋಡಿಲ್ಲ, ಜನರ ಮುಖಾಂತರ ದೇವರು ನಮಗೆ ಆಶೀರ್ವಾದ ಮಾಡುತ್ತಿದ್ದಾರೆ. ಆ ಜನರಿಗೆ ನಾನು ಮತ್ತು ನನ್ನ ಸಂಸಾರ ಕೃತಜ್ಞರಾಗಿರುತ್ತೇವೆ ಎಂದ ಅವರು, ಮಾಜಿ ಸಚಿವರಾದ ಸಾ.ರಾ.ಮಹೇಶ್, ಸಿ.ಎಸ್. ಪುಟ್ಟರಾಜು ಕುಪೇಂದ್ರರೆಡ್ಡಿ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮನೆಯಿಂದಲೂ ಶುಭಾಷಯ ತಿಳಿಸಿರುತ್ತಾರೆ ಎಂದರು. ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಜೆ.ದ್ವಾರಕೀಶ್, ಅಮ್ಮ ಸಂತೋಷ್, ಮಂಜೇಗೌಡರ ಪುತ್ರ ಭರತ್ ಮಂಜೇಗೌಡ, ದಿನೇಶ್ ಗೌಡ, ಸಿ.ಬಿ.ಲೋಕೇಶ್, ಶಿವಕುಮಾರ್, ಅನಿಲ್, ಅಪೆಕ್ಸ್ ಶ್ರೀನಿವಾಸ್, ಶಿವಣ್ಣ ಸೇರಿದಂತೆ ಮಂಜೇಗೌಡರ ನೂರಾರು ಅಭಿಮಾನಿಗಳು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.7.2023 ಸೋಮವಾರ, ಮಳೆ ನಕ್ಷತ್ರ: ಪುನರ್ವಸು 06.07.2023ರಿಂದ 19.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ,
ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಧಾರ್ಮಿಕ ದತ್ತಿ ಇಲಾಖೆ:** ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಮಹೋತ್ಸವ, ಮುಂಜಾನೆ 5.30ಕ್ಕೆ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಸಹಸ್ರನಾಮಾರ್ಚನೆ, ಮಂಗಳಾರತಿ, ಬೆಳಗ್ಗೆ 9.30ಕ್ಕೆ ಮಹಾಮಂಗಳಾರತಿ, ಬೆಳಗ್ಗೆ 10.30ಕ್ಕೆ ಅಮ್ಮನವರಿಗೆ ಚಿನ್ನದ ಪಲ್ಲಕ್ಕಿ ಉತ್ಸವ ಮಂಟಪೋತ್ಸವ, ಪ್ರಸಾದ ವಿನಿಯೋಗ, ರಾತ್ರಿ 8.30ಕ್ಕೆ ಶ್ರೀಯವರಿಗೆ ಉತ್ಸವ ಫಲಪೂಜೆ, ದರ್ಬಾರ್ ಉತ್ಸವ, ಮಂಟಪೋತ್ಸವ, ರಾಷ್ಟ್ರಾಶೀರ್ವಾದ, ಸ್ಥಳ: ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ, ಚಾಮುಂಡಿಬೆಟ್ಟ.


■ **ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ, ಆಟೋ ಚಾಲಕರು ಮತ್ತು ಮಾಲೀಕರು:** 14ನೇ ವರ್ಷದ ಪೂಜಾ ಕಾರ್ಯಕ್ರಮ ಹಾಗೂ ಗಣ್ಯರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ: ಮಾಜಿ ಶಾಸಕ ಎಲ್.ನಾಗೇಂದ್ರ, ಸನ್ಮಾನಿತರು: ಶಾಸಕ ಶ್ರೀವತ್ಸ, ಸ್ಥಳ: ಬೃಂದಾವನ ಬಡಾವಣೆ, ಆಟೋ ಸ್ಟ್ಯಾಂಡ್, 2ನೇ ಹಂತ, 6ನೇ ವಾರ್ಡ್, ಬೆಳಗ್ಗೆ 10.30ರಿಂದ.

■ **ಚಾಮುಂಡೇಶ್ವರಿ ಕಲ್ಯಾಣ ಮಹೋತ್ಸವ ಕಾರ್ಯಕಾರಿ ಸಮಿತಿ:** 55ನೇ ವರ್ಷದ ಶ್ರೀ ಗಿರಿಜಾ ಕಲ್ಯಾಣೋತ್ಸವ ಮತ್ತು ಚಂಡಿಕಾ ಹೋಮ, ಸಂಜೆ 7.30ಕ್ಕೆ ಶಯನೋತ್ಸವ, ತಬಲ: ವಿದ್ವಾನ್ ಎ.ಕಾಂತರಾಜ್ ಸಂಗಡಿಗರಿಂದ ಸುಗಮ ಸಂಗೀತ ಕಾರ್ಯಕ್ರಮ, ಸ್ಥಳ: ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನ, ಕಾಳಮ್ಮನಗುಡಿ ಬೀದಿ, ಮಂಡಿಮೊಹಲ್ಲಾ.

■ **ಪ್ರಜ್ಞಾ ಪ್ರವಾಹ, ರೋಟರಿ ಮೈಸೂರು:** ಭಾರತಕ್ಕೆ ಏಕರೂಪ ನಾಗರಿಕ ಸಂಹಿತೆ ಏಕೆ ಬೇಕು? ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಪ್ರಜ್ಞಾನ ಪ್ರವಾಹ, ರಾಷ್ಟ್ರೀಯ ಕನ್ವೀನರ್ ಜೆ.ನಂದಕುಮಾರ್, ಸ್ಥಳ: ಐಡಿಯಲ್ ಜಾವಾ, ರೋಟರಿ ಸ್ಕೂಲ್, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ದೇಶಿರಂಗ ಸಾಂಸ್ಕೃತಿಕ ಸಂಸ್ಥೆ, ಮೈಸೂರು, ಕನ್ನಡ ಮತ್ತು ಸಂಸ್ಕೃತಿ, ನಿರ್ದೇಶನಾಲಯ, ಬೆಂಗಳೂರು:** ರಂಗ ಮತ್ತು ನೃತ್ಯೋತ್ಸವ ಉದ್ಘಾಟನಾ ಸಮಾರಂಭ, ಉದ್ಘಾಟನೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಮೈಸೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮುಖ್ಯ ಅತಿಥಿಗಳು: ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಇ.ಗೋವಿಂದೇಗೌಡ, ಚಿಂತಕರಾದ ಡಾ.ದಿನಮಣಿ ಬಿ.ಎಸ್. ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಆನಂದಕುಮಾರ್, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ– ಡಾ. ಗಜಾನನ ಶರ್ಮ, 6.40 ಪದಸಂಸ್ಕೃತಿ: ಪ್ರಸ್ತುತಿ– ಪರಮೇಶ್ವರ ವಿ. ಭಟ್, 7.15 ಭಾವಗೀತೆಗಳು: ವೈ.ಕೆ.ಮುದ್ದುಕೃಷ್ಣ, 9.05 ವಸುಧೈವ ಕುಟುಂಬಕಂ– ಭಾರತ G20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: ಧ್ವನಿ ಭಂಡಾರದಿಂದ ಆಯ್ದ ಕಾರ್ಯಕ್ರಮ– ಹೆಸರಾಂತ ಅಂಕಣಕಾರರಾದ ಪ್ರೊ. ಎಚೆಸ್ಕೆ ಅವರೊಂದಿಗೆ ಡಾ.ಪ್ರಧಾನ ಗುರುದತ್ತ ಅವರು ನಡೆಸಿದ್ದ ಸಂವಾದದ 2ನೇ ಭಾಗ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 10.00 ಲಯ ಸಂಭ್ರಮ– "ಮೃದಂಗ ವಾದನ, ಪರಂಪರೆ ಮತ್ತು ವಾದನ ಶೈಲಿ", ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 ದೇವರ ನಾಮ: ಮಾನಸ ನಯನ, 12.45 ನಮ್ಮ ಆರೋಗ್ಯ: ವಿಶ್ವ ಜನಸಂಖ್ಯಾ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ಡಾ. ಅಂಕಪ್ಪ ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ– ಜೆ.ಎನ್. ಧರಿತ್ರಿ, 3.00 ಹೆಚ್.ಟಿ. ಹರೀಶ್: ಸ್ಯಾಕ್ಸೋಫೋನ್ ವಾದನ.

ಸಂಜೆ: 4.00 ಮಹಿಳಾರಂಗ 'ಡಾಕ್ಟರ್ ಸಮಯ' ವಿಷಯ– ಇಳಿವಯಸ್ಸಿನವರನ್ನು ಕಾಡುವ ಮರೆವು, ಚಿಕಿತ್ಸೆ ಹಾಗೂ ಮನೆಯವರ ಸಹಕಾರ. ಭಾಗವಹಿಸುವ ವೈದ್ಯರು– ಡಾ. ಶಶಿರೇಖಾ, 4.45 ಹಿಂದಿ ಪಾಠ: ಡಾ. ಮಾಧವಿ ಭಂಡಾರಿ, 6.55 ಕೃಷಿರಂಗ: ಕಿಸಾನ್ ವಾಣಿ– ಮೈಸೂರು ಜಿಲ್ಲೆ ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಆವರಣದಲ್ಲಿ ನಡೆದ ಸಾವಯುವ ಸಂಪದ ಬಾನುಲಿ ಸರಣಿಯ ಉದ್ಘಾಟನಾ ಸಮಾರಂಭದ ಬಾನುಲಿ ವರದಿ. ಪ್ರಸ್ತುತಿ– ಎನ್. ಕೇಶವಮೂರ್ತಿ.

ರಾತ್ರಿ: 9.30 ಹಳ್ಳಿ ಹಾಡು: ಪ್ರಸ್ತುತಿ– ಅಬ್ದುಲ್ ರಶೀದ್, 10.00 ನಾಟಕ, 10.30 ಸವಿನೆನಪು.



ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ನಕ್ಕರೆ ಅದೇ ಸ್ವರ್ಗ

ಹೆಂಡತಿ ರೀ... ಕೆಲಸದವಳ ಹತ್ತಿರ ಏನಾದರೂ, ತರ್ಲೆ ಮಾಡಿದ್ರಾ?
ಗಂಡ : ಯಾಕೆ....ಏನಾಯ್ತು...?
ಹೆಂಡತಿ : ಇಷ್ಟು ದಿನ 'ಅಮ್ಮ' ಎಂದು ಕರೆಯುತ್ತಿದ್ದವಳು.. ಈಗ 'ಅಕ್ಕ' ಅಂತ ಕರೆಯುತ್ತಿದ್ದಾಳೆ....

ಮೈಸೂರು ಮಿತ್ರ

ಸೋಮವಾರ, 10 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಒಬ್ಬ ಶಾಂತ ಸ್ವಭಾವದ ವ್ಯಕ್ತಿಯ ಮನಸ್ಸು, ಅತ್ಯಂತ ಶಕ್ತಿಯುತವಾಗಿರುತ್ತದೆ. ಎಂತಹ ಸಂದರ್ಭದಲ್ಲೂ ಧೈರ್ಯಗೆಡುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗಣೇಶನನ್ನು ಮಾಡಲು ಹೋಗಿ ಅವರಪ್ಪನನ್ನು ಮಾಡಿದನಂತೆ...

ನಿಮ್ಮ ಪತ್ರಗಳು

ಕರ್ನಾಟಕದ ಮೇಲೆ ಬರದ ಕಾರ್ಮೋಡ

ಮಾನ್ಯರೆ,

ಮಳೆ ಎಂದರೆ ಜೀವನ, ಹೊಸ ಸೃಷ್ಟಿಗೆ ನೀರು ಮೂಲ, ಮಳೆಯಿದ್ದರೆ ಬೆಳೆ, ಬೆಳೆಯಿದ್ದರೆ ಬದುಕು, ಪ್ರಸುತ್ತ ಕರ್ನಾಟಕ ರಾಜ್ಯದಲ್ಲಿ ಬರದ ಕಾರ್ಮೋಡ ಕವಿದಿದ್ದು, ರೈತರು ಮತ್ತು ಸಾಮಾನ್ಯ ಜನಕ್ಕೆ ಅತಂಕವನ್ನುಂಟು ಮಾಡಿದೆ . ವಾಡಿಕೆಯಂತೆ ಮೇ ಕೊನೆಯ ವಾರ ಅಥವಾ ಜೂನ್ ವೊದಲ ವಾರದಲ್ಲಿ ರಾಜ್ಯಕ್ಕೆ ಮುಂಗಾರಿನ ಆಗಮನವಾಗುತ್ತಿತ್ತು.

ಆದರೆ ಜೂನ್ ಮುಗಿದು ಜುಲೈ ಪ್ರಾರಂಭವಾದರೂ ಮುಂಗಾರು ಮರಿಚೀಕೆ ಯಂತಾಗಿದೆ. ಭಾರತದ ಬೇಸಾಯ ಮಳೆಯೊಂದಿಗಿನ ಜೂಜಾಟವಿದ್ದಂತೆ ಎಂಬ ಮಾತು ಅಕ್ಷರಶಃ ನಿಜವಾಗಿದೆ.ಮಳೆಯಿಲ್ಲದೆ ಅಣೆಕಟ್ಟುಗಳಲ್ಲಿ ನೀರಿನ ಪ್ರಮಾಣ ದಿನದಿಂದ ದಿನಕ್ಕೆ ಕುಸಿಯುತ್ತಿದ್ದು, ಹೀಗೆ ಮಳೆ ಬಾರದಿದ್ದರೆ ಬೆಳೆ ಬೆಳೆಯುವುದು ಕನಸಿನ ಮಾತಾಗಿ ಕುಡಿಯುವ ನೀರಿಗೂ ತೊಂದರೆಯಾಗಬಹುದು.

ಮಳೆ ಬಾರದೆ ಬೆಳೆಯಿಲ್ಲದ ಪರಿಣಾಮವಾಗಿ ದಿನ ನಿತ್ಯ ಬಳಕೆಯ ವಸ್ತುಗಳಾದ ಅಕ್ಕಿ, ಬೇಳೆ, ತರಕಾರಿಗಳ ಬೆಲೆ ಹೆಚ್ಚುತ್ತಿದ್ದು ಸಾಮಾನ್ಯ ಜನರ ಬದುಕು ದುಸ್ತರವಾಗಿದೆ. ರಾಜ್ಯದಲ್ಲಿ ಮಳೆ ಕೊರತೆಯ ಪ್ರಮಾಣ ಶೇ.58 ರಷ್ಟಿದ್ದು, ಕರ್ನಾಟಕ ರಾಜ್ಯದ 50 ವರ್ಷಗಳ ಇತಿಹಾಸದಲ್ಲಿ ಈ ವರ್ಷವೆ ಅಧಿಕ ಮಳೆಯ ಕೊರತೆಯೆಂದು ದಾಖಲಾಗಿದೆ. ರಾಜ್ಯದ 31 ಜಿಲ್ಲೆಗಳಲ್ಲಿ 16 ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವುದು ಆತಂಕಕಾರಿಯಾಗಿದೆ.

ಮಳೆಯ ಕೊರತೆಯಿಂದಾಗಿ ರಾಜ್ಯದಲ್ಲಿ ಬಿತ್ತನೆಯ ಪ್ರಮಾಣ ಶೇ.12ರಷ್ಟಿದ್ದು, ಮುಂದಿನ ದಿನಗಳಲ್ಲಿ ಬೆಳೆಯ ಅಬಾವ ತಲೆದೋರುವ ಲಕ್ಷಣಗಳು ಹೆಚ್ಚಾಗಿದೆ. ಮಳೆ ಬಾರದೆ ಬರಗಾಲ ಪರಿಸ್ಥಿತಿ ನಿರ್ಮಾಣವಾದರೆ ಹಲವಾರು ಸಮಸ್ಯೆಗಳು ತಲೆದೋರಬಹುದು. ಉದಾಹರಣೆಗೆ: ಪ್ರಾಣಿಗಳಿಗೆ ಮೇವಿನ ಕೊರತೆ, ಕುಡಿಯುವ ನೀರಿನ ಕೊರತೆ, ಅಹಾರ ಧಾನ್ಯಗಳ ಬೆಲೆ ಏರಿಕೆಯಂತಹ ಸಮಸ್ಯೆಗಳು ಎದುರಾಗಲಿದೆ. ರೈತರಿಗೆ ಪರಿಹಾರ ಒದಗಿಸಬೇಕಾಗಬಹುದು, ಅದಕ್ಕಾಗಿ ಸರ್ಕಾರ ಈಗಲೆ ಮುನ್ನೆಚ್ಚರಿಕೆಯಾಗಿ, ಮಳೆ ಬಾರದಿದ್ದರೆ ಉಂಟಾಗುವ ಬರವನ್ನು ಎದುರಿಸಲು ಪರಿಹಾರ ಕ್ರಮಗಳ ಬಗ್ಗೆ ಕಾರ್ಯಪ್ರವೃತ್ತರಾಗ ಬೇಕಾಗುತ್ತದೆ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿ ಯಾಗಿದ್ದ ಸಮಯದಲ್ಲಿನ ಬರದ ಸಮಸ್ಯೆಯನ್ನು ನಿವಾರಿಸಲು 'ಮೋಡ ಬಿತ್ತನೆ'ಯಂತಹ ಕ್ರಮವನ್ನು ಅನುಸರಿಸಿದ್ದರು. ಮಳೆ ಬರದೆಯಿದ್ದರೆ ವೈಜ್ಞಾನಿಕ ವಾಗಿ 'ಮೋಡ ಬಿತ್ತನೆಯಂತಹ' ಕ್ರಮಗಳನ್ನು ಅನುಸರಿಸಿ ಬರವನ್ನು ಎದುರಿಸಬೇಕು. ರಾಜ್ಯದ ಪ್ರತಿಯೊಬ್ಬರು ತಮ್ಮ ತಮ್ಮ ಧಾರ್ಮಿಕ ನಂಬಿಕೆಗಳಂತೆ ಮಳೆಗಾಗಿ ಪ್ರಾರ್ಥಿಸುತ್ತಿದ್ದು, ಮಳೆಯ ಆಗಮನಕ್ಕೆ ಕಾಯುತ್ತಿದ್ದಾರೆ. ಅತಿ ಶೀಘ್ರವಾಗಿ ರಾಜ್ಯಕ್ಕೆ ಮಳೆಯ ಆಗಮನವಾಗಿ ಬರದಿಂದ ಮುಕ್ತಿ ಸಿಗಲೆಂದು ರಾಜ್ಯದ ಸಮಸ್ತ ಜನರ ಪರವಾಗಿ ದೇವರಲ್ಲಿ ಪ್ರಾರ್ಥಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.

ಅನ್ನಭಾಗ್ಯದ ಅಕ್ಕಿ ಬೇಕೋ, ದುಡ್ಡು ಬೇಕೋ ಎಂಬ ಅಭಿಪ್ರಾಯ ಸಂಗ್ರಹಿಸಿ

ಮಾನ್ಯರೆ,

ಕಳ್ಳ ಸಂತೆಯಲ್ಲಿ ಅನ್ನಭಾಗ್ಯ ಅಕ್ಕಿಗಳ ಮಾರಾಟ ಜೋರಾಗಿದ್ದೂ, ಟಿವಿಯಲ್ಲಿ, ಪತ್ರಿಕೆಯಲ್ಲಿ ಅನ್ನಭಾಗ್ಯ ಅಕ್ಕಿ ಅಕ್ರಮ ಸಾಗಾಟ ಎಂಬ ಸುದ್ದಿ ಸಾಮಾನ್ಯವಾಗಿ ಓದುತ್ತಿರುತ್ತೇವೆ. ಅಕ್ರಮ ಅಕ್ಕಿ ಮಾರಾಟ ಮಾಡುತ್ತಿರುವ ಅಂತ್ಯೋದಯ, ಬಿಪಿಎಲ್ ಪಡಿತರ ಕುಟುಂಬಗಳಿಗೆ ಪರ್ಯಾಯ ವ್ಯವಸ್ಥೆ ರಾಜ್ಯ ಸರ್ಕಾರ ಮಾಡಬೇಕಿದೆ. ಅನ್ನಭಾಗ್ಯ ಅಕ್ಕಿ ಪಡೆಯುವ ಕೆಲ ಕುಟುಂಬಗಳು ಒಂದು ಕಿಲೊಗೆ 10–12 ರೂ.ಗೆ ಕಳ್ಳ ಸಂತೆಯಲ್ಲಿ ಅಕ್ಕಿ ಮಾರಾಟ ಮಾಡುತ್ತಿದ್ದಾರೆ. ಸರ್ಕಾರ ಪ್ರತಿ ಕೆಜಿಗೆ 32 ರೂ. ನೀಡಿ ಅಕ್ಕಿ ಖರೀದಿಸುತ್ತಿದೆ. ಯಾವ ಅಂತ್ಯೋದಯ, ಬಿಪಿಎಲ್ ಕುಟುಂಬಗಳು ನಮಗೆ ಅಕ್ಕಿ ಬೇಡ ಹಣ ನೀಡಿ ಎಂದರೇ ಅಂತಹವರ ಖಾತೆಗೆ ಸರ್ಕಾರ ಹಣ ನೀಡಬೇಕು. ಯಾವ ಅಂತ್ಯೋದಯ, ಬಿಪಿಎಲ್ ಕುಟುಂಬಗಳು ನಮಗೆ ಹಣ ಬೇಡ ಅಕ್ಕಿ ನೀಡಿ ಎಂದರೇ ಅಂತಹವರಿಗೆ ಅನ್ನಭಾಗ್ಯ ಅಕ್ಕಿ ನೀಡುವಂತಹ ವ್ಯವಸ್ಥೆ ಸರ್ಕಾರ ಮಾಡಿದ್ರೆ, ಕಳ್ಳಸಂತೆಯಲ್ಲಿ ಕಡಿಮೆ ಬೆಲೆಗೆ ಮಾರಾಟವಾಗುವ ಅಕ್ಕಿಯನ್ನು ಉಳಿಸಿಕೊಳ್ಳುವ ಕೆಲಸ ಪ್ರಾಥಮಿಕ ಹಂತದಲ್ಲಿ ಸಾಧ್ಯವಾಗುತ್ತದೆ. ಕೇಂದ್ರ ಸರ್ಕಾರ ಹಾಗೂ ರಾಷ್ಟ್ರೀಯ ಆಹಾರ ಇಲಾಖೆ ಆಹಾರ ದಾಸ್ತಾನುಗಳ ಕೊರತೆಯಿದೆ. ಹೆಚ್ಚುವರಿ ಅಕ್ಕಿ ನೀಡಲು ಸಾಧ್ಯವಿಲ್ಲವೆಂಬ ನಿರ್ಧಾರಕ್ಕೆ ಬಂದಿದೆ. ಬೇರೆ–ಬೇರೆ ರಾಜ್ಯಗಳಲ್ಲೂ ಅಕ್ಕಿ ಬೆಲೆ ದುಬಾರಿಯಾಗಬಹುದು ಈ ಕಾರಣಕ್ಕಾಗಿ ಅಂತ್ಯೋದಯ, ಬಿಪಿಎಲ್ ಕಾರ್ಡ್‌ದಾರರ ಕುಟುಂಬಗಳಿಂದ ಅನ್ನಭಾಗ್ಯ ಅಕ್ಕಿ ಬೇಕೋ ಅಥವಾ ಅಕ್ಕಿ ಹಣ ಬೇಕೋ ಎಂಬ ಅಭಿಪ್ರಾಯ ಸಂಗ್ರಹಿಸಿ, ಯಾರಿಗೆ ಅನ್ನಭಾಗ್ಯ ಅಕ್ಕಿ ಬೇಕಾಗಿರುತ್ತದೆ ಅಕ್ಕಿ ದಾಸ್ತಾನು ಅಕ್ಕಿ ಸಂಗ್ರಹಿಸಿ, ಅಕ್ಕಿ ಬೇಕೆಂದ ಅಂತ್ಯೋದಯ, ಬಿಪಿಎಲ್ ಕುಟುಂಬಗಳಿಗೆ ಪೂರೈಸಬೇಕು. ಅಕ್ಕಿ ಬೇಡವೆಂದು ಹಣ ಬೇಕೆಂದ ಅಂತ್ಯೋದಯ, ಬಿಪಿಎಲ್ ಕುಟುಂಬಗಳಿಗೆ ಅಕ್ಕಿ ದರ ಪ್ರತಿ ಕೆಜಿಗೆ 32 ರೂ. ಹಣ ಖಾತೆಗೆ ನೀಡುವ ವ್ಯವಸ್ಥೆ ಮಾಡಬೇಕು. ಇದರಿಂದ ಕಳ್ಳ ಸಂತೆಯಲ್ಲಿ ಮಾರಾಟವಾಗ ಅಕ್ಕಿ ರಕ್ಷಿಸಲು ಸಾಧ್ಯವಾಗುದಲ್ಲದೇ, ಅಕ್ಕಿ ದಾಸ್ತಾನಿನ ಕೊರತೆ ಉದ್ಭವಿಸುದಿಲ್ಲ. ಅನ್ನಭಾಗ್ಯ ಅಕ್ಕಿ ಬೇಕೋ ಅಥವಾ ಹಣ ಬೇಕೋ ಎಂಬ ಜನರ ಅಭಿಪ್ರಾಯ ಸಂಗ್ರಹಕ್ಕೆ ಸರ್ಕಾರ ಮುಂದಾಗಬೇಕು. ಅನ್ನಭಾಗ್ಯ ಏಕೇ? ಪ್ರಕರಣವೆಂದೂ ಪರಿಗಣಿಸಿ, ಕಳ್ಳ ಸಂತೆಯಲ್ಲಿ ಮಾರಾಟವಾಗುವ ಅಕ್ಕಿ ಸರ್ಕಾರ ರಕ್ಷಿಸಬೇಕಿದೆ.

–ವೀರೇಶ ಧೂಪದಮಠ

ಸರ್ಕಾರಿ ಶಾಲೆಯು ಅಭಿವೃದ್ಧಿಯಾಗಲಿ

ಮಾನ್ಯರೆ,

ಹಿಂದುಳಿದ ಜಿಲ್ಲೆ ಮತ್ತು ಜಾನಪದದ ತವರೂರಾದ ಚಾಮರಾಜನಗರಕ್ಕೆ ಸೇರಿರುವ ಮರಿಯಾಲ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಲವು ವರ್ಷಗಳ ಹಿಂದೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು, ಆದರೆ ಇತ್ತೀಚಿನ ದಿನಗಳಲ್ಲಿ ಸರ್ಕಾರದಿಂದ ಶಾಲೆಗೆ ಸಿಗುವ ಮೂಲಭೂತ ಸೌಕರ್ಯಗಳು ಮತ್ತು ಕಟ್ಟಡ ಅಭಿವೃದ್ಧಿಯ ಕೊರತೆಯಿಂದ ಈ ಶಾಲೆಯಲ್ಲಿರುವ ಒಂದು ಕಟ್ಟಡ ಸುಮಾರು ವರ್ಷಗಳಿಂದ ಪಾಳು ಬಿದ್ದಿದೆ. ಜೊತೆಗೆ ಈ ಶಾಲೆಯು ಗ್ರಾಮದ ಮುಖ್ಯ ರಸ್ತೆಯಲ್ಲಿದ್ದು ದಿನನಿತ್ಯ ಗ್ರಾಮದ ಜನರು, ಸಾರ್ವಜನಿಕರು ಅಭಿವೃದ್ಧಿಯಾಗದಿರುವ ಕಟ್ಟಡವನ್ನು ಗಮನಿಸಿ ಹಾಗೂ ಕಟ್ಟಡದ ಸುತ್ತಮುತ್ತ ಬೆಳೆದು ನಿಂತಿರುವ ಗಿಡಗಳು ಮತ್ತು ಸ್ವಚ್ಛತೆ ಇಲ್ಲದಿರುವುದನ್ನು ಕಂಡು ಶಾಲೆಗೆ ಹೇಗೆ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಸೇರಿಸಿಯಾರು? ಶಾಲೆಗೆ ಮಕ್ಕಳ ಸಂಖ್ಯೆಯು ಸಹ ಕಡಿಮೆಯಾಗುತ್ತಿದ್ದು, ಸರ್ಕಾರದಿಂದ ದೊರೆಯುತ್ತಿದ್ದ ಸೌಲಭ್ಯಗಳು ಕಣ್ಮರೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಶಾಲೆಯ ಕುಂದುಕೊರತೆಗಳನ್ನು ಪಟ್ಟಿಮಾಡಿ ಉನ್ನತ ಅಧಿಕಾರಿಗಳಿಗೆ ತಲುಪಿಸಿ, ಈ ಕ್ಷೇತ್ರದ ಶಾಸಕರು ಸಹ ಮಾನ್ಯ ಶಿಕ್ಷಣ ಸಚಿವರಿಗೆ ತಲುಪಿಸಿ ಈ ಶಾಲೆಯನ್ನು ಅಭಿವೃದ್ಧಿ ಪಡಿಸಿ ಶಿಕ್ಷಣದಿಂದ ಮಕ್ಕಳನ್ನು ಸಮಾಜದಲ್ಲಿ ಆದರ್ಶ ವ್ಯಕ್ತಿಗಳ ನ್ನಾಗಿಸಲು ಕೈಜೋಡಿಸುವ ಮೂಲಕ ಮಾದರಿಯಾಗಬೇಕು.

–ನಾಗೇಶ್, ಮಾನಸಗಂಗೋತ್ರಿ ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಆಪತ್ತು ತಂದುಕೊಳ್ಳುತ್ತಿರುವ ವಿದೇಶಿ ವ್ಯಾಮೋಹ

> ಇದರಲ್ಲಿ ತಪ್ಪು ಯಾರದ್ದು? ಮಕ್ಕಳನ್ನು ಓದಿಸಿ, ಅವರು ಕೈತುಂಬಾ ಸಂಪಾದಿಸಲಿ ಎಂದು ವಿದೇಶಗಳಿಗೆ ಹೋಗಿ ನೆಲೆಸುವಂತೆ ಮಾಡಿದ್ದು ತಂದೆ-ತಾಯಿಯರ ತಪ್ಪೇ? ಅಥವಾ ಹಣಕ್ಕಾಗಿ ಇಲ್ಲಿನ ಸಂಬಂಧಗಳನ್ನು ಕಳೆದುಕೊಂಡು ವಿದೇಶದಲ್ಲಿ ನೆಲೆಸಿದ ಮಕ್ಕಳ ತಪ್ಪೇ? ಹುಡುಕಿದರೆ ತಪ್ಪು ಇಬ್ಬರಲ್ಲೂ ಕಾಣಿಸುತ್ತದೆ. ವಯಸ್ಸಾದ ಮೇಲೆ ಯಾವ ವೈಭವಕ್ಕಾಗಿ ಹಣ ಬೇಕಾಗುತ್ತದೆ? ತಿನ್ನುವ ಅಲ್ಪಸ್ವಲ್ಪ ಆಹಾರವು ಜೀರ್ಣವಾಗಲು ಕಷ್ಟವಾಗುವ ಕಾಲದಲ್ಲಿ ಮಕ್ಕಳು ತಮ್ಮ ಆರೈಕೆ ಮಾಡಬೇಕು ಎಂದು ಬಯಸದಿರುವ, ಅವರು ವಿದೇಶದಲ್ಲಿ ಚೆನ್ನಾಗಿರಲಿ ಎಂದು ಹೇಳುವ ತಂದೆ-ತಾಯಿಯರ ಮನೋಭಾವ ಹತಾಶೆಯದ್ದು ಎಂಬುದಾಗಿ ಕಂಡುಬರುತ್ತದೆ.

ಇತ್ತೀಚೆಗೆ ಸ್ನೇಹಿತರೊಂದಿಗೆ ಮಾತನಾಡುತ್ತಿದ್ದಾಗ ಈ ಹಿಂದಿನ ಇಪ್ಪತ್ತು–ಮೂವತ್ತು ವರ್ಷಗಳ ಮೈಸೂರಿಗೂ ಈಗಿನ ಮೈಸೂರಿಗೂ ಎಷ್ಟೊಂದು ಬದಲಾವಣೆಯಾಗಿದೆ? ಎಂಬ ಬಗ್ಗೆ ಚರ್ಚೆಯಾಯಿತು. ಹಿಂದೆ ಮೈಸೂರು ಎಂದರೆ ಒಂದು ಪುಟ್ಟದಾದ ಕಾಂಪೌಂಡ್ ಹೊಂದಿರುವ ಮನೆ, ಆ ಮನೆಗೊಂದು ಜಗುಲಿ, ಒಂದೆರಡು ತೆಂಗಿನಮರ, ಒಂದಷ್ಟು ಹೂವಿನ ಗಿಡಗಳು, ಓಡಾಡಲು ಸೈಕಲ್ ಇದಿಷ್ಟೇ ಆಗಿದ್ದರೂ ಅದು ಸ್ವರ್ಗ ಸಮಾನವಾಗಿತ್ತು. ಏಕೆಂದರೆ ಮನೆಯಲ್ಲಿ ತಂದೆ–ತಾಯಿಯರು, ಓದುತ್ತಿರುವ ಮಕ್ಕಳು, ಆಗಾಗ್ಗೆ ಬಂದು ಹೋಗುತ್ತಿದ್ದ ಒಂದಷ್ಟು ನೆಂಟರು, ಮನೆಯಲ್ಲಿ ಆಗಾಗ್ಗೆ ಮಾಡುತ್ತಿದ್ದ ಚಕ್ಕುಲಿ, ಕೋಡುಬಳೆಯ ಘಮ ಇಡೀ ರಸ್ತೆಗೆ ಬರುತ್ತಿದ್ದುದು, ಸಂಜೆ ಆರಕ್ಕೆಲ್ಲಾ ಎಲ್ಲರೂ ಮನೆ ಸೇರುತ್ತಿದ್ದುದು ಇತ್ಯಾದಿ ಇರುತ್ತಿತ್ತು. ಆದರೆ ಈಗ, ಆಗ ಕಟ್ಟಿದ್ದ–ಈಗ ಹಳೆಯದಾದ, ಸುಣ್ಣಬಣ್ಣ ಕಂಡು ಹಲವು ವರ್ಷಗಳಾದ ಮನೆಗಳು, ಹಿಂದಿನ ಮನೆಗಳನ್ನು ಒಡೆದು ಕಟ್ಟಿರುವುದು, ಮನೆಯಲ್ಲಿ ವಯಸ್ಸಾದ ಗಂಡ–ಹೆಂಡತಿಯರು, ಮಾತನಾಡಲು ಜನರೇ ಇಲ್ಲದೆ, ಮನೆಯ ಜಗುಲಿಯ ಮೇಲೆ ಚಿಂತಾಕ್ರಾಂತರಾಗಿ ಕುಳಿತವರು ಕಂಡುಬರುತ್ತಾರೆ. ಮಕ್ಕಳಲ್ಲಿ ಒಂದಷ್ಟು ಜನರು ಕೆಲಸದ ನಿಮಿತ್ತ ಬೆಂಗಳೂರು ಸೇರಿದ್ದರೆ, ಮತ್ತಷ್ಟು ಜನ ಅಮೇರಿಕಾ, ಜರ್ಮನಿ, ಯುಕೆ, ದುಬೈ ಹೀಗೆ ವಿದೇಶಗಳಿಗೆ ಕೆಲಸದ ನಿಮಿತ್ತ ಹಾರಿಹೋಗಿ ಅಲ್ಲೇ ಉಳಿದುಕೊಂಡಿರುವುದು, ಕೆಲವರು ಅಲ್ಲಿನವರನ್ನು ಮದುವೆಯಾಗಿ ಶಾಶ್ವತವಾಗಿ ನೆಲೆಸುವಂತಾಗಿರುವುದು, ಇದರಿಂದಾಗಿ ಈ ಹಿಂದೆ ಕಲಕಲ ಎನ್ನುತ್ತಿದ್ದ ಮನೆಯಲ್ಲಿ ಈಗ ವಯಸ್ಸಾದ ತಂದೆ–ತಾಯಿಯರು ವಾಸ ಮಾಡುವಂತಾಗಿದೆ. ಅವರನ್ನು ತಬ್ಬಲಿ ಮನೋಭಾವ ಕಾಡುತ್ತಿದೆ.

ಇದು ಮೈಸೂರಿನ ಹಳೆಯ ಬಡಾವಣೆಯಾದ ಸರಸ್ವತಿಪುರಂನ ಒಂದು ನೋಟ. ಆದರೆ ಈ ನೋಟ ಇದೀಗ ವಿದ್ಯಾರಣ್ಯಪುರಂ, ಕುವೆಂಪುನಗರ ಮೊದಲಾದೆಡೆಯೂ ಕಂಡುಬರುತ್ತಿದೆ. ಇದಕ್ಕೆಲ್ಲಾ ಕಾರಣ ವಿದೇಶೀ ವ್ಯಾಮೋಹ. ಇಂದಿಗೂ ಇಂತಹ ಬವಣೆಯಲ್ಲೂ ಈ ಹಿರಿಯ ಜೀವಗಳು ಸಣ್ಣಗೆ ನಗುತ್ತಾ ನನ್ನ ಮಗ/ಮಗಳು ಅಮೇರಿಕಾದಲ್ಲಿದ್ದಾರೆ, ಜರ್ಮನಿಯಲ್ಲಿದ್ದಾರೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇದು ಒಂದು ರೀತಿಯಲ್ಲಿ ಅಭಾವ ವೈರಾಗ್ಯವಿದ್ದಂತೆ. ಮಕ್ಕಳನ್ನು ಇವರೇ ಪ್ರೋತ್ಸಾಹಿಸಿ, ಓದಿಸಿ, ವಿದೇಶಗಳಿಗೆ ಕಳುಹಿಸಿ ಈಗ ಅನಾಥ ಪ್ರಜ್ಞೆಯಲ್ಲಿ ಕಾಲ ಕಳೆಯುತ್ತಿದ್ದಾರೆ. ಹೀಗೆ ಹೋದ ಮಕ್ಕಳು ವಾಪಸ್ಸು ಬರುತ್ತಾರೆ ಎಂಬ ಯಾವ ಕುರುಹೂ ಇವರಿಗೆ ಕಂಡು ಬರುವುದಿಲ್ಲ. ಆದರೂ ಇವರ ಬಾಯಿಯಿಂದ ಬರುವ ಮಾತು ನಮ್ಮ ಮಕ್ಕಳು ವಿದೇಶದಲ್ಲಿ ಆರಾಮವಾಗಿದ್ದಾರೆ ಎಂದೇ ಆಗಿರುತ್ತದೆ. ಆರಾಮವಾಗಿದ್ದಾರೆ ಎಂದರೆ ಏನು ಅರ್ಥ ಎಂದು ಕೇಳಬೇಕಾಗುತ್ತದೆ. ಮಕ್ಕಳನ್ನು ಬೆಳೆಸುವುದರ ಮನೋಭಾವ, ಮುಂದೆ ಅವರು ನಮ್ಮನ್ನು ವಯಸ್ಸಾದ ಕಾಲದಲ್ಲಿ ನೋಡಿಕೊಳ್ಳಲಿ ಎಂದೇ ಆಗಿರುತ್ತದೆ. ಜೊತೆಗೆ ನಾವು ಹೇಳುವ ಮತ್ತೊಂದು ಲೋಕಾಭಿರೋಧಿಯಾದ ಮಾತು 'ನಾವು ಪಟ್ಟ ಕಷ್ಟ ನಮ್ಮ ಮಕ್ಕಳು ಪಡಬಾರದು'. ನಮ್ಮ ಜೀವನ ಹೇಗೋ ಆಗಿ ಹೋಯಿತು. ನಮ್ಮ ಮಕ್ಕಳು ವಿದೇಶಗಳಿಗೆ ಹೋಗಿ ಕೈತುಂಬಾ ಸಂಪಾದಿಸಿ ಆರಾಮವಾಗಿರಬೇಕು ಎಂದು. ಇದನ್ನು ನಮಗೆ ನಾವೇ ಮಾಡಿಕೊಳ್ಳುವ ಮೋಸ ಎಂದು ಹೇಳಬಹುದು. ಹಾಗಾದರೆ ನಾವು ಮಕ್ಕಳನ್ನು ವಿದೇಶಗಳಿಗೆ ಮಾರಿಬಿಟ್ಟಿದ್ದೇವೆಯೇ? ಎಂದ ಕೇಳಬೇಕೆನಿಸುತ್ತದೆ. ತಂದೆತಾಯಿಯರು ಅನಾರೋಗ್ಯಪೀಡಿತರಾದಾಗ, ಅವರು ಮೃತರಾದಾಗಲೂ ಈ ಮಕ್ಕಳು ವಿದೇಶಗಳಿಂದ ಬರುವುದಿಲ್ಲ. ಕಾರಣ ಹೇಳುವುದು ನಮಗೆ ರಜೆ ಸಿಗುವುದಿಲ್ಲ ಎಂದು. ಹಾಗಿದ್ದರೆ ಇವರನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಿದ್ದು ಇದೇ ಉದ್ದೇಶದಿಂದಲೇ? ಎಂದು ಕೇಳಬೇಕೆನಿಸುತ್ತದೆ. ಅದರಲ್ಲೂ ವಯಸ್ಸಾದ ತಂದೆ ಸತ್ತ ನಂತರ ಆ ತಾಯಿಯ ಗತಿ ಏನು? ಎಂದು ಈ ಮಕ್ಕಳು ಏಕೆ ಯೋಚಿಸುವುದಿಲ್ಲ ಎಂಬ ಬಗ್ಗೆಯೂ ಜಿಜ್ಞಾಸೆ ಮೂಡುತ್ತದೆ.

ಇದರಲ್ಲಿ ತಪ್ಪು ಯಾರದ್ದು? ಮಕ್ಕಳನ್ನು ಓದಿಸಿ, ಅವರು ಕೈತುಂಬಾ ಸಂಪಾದಿಸಲಿ ಎಂದು ವಿದೇಶಗಳಿಗೆ ಹೋಗಿ ನೆಲೆಸುವಂತೆ ಮಾಡಿದ್ದು ತಂದೆ–ತಾಯಿಯರ ತಪ್ಪೇ? ಅಥವಾ ಹಣಕ್ಕಾಗಿ ಇಲ್ಲಿನ ಸಂಬಂಧಗಳನ್ನು ಕಳೆದುಕೊಂಡು ವಿದೇಶದಲ್ಲಿ ನೆಲೆಸಿದ ಮಕ್ಕಳ ತಪ್ಪೇ? ಹುಡುಕಿದರೆ ತಪ್ಪು ಇಬ್ಬರಲ್ಲೂ ಕಾಣಿಸುತ್ತದೆ. ವಯಸ್ಸಾದ ಮೇಲೆ ಯಾವ ವೈಭವಕ್ಕಾಗಿ ಹಣ ಬೇಕಾಗುತ್ತದೆ? ತಿನ್ನುವ ಅಲ್ಪಸ್ವಲ್ಪ ಆಹಾರವು ಜೀರ್ಣವಾಗಲು ಕಷ್ಟವಾಗುವ ಕಾಲದಲ್ಲಿ ಮಕ್ಕಳು ತಮ್ಮ ಆರೈಕೆ ಮಾಡಬೇಕು ಎಂದು ಬಯಸದಿರುವ, ಅವರು ವಿದೇಶದಲ್ಲಿ ಚೆನ್ನಾಗಿರಲಿ ಎಂದು ಹೇಳುವ ತಂದೆ–ತಾಯಿಯರ ಮನೋಭಾವ ಹತಾಶೆಯದ್ದು ಎಂಬುದಾಗಿ ಕಂಡುಬರುತ್ತದೆ.

ಇದಕ್ಕೆ ಸಂಬಂಧಿಸಿದಂತೆ ಓದಿದ ಒಂದೆರಡು ಪ್ರಸಂಗ ನೆನಪಿಗೆ ಬರುತ್ತದೆ. ಮೊದಲನೆಯ ಪ್ರಕರಣದಲ್ಲಿ ಒಬ್ಬ ಸ್ಥಳೀಯ ಯುವಕನಿಗೆ, ಇನ್ನೊಬ್ಬನ ತಂದೆ ಹೇಳುವ ಮಾತು ಎಂದರೆ ನನ್ನ ಮಗ ಅಮೇರಿಕಾದಲ್ಲಿ ಕೆಲಸ ಮಾಡುತ್ತಾ ಇದ್ದಾನೆ ಅವನಿಗೆ 80 ಸಾವಿರ ಡಾಲರ್ ಸಂಬಳ. ಅಂದರೆ ಸುಮಾರು 65 ಲಕ್ಷ ರೂಪಾಯಿ. ನೀನೂ ಏಕೆ ಅಮೇರಿಕಾಕ್ಕೆ ಹೋಗುವ ಪ್ರಯತ್ನ ಮಾಡಬಾರದು? ಬೇಕಿದ್ದರೆ ನನ್ನ ಮಗನನ್ನು ಕೇಳು. ಅವನು ಸಹಾಯ ಮಾಡಬಹುದು' ಎನ್ನುತ್ತಾನೆ. ನಮ್ಮ ದೇಶದ ಬಗ್ಗೆ ಅಭಿಮಾನ ಇರುವ ಈ ಹುಡುಗ ಹೇಳುತ್ತಾನೆ, ಇಲ್ಲ ನನಗೆ ಅಮೇರಿಕಾಕ್ಕೆ ಹೋಗುವ ಆಸೆ ಇಲ್ಲ. ನಾನು ಇಲ್ಲೇ ಸಂತೋಷವಾಗಿದ್ದೇನೆ ಎಂದು. ಅದಕ್ಕೆ ಈ ಹಿರಿಯರ ಪ್ರತಿಕ್ರಿಯೆ ಎಂದರೆ ಹೌದಾ? ಎಲ್ಲರಿಗೂ ಹೋಗೋಕೆ ಸಾಧ್ಯವಿಲ್ಲ ಬಿಡು ಎಂದು ವ್ಯಂಗ್ಯವಾಗಿ ನಕ್ಕು ಬಿಡುತ್ತಾರೆ. ಅದಕ್ಕೆ ಈ ಹುಡುಗ ತಾನೂ ನಗುತ್ತಾನೆ. ನೀನು ಯಾಕೆ ನಗುತ್ತಿರುವೆ ಎಂದು ಆ ಹಿರಿಯರು ಕೇಳುತ್ತಾರೆ. ಅದಕ್ಕೆ ಆ ಹುಡುಗ ನೋಡಿ ನನಗೆ ನನ್ನದೇ ಆದ ಲೆಕ್ಕಾಚಾರಗಳಿವೆ. ಬೇರೆ ಬೇರೆ ದೇಶದ ಬದುಕಿಗೆ ಬೇಕಾದ ಖರ್ಚುಗಳು ಬೇರೆಬೇರೆಯದ್ದೇ ಆಗಿರುತ್ತದೆ. ನೀವಿಲ್ಲಿ 10 ರೂಪಾಯಿ ಕೊಟ್ಟರೆ ಒಂದು ಲೋಟ ಕಾಫಿ, ಟಿ ಸಿಗುತ್ತದೆ. ಅದಕ್ಕೆ ಅಮೇರಿಕಾದಲ್ಲಿ ನೀವು 7 ಡಾಲರ್, ಅಂದರೆ ಸುಮಾರು 420 ರೂಪಾಯಿ ಕೊಡಬೇಕಾಗುತ್ತದೆ. ಇಲ್ಲಿ ನೀವು ಒಂದು ಕಿಲೋ ಅಕ್ಕಿಗೆ 45–50 ರೂಪಾಯಿ ಕೊಟ್ಟರೆ, ಅಲ್ಲಿ ಅದನ್ನೇ 300 ರೂಪಾಯಿ ಕೊಟ್ಟು ಕೊಳ್ಳಬೇಕು, ಇಲ್ಲಿ ಕರೆಂಟ್ ಬಿಲ್ಲು 1000–2000 ಬಂದರೆ ಅಲ್ಲಿ ಒಂದು ಲಕ್ಷಕ್ಕಿಂತ ಮೇಲಿರುತ್ತದೆ, ಇಲ್ಲಿ ಬಾಡಿಗೆ ಮನೆ 15–20 ಸಾವಿರಕ್ಕೆ ಸಿಗುತ್ತದೆ. ಅಲ್ಲಿ ತಿಂಗಳಿಗೆ ಒಂದೂವರೆ ಲಕ್ಷಕ್ಕಿಂತ ಹೆಚ್ಚಿಗೆ ಕೊಡಬೇಕು. ಇಷ್ಟೆಲ್ಲಾ ಕಷ್ಟಪಟ್ಟು ಅವರು ವರ್ಷಕ್ಕೆ ಒಂದು ಹತ್ತು–ಹದಿನೈದು ಸಾವಿರ ಡಾಲರ್ ಉಳಿಸುತ್ತಾರೆ. ಎಂದರೆ ಸುಮಾರು ಹದಿನೈದು ಲಕ್ಷವಾಗಬಹುದು. ಆದರೆ ಊರಿನ ಎಲ್ಲಾ ಸಂಬಂಧಗಳನ್ನು ಮರೆತು, ದಿನಕ್ಕೊಮ್ಮೆ ವಾಟ್ಸಾಪ್ ಕರೆ ಮಾಡಿಕೊಂಡು ಹುಟ್ಟಿಗೂ, ಸಾವಿಗೂ, ನೋವಿಗೂ ಬರದೇ ಇರುವ ಬಾಳು ಏಕೆ ಬೇಕು? ನನ್ನ ದೇಶದಲ್ಲಿ, ನಮ್ಮೂರಿನಲ್ಲಿ ನನಗೆ ಒಂದು ಐಡೆಂಟಿಟಿ ಇದೆ. ನನಗೆ ಒಂದು ಸಣ್ಣ ಮನೆ ಇದೆ. ಜಾಗವೂ ಇದೆ. ನಾನು ಬೇಕೆನಿಸಿದಾಗ ನನ್ನ ತೋಟದ ಎಳನೀರು ಕುಡಿಯುತ್ತೇನೆ, ಅಂಗಳದಲ್ಲಿ ಬೆಳೆಯುವ ಹೂವು ಹಾಗೂ ಅದರ ಸುವಾಸನೆಯನ್ನು ಆನಂದಿಸುತ್ತೇನೆ. ಇಲ್ಲಿ ನಾನು ವರ್ಷಕ್ಕೆ ಮೂರು–ನಾಲ್ಕು ಲಕ್ಷ ಉಳಿಸಬಹುದು. ಅಷ್ಟು ನನಗೆ ಸಾಕು. ನನಗೆ ವಿದೇಶಿ ವ್ಯಾಮೋಹವಿಲ್ಲ' ಎನ್ನುತ್ತಾನೆ. ಅಂದಿನಿಂದ ಆ ಹುಡುಗ ಎದುರು ಸಿಕ್ಕರೂ ಈ ಹಿರಿಯರು ಅವನನ್ನು ಮಾತನಾಡಿಸುವುದೇ ಇಲ್ಲ ಎಂದು ಆ ಹುಡುಗ ಕಂಡುಕೊಂಡಿದ್ದಾನೆ. ಎಷ್ಟು ನಿಜವಲ್ಲವೇ? ದೂರದ ಬೆಟ್ಟ ನುಣ್ಣಗೆ ಎಂಬ ಕನ್ನಡದ ಮಾತಿನಂತೆ ದೂರದಲ್ಲಿ ಕಾಣುವುದು ಎಲ್ಲವೂ ಚೆನ್ನಾಗೇ ಇರುತ್ತದೆ. ಅಲ್ಲಿ ಹೊಕ್ಕು ನೋಡಿದಾಗ ನಮ್ಮ ಬದುಕೇ ಚೆನ್ನಾ ಎನಿಸುತ್ತದೆ.

ಇನ್ನೊಂದು ಇಂತಹುದೇ ಸಂದರ್ಭ. ಮಗ ಅಮೇರಿಕಾದಲ್ಲಿ ನೆಲೆಸಿದ್ದಾನೆ. ಒಳ್ಳೆಯ ಕೆಲಸದಲ್ಲೂ ಇದ್ದಾನೆ. ಹೇರಳವಾಗಿ ಸಂಪಾದನೆ ಮಾಡುತ್ತಿದ್ದಾನೆ. ಸುಂದರವಾದ ಪತ್ನಿ, ಮುದ್ದಾದ ಮಕ್ಕಳು, ಐಷಾರಾಮಿ ಕಾರು, ದೊಡ್ಡ ಬಂಗಲೆ ಎಲ್ಲವೂ ಇದೆ. ಆತನ ತಂದೆ–ತಾಯಿ ಹಳ್ಳಿಯಲ್ಲಿ ಹಳೆಯದಾದ ಮನೆಯಲ್ಲಿ ವಾಸಿಸುತ್ತಾರೆ. ಅವರು ವೃದ್ಧರಾಗಿದ್ದಾರೆ. ಜೊತೆಗೆ ಅನಾರೋಗ್ಯ ಹಾಗೂ ಅಸಹಾಯಕತೆ. ಮಗ ಅಮೇರಿಕಾದಿಂದ ಬರುವಂತಿಲ್ಲ, ಇವರು ಅಲ್ಲಿಗೆ ಹೋಗುವಂತಿಲ್ಲ. ಆಗ ಮಗ ಹೇಳುವ ಮಾತು ಎಂದರೆ 'ಇಲ್ಲಿ ನನಗೆ ಹಣ, ಬಂಗಲೆ, ಕಾರು ಎಲ್ಲವೂ ಇದೆ. ಆದರೆ ನನಗೆ ಇಲ್ಲದಿರುವುದು ಸಮಯ ಮಾತ್ರ. ನಾನು ನಿಮ್ಮ ಬಳಿ ಇರಬೇಕು, ಪಕ್ಕದಲ್ಲಿ ಕೂತು ಮಾತನಾಡಿಸಬೇಕು, ನಿಮ್ಮ ನೋವನ್ನು ಹಂಚಿಕೊಳ್ಳಬೇಕು ಎನಿಸುತ್ತದೆ. ಆದರೆ ಅದಕ್ಕೆ ನನಗೆ ಅವಕಾಶವಿಲ್ಲ. ಇಲ್ಲಿ ಮಕ್ಕಳ ಓದುವಿಕೆ ಕಡ್ಡಾಯ, ಕಚೇರಿ ಕೆಲಸ ಮಾಡಲೇಬೇಕು ಹಾಗಾಗಿ ನಾನು ಅಸಹಾಯಕ. ನೀವು ಇಷ್ಟಪಟ್ಟ ಸ್ವರ್ಗಭೂಮಿ ಇದು. ಆದರೆ ನಾನು ಬಯಸಿದರೂ ನಿಮ್ಮ ಬಳಿಗೆ ಬರಲಾಗದ ಸ್ಥಿತಿ ಇಲ್ಲಿ. ನಿಮ್ಮನ್ನು ಇಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಜೊತೆಗಿದ್ದು ನೋಡಿಕೊಳ್ಳಲಾಗದ ಪರಿಸ್ಥಿತಿ ನನ್ನದು. ಈಗೆಲ್ಲಾ ನನಗೆ ನನ್ನಂತಹ ಮಗ ಇದ್ದರೂ ಪ್ರಯೋಜನವಿಲ್ಲ ಎನಿಸುತ್ತದೆ. ಆದರೆ ಇದಕ್ಕೆ ನೀವೂ ಸ್ವಲ್ಪಮಟ್ಟಿಗೆ ಕಾರಣರೇ ಅಲ್ಲವೇ? ನನಗೆ ಇಂಜಿನಿಯರಿಂಗ್ ಎಂದರೆ ಏನೆಂದು ಗೊತ್ತಿರಲಿಲ್ಲ, ಹಣದ ಮೌಲ್ಯ ಏನು ಎಂದು ತಿಳಿದಿರಲಿಲ್ಲ. ಅಮೇರಿಕಾ ಎಲ್ಲಿದೆ ಎಂದೇ ನನಗೆ ಗೊತ್ತಿರಲಿಲ್ಲ. ನನ್ನ ಕಾಲೇಜು, ಹಣ, ಅಮೆರಿಕಾ ಎಲ್ಲವೂ ಒಂದು ಕಾಲದಲ್ಲಿ ಕಲ್ಪನೆಯಾಗಿತ್ತು. ಅಂದು ನಿಮ್ಮೊಡನಿರುವುದೇ ಎಲ್ಲವೂ ಆಗಿತ್ತು. ನನಗೆ ಹೆಚ್ಚು ಅಂಕ ಬರಬೇಕೆಂದು ನನ್ನನ್ನು ದುಬಾರಿ ಕೋಚಿಂಗ್ ಶಾಲೆಗೆ ಸೇರಿಸಿದವರು ನೀವು. ನಿಮ್ಮ ಮನಸ್ಸಿನಲ್ಲಿದ್ದ ಎಲ್ಲ ಆಸೆಗಳನ್ನು ಪೂರೈಸಲು ನನ್ನ ಇಂಜಿನಿಯರಿಂಗ್, ದುಬಾರಿ ಕೋಚಿಂಗ್, ಹಣದ ಮಹತ್ವ ಎಲ್ಲವನ್ನೂ ತಿಳಿಸಿದ್ದೇ ನೀವು. ಅಮ್ಮನೂ ಪ್ರತಿದಿನ ಹಾಲು ಕೊಡುವಾಗ ನನ್ನ ಮಗ ದೊಡ್ಡ ವ್ಯಕ್ತಿಯಾಗುತ್ತಾನೆ, ಕೈತುಂಬಾ ಸಂಪಾದಿಸುತ್ತಾನೆ ಎಂದೇ ಹೇಳುತ್ತಿದ್ದರು. ನನ್ನ ಪ್ರಗತಿಗಾಗಿ ನೀವು ಕಂಡ ಕಂಡ ದೇವರಲ್ಲಿ ಹರಕೆ ಹೊತ್ತಿದ್ದಿರಿ. ಆದರೆ ಇಂದು ನಾನು ನಿಮ್ಮ ಬಳಿ ಬಂದು ನಿಮ್ಮ ಅನಾರೋಗ್ಯದ ಬಗ್ಗೆ ವಿಚಾರಿಸಲು, ನಿಮಗೆ ಔಷಧಿ ಮಾತ್ರೆ ಕೊಡಲೂ ಆಗುತ್ತಿಲ್ಲ. ನಾನು ಇಲ್ಲಿ ಭವ್ಯ ಬಂಗಲೆಯಲ್ಲಿದ್ದೇನೆ, ನೀವು ಅದೇ ಹಳೇಯ ಮನೆಯಲ್ಲಿದ್ದೀರಿ. ಹೇಳಿ ಇದರಲ್ಲಿ ನನ್ನ ತಪ್ಪು ಏನಿದೆ? ಇದು ನನ್ನೊಬ್ಬನದೇ ತಪ್ಪೇ?' ಎಂದು ಪ್ರಶ್ನಿಸುತ್ತಾನೆ. ಇದು ನಮಗೆ ಮತ್ತೊಂದು ವಾಸ್ತವತೆಯನ್ನು ತಿಳಿಸಿಕೊಡುತ್ತದೆ.

ನಮ್ಮ ಮಕ್ಕಳು ನಮಗೆ ಸಹಾಯಕರಾಗಿರದೇ, ಹಣದ ಹಂಬಲದಿಂದ ಪರದೇಶಗಳಲ್ಲಿ ವಾಸಿಸುವುದು ಎಷ್ಟು ಹಿತ ಎಂದು ಕೇಳಬೇಕಾಗುತ್ತದೆ. ಹಾಗೆಂದು ಮಕ್ಕಳು ವಿದೇಶಗಳಲ್ಲಿ ಕೆಲಸ ಮಾಡಬಾರದು ಎಂದಲ್ಲ. ಆದರೆ ಒಂದಷ್ಟು ಸಮಯ ಅಲ್ಲಿದ್ದು, ಮರಳಿ ಊರಿಗೆ, ತಂದೆ–ತಾಯಿಯರ ಬಳಿಗೆ ಬರುವುದು ಸೂಕ್ತ ಅಲ್ಲವೇ? ಹಣಕ್ಕಾಗಿ ನಮ್ಮನ್ನು ನಾವು ಮಾರಿಕೊಂಡಂತೆ ಆಗುವುದು ವಿಹಿತವಲ್ಲ ಎನಿಸುತ್ತದೆ. ನಮ್ಮ ದೇಶದಲ್ಲಿ ಎಲ್ಲವೂ ಇದೆ. ಇರಲಿ, ಜೊತೆಗೆ ಇಲ್ಲಷ್ಟು ರಾಜಕೀಯವೂ ಇದೆ. ಆದರೆ ರಾಮನು ಲಕ್ಷ್ಮಣನಿಗೆ ಹೇಳಿದಂತೆ 'ಜನನಿ ಹಾಗೂ ಜನ್ಮಭೂಮಿ ಸ್ವರ್ಗಕ್ಕಿಂತಲೂ ಹೆಚ್ಚಿನದು' ಎಂಬುದನ್ನು ನೆನಪಿಸಿಕೊಳ್ಳುತ್ತಿರಬೇಕು.

ಯೋಜನಾ ಬದ್ಧವಾಗಿ ನಗರ ಬೆಳೆಯದಿದ್ದಲ್ಲಿ ಸಾರ್ವಜನಿಕರ ಸ್ವಾಸ್ಥ್ಯಕ್ಕೆ ಭಂಗ

ಮೈಗ್ರಾಪ ಸಭೆಯಲ್ಲಿ ಚರ್ಚೆ



ಮೈಸೂರು, ಜು.9 (ಎಸ್‌ಪಿಎನ್)– ಯಾವುದೇ ನಗರ ಯೋಜನಾ ಬದ್ಧವಾಗಿ ಬೆಳೆಯಬೇಕು. ಈ ನಿರ್ಧಾರದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ನೀರು, ವಿದ್ಯುತ್, ಯುಜಿಡಿ ಸೇರಿದಂತೆ ಇತರೆ ಮೂಲ ಸೌಕರ್ಯಗಳನ್ನು ಒದಗಿಸುವ ವಿಷಯದಲ್ಲಿ ವ್ಯತ್ಯಾಸವಾಗಿ, ಸಾರ್ವಜನಿಕರ ಸ್ವಾಸ್ಥ್ಯಕ್ಕೆ ಭಂಗ ಬರಲಿದೆ ಎಂದು ಮೈಗ್ರಾಪ ಸದಸ್ಯರು ಸಾಮಾನ್ಯ ಸಭೆಯಲ್ಲಿ ಭಾನುವಾರ ಬಿಸಿಬಿಸಿ ಚರ್ಚೆ ನಡೆಸಿದರು.

ಮೈಸೂರು ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿ ಮೈಸೂರು ಗ್ರಾಹಕರ ಪರಿಷತ್ ಕಚೇರಿಯಲ್ಲಿ ಮಾಸಿಕ ಸಾಮಾನ್ಯ ಸಭೆಯಲ್ಲಿ ಮೈಸೂರು ನಗರದ ಒಳಚರಂಡಿ ಸಮಸ್ಯೆ ಕುರಿತು ಮಾಜಿ ಶಾಸಕ ವಾಸು, ಎಇಇ ನಾಗರಾಜ ಹಾಗೂ ಮೈಗ್ರಾಪ ಅಧ್ಯಕ್ಷರು, ಕಾರ್ಯಾಧ್ಯಕ್ಷರು, ಪದಾಧಿಕಾರಿಗಳವರ ಸಮ್ಮುಖದಲ್ಲಿ ಚರ್ಚಿಸಲಾಯಿತು.

ಯಾರು ಮರೆಯುವಂತಿಲ್ಲ: ಮೈಸೂರು ಮಹಾರಾಜರು ಕಟ್ಟಿರುವ ಈ ಸುಂದರ ನಗರ, ಸಾಂಸ್ಕೃತಿಕ ನಗರ, ಪಾರಂಪರಿಕ ನಗರ ಎಂಬೆಲ್ಲಾ ವಿಶ್ವಮಟ್ಟದಲ್ಲಿ ಹೆಸರುವಾಸಿಯಾಗಿರುವ ಮೈಸೂರಿನ ಬೆಳವಣಿಗೆಗೆ ನಾಗರಿಕರ ಕರ್ತವ್ಯ ಬಹುಮುಖ್ಯ. ಮೈಸೂರಿನ ನಾಲ್ಮಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿನ ಮುಂದಿನ 200 ವರ್ಷಗಳ ದೂರದೃಷ್ಟಿಯಿಟ್ಟುಕೊಂಡು ಅಭಿವೃದ್ಧಿ ಮಾಡಿದ್ದಾರೆ. ಅವರ ಕೊಡುಗೆಯನ್ನು ಇಂದಿನ ಪೀಳಿಗೆಯೂ ಅಲ್ಲೆಗೆಳೆಯಲಾರರು ಎಂದು ಮಾಜಿ ಶಾಸಕ ವಾಸು, ಮೈಗ್ರಾಪ ಸದಸ್ಯರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು.

ಮೈಸೂರಿನಲ್ಲಿ ಹಲವು ಬಡಾವಣೆಗಳ ನಿರ್ಮಾಣಕ್ಕೆ ಸರ್ಕಾರದಿಂದ ಅನುಮತಿ ಪಡೆದಿಲ್ಲ. ಆದರೂ ಬಡಾವಣೆಗಳಿಗೆ ನೀರು, ವಿದ್ಯುತ್, ಯುಜಿಡಿ ಸೇರಿದಂತೆ ಇತರೆ ಸೌಕರ್ಯಗಳನ್ನು ಒದಗಿಸಲಾಗಿದೆ. ಇದರಿಂದ ಸರ್ಕಾರಕ್ಕೆ ತೆರಿಗೆ ಕಟ್ಟಿ ಯೋಜನಾ ಬದ್ಧವಾಗಿ ನಿರ್ಮಾಣಗೊಂಡ ಬಡಾವಣೆಗಳಲ್ಲಿ ವಾಸಿಸುವ ಜನರಿಗೆ ಮೂಲ ಸೌಕರ್ಯಗಳು ಸರಿಯಾಗಿ ಸಿಗದೇ ವಂಚಿತರಾಗುತ್ತಿದ್ದಾರೆ. ಇವುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇತ್ತೀಚಿನ ಚುನಾವಣೆಗಳಲ್ಲಿ ಮತದಾರರ ಅಭಿರುಚಿ ಬದಲಾಗುತ್ತಿದೆ. ಜನರ ದನಿಯಾಗಿ ಹೋರಾಡುವ ಅಥವಾ ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿಗಳನ್ನು ಚುನಾವಣೆಯಲ್ಲಿ ಸೋಲಿಸುವ ಮನಸ್ಥಿತಿಯನ್ನು ಮತದಾರರು ಹೊಂದಿರುವುದೇ ಇಂತಹ ಅವ್ಯವಸ್ಥೆಗೆ ಕಾರಣ ಎಂದರು.

ಅಧಿಕಾರಿಗಳ ಧೋರಣೆ ಸರಿಯಲ್ಲ: ಇತ್ತೀಚಿನ ದಿನಗಳಲ್ಲಿ ಯುಜಿಡಿ, ಕುಡಿಯುವ ನೀರಿನ ಪೂರೈಕೆ ಸಮಸ್ಯೆ ಕುರಿತು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಸಂಪರ್ಕ ಮಾಡಿದರೆ, ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ ಹಾಗೂ ಸಮಸ್ಯೆಗಳನ್ನು ಬಗೆಹರಿಸುವ ಉತ್ಸಾಹ ತೋರುತ್ತಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇತ್ತೀಚಿನ ದಿನಗಳಲ್ಲಿ ಅಧಿಕಾರಿಗಳು ಸ್ವಯಂಪ್ರೇರಿತವಾಗಿ ಕೆಲಸ ಮಾಡುವ ವಾತಾವರಣವಿಲ್ಲ. ಅದಕ್ಕೆ ನಾನಾ ತಾಂತ್ರಿಕ ಕಾರಣಗಳನ್ನು ನೀಡಬಹುದು. ಕೆಲ ಸಮಸ್ಯೆಗಳಿಗೆ ಅಧಿಕಾರಿಗಳು, ಸಿಬ್ಬಂದಿಗಳನ್ನು ದೂರುವ ಬದಲು ಸಾರ್ವಜನಿಕರು ಸರ್ಕಾರದ ಮೇಲೆ ಒತ್ತಡ ತರುವ ಕೆಲಸ ಮಾಡಿದ್ದಾರೆಯೇ? ಎಂದು ಪ್ರಶ್ನಿಸಿದರು.

ಅಕ್ರಮ ಬಡಾವಣೆಗಳಿಂದ ಸರ್ಕಾರಕ್ಕೆ ತೆರಿಗೆ ಕಟ್ಟಿ, ಯೋಜನಾ ಬದ್ಧ ಬಡಾವಣೆಗಳಲ್ಲಿ ವಾಸಿಸುವ ನಾಗರಿಕರಿಗೆ ಯಾವ ರೀತಿ ಸಮಸ್ಯೆ ಎದುರಾಗುತ್ತದೆ ಎಂಬ ಮೈಗ್ರಾಪ ಸದಸ್ಯರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮೈಸೂರು ನಗರದಲ್ಲಿ ಅನುಮತಿ ಪಡೆಯದೇ ಅಕ್ರಮ ಬಡಾವಣೆಗಳು ನಿರ್ಮಾಣಗೊಂಡಿವೆ. ಈ ಬಡಾವಣೆಗಳಿಂದ ಸರ್ಕಾರಕ್ಕೆ ಕಂದಾಯ ವಸೂಲಿ ಆಗುವುದಿಲ್ಲ. ಆದರೆ, ಅಕ್ರಮ ಬಡಾವಣೆಗಳಿಗೆ ಸಿಗುತ್ತವೆ. ಆದರೆ, ತೆರಿಗೆ ಕಟ್ಟುವ ಸಾರ್ವಜನಿಕರು 10ರಲ್ಲಿ ನಾಲ್ಕು ಮಂದಿ ಮಾತ್ರ ಈ ವ್ಯಾಪ್ತಿಯಲ್ಲಿರುತ್ತಾರೆ. ಇದಕ್ಕೆ ತಮಗಾಗುತ್ತಿರುವ ಅನ್ಯಾಯನ್ನು ಸಾರ್ವಜನಿಕವಾಗಿ ಕೇಳದ ಪರಿಸ್ಥಿತಿಯಿದೆ. ಆಗೊಮ್ಮೆ ಕೇಳಿದರೂ ಇವರ ಅಹವಾಲು ಕೇಳುವವರ್‍ಯಾರು, ಬಗೆಹರಿಸುವವರ್‍ಯಾರು ಎಂಬ ಪ್ರಶ್ನೆ ಉದ್ಭವವಾಗುತ್ತದೆ ಎಂದು ತಿಳಿಸಿದರು.

ಗ್ರಂಥಾಲಯದ ಜಾಗ ಉಳಿಸಲು ಹೋಗಿ 2 ಬಾರಿ ಸೋತೆ

ಮೈಸೂರಿನ ಹೃದಯ ಭಾಗದಲ್ಲಿರುವ ಪೀಪಲ್ಸ್ ಪಾರ್ಕ್‌ನಲ್ಲಿ ಗ್ರಂಥಾಲಯಕ್ಕೆ ಮೀಸಲಿಟ್ಟ ಜಾಗವನ್ನು ಪ್ರಭಾವಿ ವ್ಯಕ್ತಿಗಳು ಅನ್ಯ ಉದ್ದೇಶಕ್ಕಾಗಿ ಸರ್ಕಾರದ ಮೇಲೆ ಒತ್ತಡ ತಂದು ಖಾತೆ ಮಾಡಿಸಿಕೊಂಡಿದ್ದರು. ಇದರ ವಿರುದ್ಧ 1994ರಿಂದ ಹೋರಾಟ ರೂಪಿಸಿ, ಗ್ರಂಥಾಲಯ ನಿರ್ಮಾಣಕ್ಕೆ ಮುಂದದಾಗಲೆಲ್ಲ. ನನಗೆ ರಾಜಕೀಯವಾಗಿ ಹಿನ್ನಡೆಯಾಗಿದ್ದು, 2 ಬಾರಿ ಎಂಎಲ್‌ಎಗೆ ಸ್ಪರ್ಧಿಸಿ ಸೋಲು ಕಂಡಿದ್ದೇನೆ. ಆದರೂ ಗ್ರಂಥಾಲಯ ಕಟ್ಟುವ ನಿರ್ಧಾರದಿಂದ ಹಿಂದೆ ಸರಿಯದೆ ಈಗಿನ ಕೇಂದ್ರೀಯ ಗ್ರಂಥಾಲಯ ಕಟ್ಟಡ ನಿರ್ಮಾಣದ ಹಿಂದಿನ ಇತಿಹಾಸ ರೋಚಕ.

–ವಾಸು, ಮಾಜಿ ಶಾಸಕ

ಸಭೆಯಲ್ಲಿ ಸದಸ್ಯರಿಂದ ವ್ಯಕ್ತವಾದ ಸಲಹೆಗಳು

- ಮೈಸೂರು ನಗರದಲ್ಲಿ ಯುಜಿಡಿ ಸಮಸ್ಯೆ ಪರಿಹಾರಕ್ಕೆ ಸರ್ಕಾರದ ಮೇಲೆ ಒತ್ತಡ ತರಬೇಕು
- ಸಾರ್ವಜನಿಕರಿಗೆ ಪೂರೈಕೆಯಾಗುವ ಶುದ್ಧ ಕುಡಿಯುವ ನೀರು ಶೇಖರಣ ಸ್ಥಳಗಳ ಶುಚಿತ್ವ, ಸಾರ್ವಜನಿಕ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಬೇಕು
- ಯುಜಿಡಿ ಸಮಸ್ಯೆಗಳಿಗೆ ಮೇಲಿಂದ ಮೇಲೆ ನಗರ ಪಾಲಿಕೆ ಅಧಿಕಾರಿಗಳಿಗೆ ಗಮನಕ್ಕೆ ತರಬೇಕು
- ಮೈಸೂರು ಸುಂದರ ನಗರ, ಪಾರಂಪರಿಕ ನಗರದ ವಿಶ್ವೇಷತೆ ಉಳಿಸಿಕೊಳ್ಳಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರೋಟರಿ ಪಂಚಶೀಲ್ ಕ್ಲಬ್‌ಗೆ ನೂತನ ಪದಾಧಿಕಾರಿಗಳ ಪದಗ್ರಹಣ



ಮೈಸೂರು, ಜು.9(ಎಂಕೆ)– ನಗರದ ಹೊರವಲಯದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ರೋಟರಿ ಪಂಚಶೀಲ್ ಕ್ಲಬ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ರೋಟರಿ ಪಂಚಶೀಲ್ ಕ್ಲಬ್‌ನ 2023–24ನೇ ಸಾಲಿನ ನೂತನ ಅಧ್ಯಕ್ಷರಾಗಿ ಕಿರಣ್ ರಾಬರ್ಟ್, ಕಾರ್ಯದರ್ಶಿಯಾಗಿ ಎ.ಎಸ್.ಸೋಮೇಶ್ ಇನ್ನಿತರರು ಅಧಿಕಾರ ಸ್ವೀಕರಿಸಿದರು. ಇದೇ ವೇಳೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಶಿಲ್ಪಾನಾಗ್ ಅವರಿಗೆ ರೋಟರಿ ಪಂಚಶೀಲ್ ಸಂಸ್ಥೆಯ ಗೌರವ ಸದಸ್ಯತ್ವ ನೀಡಲಾಯಿತು.

ಬಳಿಕ ಮಾತನಾಡಿದ ಶಿಲ್ಪಾನಾಗ್, ರೋಟರಿ ಸಂಸ್ಥೆಯು ಕೋವಿಡ್ ಸಂದರ್ಭದಲ್ಲಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಅನೇಕ ನಿರಾಶ್ರಿತರಿಗೆ ಊಟ, ಸಂಕಷ್ಟದಲ್ಲಿದ್ದವರಿಗೆ ಸಹಾಯಹಸ್ತ ನೀಡಿದ್ದನ್ನು ಗಮನಿಸಿದ್ದೇನೆ. ಸಂಸ್ಥೆಯ ಸಾಮಾಜಿಕ ಕಾರ್ಯ ಅನುಕರಣೀಯ ಮತ್ತು ಪ್ರಶಂಸನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಮಹಿಳೆಯರು ಆರ್ಥಿಕವಾಗಿ ಸಬಲರಾಗಬೇಕೆಂಬ ಉದ್ದೇಶದಿಂದ ಮಹಿಳಾ ಸಬಲೀಕರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಡಾ.ಸಮೀರ್ ಹರಿಯಾನಿ, ಉಪಾಧ್ಯಕ್ಷ ಸಿ.ಎ.ಜಯಕುಮಾರ್, ಖಜಾಂಚಿ ಬಿ.ವಿ.ಮಹೇಶ್, ಎನ್.ಎಸ್.ಆನಂದ್, ಡಾ.ಎನ್.ಆರ್.ಅನೂಪ್, ರಾಜೇಂದ್ರ ಪ್ರಸಾದ್, ಎಸ್.ರಾಜಾರಾಮ್, ಕೆ.ಎಸ್.ಬಾಲಾಜಿ, ಎಂ.ಕೆ.ಹರ್ಷ, ಬಿ.ಎನ್.ಸತೀಶ್, ಕೆ.ಬಿ.ಮಹೇಶ್, ದಿನೇಶ್, ಸುಮಾ ಮಹೇಶ್, ಅಶ್ವಿನ್ ಆರ್.ಪಲ್ಲೇಗಾ, ಶ್ರೀಹರಿ, ಹಸ್ಸೆಬುಲ್ಲಾ ಬೇಗ್, ತಾಪಂ ಸಹಾಯಕ ನಿರ್ದೇಶಕ ಕೆ.ಎಂ.ರಘುನಾಥ್ ಮತ್ತಿತರರಿದ್ದರು.

ಅಮರನಾಥ ಯಾತ್ರೆ ವೇಳೆ ಭೂಕುಸಿತ

ಅತಂತ್ರದಲ್ಲಿ 83 ಮಂದಿ ಕನ್ನಡಿಗರು, ರಕ್ಷಣೆಗೆ ರಾಜ್ಯ ಸರ್ಕಾರದಿಂದ ತಂಡ ರವಾನೆ



ಗದಗ, ಜು.9– ಅಮರನಾಥ ಯಾತ್ರೆಗೆ ತೆರಳುವ ಮಾರ್ಗಮಧ್ಯೆ ಭಾರೀ ಮಳೆಯಿಂದಾಗಿ ಗುಡ್ಡ ಕುಸಿತ ಉಂಟಾಗಿದ್ದು, ಪರಿಣಾಮ ಕರ್ನಾಟಕದ 83 ಮಂದಿ ಯಾತ್ರಾರ್ಥಿಗಳು ಮಾರ್ಗ ಮಧ್ಯೆ ಸಿಲುಕಿಕೊಂಡಿದ್ದಾರೆಂದು ತಿಳಿದುಬಂದಿದೆ.

ಈ ಪೈಕಿ 23 ಮಂದಿ ಯಾತ್ರಾರ್ಥಿಗಳು ಗದಗ ಜಿಲ್ಲೆಯವರು ಎಂದು ಹೇಳಲಾಗುತ್ತಿದೆ. ಯಾತ್ರಾರ್ಥಿಗಳು ಸಂಕಷ್ಟಕ್ಕೆ ಸಿಲುಕಿಕೊಂಡಿರುವ ಸ್ಥಳದಿಂದಲೇ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ವಿಡಿಯೋ ಕಳುಹಿಸಿದ್ದು, ರಕ್ಷಣೆ ಮಾಡುವಂತೆ ಮನವಿ ಮಾಡಿಕೊಂಡಿದ್ದಾರೆ.

ಪ್ರಾಥಮಿಕ ಮಾಹಿತಿಯ ಪ್ರಕಾರ, ಸ್ಥಳದಲ್ಲಿ 1,000 ಕ್ಕೂ ಹೆಚ್ಚು ಜನರು ಸಿಲುಕಿಕೊಂಡಿದ್ದು, ಈ ಪೈಕಿ 83 ಮಂದಿ ಕರ್ನಾಟಕದವರು ಎಂದು ಹೇಳಲಾಗುತ್ತಿದೆ. ಇವರೆಲ್ಲರೂ ಅಮರನಾಥದ ಪಂಚತಾರ್ನಿ ಮಿಲಿಟರಿ ಬೇಸ್ ಕ್ಯಾಂಪ್‌ನಲ್ಲಿ ಆಶ್ರಯ ಪಡೆದಿದ್ದಾರೆಂದು ತಿಳಿದುಬಂದಿದೆ.

ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರ್ದೇಶನದ ಮೇರೆಗೆ ಪ್ರಾಧಿಕಾರದ ಆಯುಕ್ತ ಪಿ ಸುನೀಲ್ ಕುಮಾರ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಉತ್ತರಾಖಂಡಕ್ಕೆ ತೆರಳುತ್ತಿದ್ದು, ಪರಿಸ್ಥಿತಿ ಅವಲೋಕನ ನಡೆಸಲಿದೆ ಎಂದು ವರದಿಗಳು ತಿಳಿಸಿವೆ.

ಈ ಕುರಿತು ಮಾಹಿತಿ ನೀಡಿರುವ ಸುನೀಲ್ ಕುಮಾರ್ ಅವರು, ಸ್ಥಳಕ್ಕೆ ತೆರಳುವ ಅಧಿಕಾರಿಗಳು, ಸಂಕಷ್ಟಕ್ಕೆ ಸಿಲುಕಿರುವ ಕನ್ನಡಿಗರನ್ನು ಹಾಗೂ ಅಮರನಾಥ ದೇಗುಲ ಮಂಡಳಿಯ ಸದಸ್ಯರನ್ನು ಭೇಟಿ ಮಾಡಲಿದ್ದಾರೆ. ನಂತರ ಮುಂದಿನ ಕ್ರಮವನ್ನು ಕೈಗೊಳ್ಳಲಾಗುತ್ತದೆ ಎಂದು ಹೇಳಿದ್ದಾರೆ.

ಸಂಕಷ್ಟಕ್ಕೆ ಸಿಲುಕಿರುವ ಗದಗದ 23 ಮಂದಿಯೊಂದಿಗೆ ಮಾತುಕತೆ ನಡೆಸಲಾಗಿದೆ. ಸ್ಥಳದಲ್ಲಿ 83 ಮಂದಿ ಕನ್ನಡಿಗರಿರುವುದಾಗಿ ಹೇಳಲಾಗುತ್ತಿದೆ. ಕನ್ನಡಿಗರ ಕುರಿತು ಮಾಹಿತಿಗಳನ್ನು ಪಡೆಯಲಾಗುತ್ತಿದೆ ಈವರೆಗೂ ಎಲ್ಲರೂ ಸುರಕ್ಷಿತರಾಗಿದ್ದು, ಶೀಘ್ರಗತಿಯಲ್ಲಿ ಅವರೆಲ್ಲರನ್ನೂ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗುವುದು ಎಂದು ತಿಳಿಸಿದರು.

ಗದಗದಿಂದ ಜುಲೈ 4 ರಂದು ಯಾತ್ರೆಗೆ ತೆರಳಿದ್ದ ತಂಡ ಜುಲೈ 6 ರಂದು ಅಮರನಾಥ ತಲುಪಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹವಾಮಾನ ವೈಪರೀತ್ಯದಿಂದಾಗಿ ಅವರು ಹೆಲಿಕಾಪ್ಟರ್ ಸೇವೆಯನ್ನು ಪಡೆಯಲು ಸಾಧ್ಯವಾಗಿಲ್ಲ. ಇದೀಗ ಎಲ್ಲರೂ ಬೇಸ್ ಕ್ಯಾಂಪ್‌ನಲ್ಲಿ ಆಶ್ರಯ ಪಡೆದುಕೊಂಡಿರುವುದಾಗಿ ಮಾಹಿತಿ ತಿಳಿದುಬಂದಿದೆ ಎಂದು ಹೇಳಿದ್ದಾರೆ.

ಕ್ಯಾಂಪ್ ನಲ್ಲಿ ಉಳಿದು ಕೊಂಡಿರುವರಿಗೆ ಭಾರೀ ಮಳೆಯಿಂದಾಗಿ ಅವರಿಗೆ ಆಹಾರ ಸಿಗುತ್ತಿಲ್ಲ. ಅಧಿಕಾರಿಯೊಬ್ಬರು ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಹವಾಮಾನ ಸಹಜ ಸ್ಥಿತಿಗೆ ಮರಳಿದ ಬಳಿಕ ಸೇನಾ ಹೆಲಿಕಾಪ್ಟರ್‌ಗಳ ವ್ಯವಸ್ಥೆಗೊಳಿಸಲಾಗುವುದು ಎಂದು ಭರವಸೆ ನೀಡಿದ್ದಾರೆಂದು ಹೇಳಿದ್ದಾರೆ.

ನೇಮಕ

ಮೈಸೂರು, ಜು.9– ಮೈಸೂರಿನ ಕೆಸರೆ ನಿವಾಸಿ ಇರ್ಫಾನ್ ಪಾಷಾ ಅವರನ್ನು ಮೈಸೂರು ನಗರ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಸಂಘಟನಾ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.





ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಅವರನ್ನು ಜೆಡಿಎಸ್ ಯುವ ಮುಖಂಡ ದಿನೇಶ್ ಗೌಡ ಅಭಿನಂದಿಸಿದರು. ಈ ವೇಳೆ ಒಂಟಿಕೊಪ್ಪಲು ಪೈ. ಚಿಕ್ಕಪುಟ್ಟಿ, ಗೋಕುಲಂನ ವಿಶ್ವ, ಒಕ್ಕಲಗೇರಿ ವಾಸಣ್ಣ, ನಂದರಾಜು, ದಿವಾಕರ್, ಮಹದೇವಸ್ವಾಮಿ, ನಂಜುಂಡಸ್ವಾಮಿ, ಪ್ರಶಾಂತ್, ರಾಮು ಇನ್ನಿತರರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಮಳಿಗೆ ಬಾಡಿಗೆಗೆ ಇದೆ
ಇರ್ವಿನ್ ರಸ್ತೆ, ಮೈಸೂರು
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
93534 00182

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ.
ಸಂಬಳ: 12000 ದಿಂದ 18000
8050699742

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

ಬೇಕಾಗಿದ್ದಾರೆ
ಅಕೌಂಟೆಂಟ್
ಟ್ಯಾಲಿ & ಜಿಎಸ್‌ಟಿ ಕಲಿತಿರಬೇಕು
ಅನುಭವ ಇರುವವರಿಗೆ ಆದ್ಯತೆ
ಆಕರ್ಷಕ ವೇತನ
ಅಶೋಕ ರೋಡ್, ಮೈಸೂರು
Call: 97418 25653

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

HOUSE FOR RENT
3 BHK, Living hall, Dining Hall with Italian kitchen & solar at # 188, CFTRI Layout, Bogadi 2nd Stage, Mysore-26. Contact:
9611418250 / 9448640910

FOR RENT
Commercial Space Building Office /Shop for rent at Gururaja Layout, near DC Office, G+3 Floor, Each Floor 1800 sqft.,
Contact: 7411424515

ITIಗೆ ಪ್ರವೇಶಾವಕಾಶ
ಎರಡು ವರ್ಷದ ITI ತರಬೇತಿಗೆ SSLC, PUC ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ NCVT ಭಾರತ ಸರ್ಕಾರದಿಂದ ಸಂಯೋಜನೆ ಗೊಂಡಿರುತ್ತದೆ.
ಬೆನಕ ಐ.ಟಿ.ಐ. ಕಾಲೇಜ್
ಕಾವೇರಿ ವೃತ್ತದ ಹತ್ತಿರ, ಡಾ॥ ರಾಜ್‌ಕುಮಾರ್ ರಸ್ತೆ, ರಾಘವೇಂದ್ರ ನಗರ, ಮೈಸೂರು–29
9342123467,9141756695

ಶ್ರೀ ಗೌರಿಶಂಕರ ಟ್ರಾವೆಲ್ಸ್
30–7–2023 (1 ದಿನ): ಘಾಟಿ ಸುಬ್ರಮಣ್ಯ, ಇಶಾ ಫೌಂಡೇಶನ್, ಕೋಟಿಲಿಂಗ.
20–8–2023 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬಾಬಾಬೈದ್ಯನಾಥ್ ಇತ್ಯಾದಿ.
21–9–2023 (13 ದಿನ): ಹರಿದ್ವಾರ, ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ದೆಹಲಿ ಇತ್ಯಾದಿ.
ವಿಮಾನ / ಬಸ್ / ಊಟ / ರೂಂ.
Mob: 9620002114

ಬೇಕಾಗಿದ್ದಾರೆ
Receptionist ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 20000-30000/-
Ph.9380142144
ಶಿವರಾಂಪೇಟೆ, ಮೈಸೂರು

JOB VACANCY
Assistant Support Staff and Therapist are required for Ayurvedic Clinic. Contact
9916496099
9591321995

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

V-GUARD
V-GUARD GEYSER
BEST OFFER PRIZE
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಡೆಲಿವರಿ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 15000/-
Ph.9380142144

ಹೋಲ್‌ಸೇಲ್ ದರದಲ್ಲಿ
ಜೀವಂತ ನಾಟಿ ಕೋಳಿ ಕೆ.ಜಿ. ರೂ. 260, ರೂ. 350, ರೂ. 580
ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಪಿ&ಟಿ ಕ್ವಾಟ್ರಸ್ ಮೇನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪದ ಪಕ್ಕ, ಎನ್.ಆರ್. ಮೊಹಲ್ಲಾ, ಮೈಸೂರು–570 007
9448048576, 9632378020

***** ಆರ್.ಎಸ್ ಕನ್ಸ್‌ಟ್ರಕ್ಷನ್ಸ್ & ಡೆವಲಪರ್ಸ್ *****
"ನಿಮ್ಮ ಕನಸಿನ ಮನೆ ನಮ್ಮ ಹೊಣೆ"
100 ಸಿಮೆಂಟ್ ಬ್ಯಾಗ್ ಉಚಿತ
10 ಚದರಕ್ಕಿಂತ ಹೆಚ್ಚಿನ ಮನೆಯ ನಿರ್ಮಾಣಕ್ಕಾಗಿ ಎಲ್ಲ ಸಾಮಗ್ರಿಗಳನ್ನು ಒಳಗೊಂಡ ಅತ್ಯುತ್ತಮ ಗುಣಮಟ್ಟದೊಂದಿಗೆ ಮನೆಯನ್ನು ವಾಸ್ತು ಪ್ರಕಾರ ನಿರ್ಮಾಣ ಮಾಡಿಕೊಡಲಾಗುವುದು
ಕೂಡಲೇ ಸಂಪರ್ಕಿಸಿ 7022211622

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194,9606783264

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

Beautician Course
(99% discount for SC / ST / BPL)
KVIC (Govt. of India) ಮತ್ತು Shree Ganga Charitable Trust (R) ಆಶ್ರಯದಲ್ಲಿ 30 days training.
* Training certificate by (Govt. of India).
* 100% Loan Assist (20% to 35% subsidy)
* Training by professional trainer.
Mob: 78099-78088

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
INDIAN FAMOUS ASTROLOGER
Mob: 9036984793
ಪಂಡಿತ್: ಕೆ.ಎಸ್. ಪಣಿಕ್ಕರ್ (ಕೇರಳ)
ಜ್ಯೋತಿಷ್ಯ ವಿದ್ವಾನ್ ಶ್ರೀ ಶ್ರೀ ಎಸ್ ಕುಮಾರ್, (ಕೊಳ್ಳೇಗಾಲ)
ಇವರು ಕೇರಳದ ಕುಟ್ಟಿಚೇತನ್ ಕೊಳ್ಳೇಗಾಲದ ಕುಳ್ಳಚೌಡಿ ಅಘೋಚರ ಶಕ್ತಿಯಿಂದ, ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ. ಪರಿಹಾರ ತಿಳಿಸುತ್ತಾರೆ.
ಖಾಯಂ ವಿಳಾಸ: ಪಡುವಾರಹಳ್ಳಿ ಸಿಗ್ನಲ್, ಭೂದೇವಿ ಫಾರ್ಮ್ ಎದುರು, ವಿನೋಬ ರಸ್ತೆ, ಮೈಸೂರು–570006

100% TEAK WOOD FACTORY FINISH DOORS
@ DEPOT RATES
10 YEARS WARRANTY
www.ssbuildmart.com
9901291267
9845426862

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (Cold Pressed) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್
#203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM™ 10yrs WARRANTY
CALL 99012 91267
98454 26862

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೊರಿಯರ್ ಸೌಲಭ್ಯವಿದೆ)
87490 98879

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ವಯಸ್ಸಾದವರನ್ನು ಮನೆಯವರಂತೆ ನೋಡಿಕೊಳ್ಳುವ ಗಾಳಿ ಬೆಳಕು ಇರುವ Independent ಮನೆಯಲ್ಲಿ ಅತ್ಯುತ್ತಮವಾದ ಊಟ ಉಪಚಾರಗಳೊಂದಿಗೆ (ಶಾಖಾಹಾರಿ) Limited Members ಮಾತ್ರ ಆಗಸ್ಟ್ ತಿಂಗಳಿನಿಂದ ಪ್ರಾರಂಭವಾಗಲಿದೆ. ಬನ್ನೂರು ರಸ್ತೆ, ದೇವೇಗೌಡ ಸರ್ಕಲ್, ರಿಂಗ್ ರಸ್ತೆ ಹತ್ತಿರ. ವಿಚಾರಣೆಗಾಗಿ ಸಂಪರ್ಕಿಸಿ:
9742900599

WANTED HOUSE FOR RENT
40X60 Independent House 3BHK for Vegetarian Family In and around Ramakrishna nagar Kuvempunagar, Dattagalli
9945901991
9632145537

WORK @ HOME
WORK FROM HOME ಕಂಪನಿಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತೇವೆ ಕರೆ ಮಾಡಿ ಸರಿಯೊದ WORK FROM HOME ಆಯ್ಕೆಮಾಡಿ
8867973998

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ತಕ್ಷಣ ಬೇಕಾಗಿದ್ದಾರೆ
ನೇರ ಆಯ್ಕೆ ಕಂಪನಿಗಳಿಗೆ, ಆಫೀಸ್ ಕೆಲಸಗಳಿಗೆ 7ನೇ, 10ನೇ, ಪಿಯುಸಿ, ಐಟಿಐ ಡಿಗ್ರಿ ಪಾಸ್/ ಫೇಲ್ ಆದಂತಹ ನಗರ–ಗ್ರಾಮೀಣ ಹಳ್ಳಿಯ ಯುವಕ ಯುವತಿಯರಿಗೆ ಊಟ ವಸತಿ ಯೊಂದಿಗೆ ಸಂಬಳ +ಓಟಿ 18,000/- 45000/-. ಸಂಪರ್ಕಿಸಿ:
9611427572

ಕಳೆದಿದೆ
ಎಂ.ವೈಭವ್ ಸುಬೇದಾರ್, ಮನೆ ನಂ.24, 23ನೇ ಬ್ಲಾಕ್, ಶ್ರೀರಾಂಪುರ, 2ನೇ ಹಂತ, ಮೈಸೂರು ಇಲ್ಲಿ ನಾವು ವಾಸವಾಗಿದ್ದು, ನಮಗೆ ಸೇರಿದ ಮೈಸೂರಿನ ಜೆ.ಎಸ್.ಎಸ್. ನೌಕರರ ಬಡಾವಣೆ, ಬ್ಲಾಕ್ ನಂ.2, ನಿವೇಶನ ಸಂಖ್ಯೆ : 7 ನಜರ್‌ಬಾದ್ ಮೈಸೂರು ಇಲ್ಲಿ 30x40 ಖಾಲಿ ನಿವೇಶವನ್ನು ಹೊಂದಿರುವುದು ಸರಿಯಷ್ಟೆ, ಖಾಲಿ ನಿವೇಶನದ ಮೂಲ ಸ್ವಾಧೀನ ಪತ್ರ ಮತ್ತು ಕ್ರಯ ಪತ್ರವು ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ:
9611475888

ಕೆಮ್ಮಣ್ಣು, ಗ್ರಾವೆಲ್ ಮಣ್ಣು ದೊರೆಯುತ್ತದೆ
ಸೈಟು, ತೋಟಗಳು & ಜಮೀನುಗಳಿಗೆ ಫೆನ್ಸಿಂಗ್ ಮಾಡಿಕೊಡಲಾಗುತ್ತದೆ.
ಸೈಟು & ತೋಟಗಳಿಗೆ ಸಂಪರ್ಕಿಸಿ:
7259407518
8310220458

HOUSE FOR SALE
45X65 S/F (East Ent) Near Central Library Kuvempunagar, Mysore
9663116337
7348818835

ಮೈತ್ರಿ ಟ್ರಾವೆಲ್ಸ್
10–ಆಗಸ್ಟ್ 5 ದಿನಗಳು. (ಆಂಧ್ರ) ಪಂಚಾರಾಮ ಕ್ಷೇತ್ರ ಸಹಿತ ವಿಜಯವಾಡ, ಭದ್ರಾಚಲಂ, ಅನ್ನವರಂ, ವೈಜಾಗ್ ಪ್ರವಾಸ.
12–ಆಗಸ್ಟ್ ಶಿರಡಿ ಪ್ರವಾಸ. 3 ಜೋತಿರ್ಲಿಂಗ, ಶನಿಸಿಂಗನಾಪುರ, ಎಲ್ಲೋರಾ, ನಾಸಿಕ್.
6360422209

ADMISSION OPEN
Govt.of Karnataka-Dept.of Tourism
FOOD CRAFT INSTITUTE-MYSURU
EXHIBITION GROUND, ITTIGEGUDU
HOTEL MANAGEMENT
100% Job Placements | Govt. College | 80% Practical Classes
www.fcimysuru.com
6362018821

COMMERCIAL SPACE FOR RENT
128 x 200 (Full Space) Built in area (50x66 Sri Gowri Shankar Theatre) Sri Gowri Shankar 7th road, K.R.Nagar, Mysore-571602
9880820043,7760199623
9916116746

ಮನೆ ಬೇಕಾಗಿದೆ
ಒಂದು ಉತ್ತಮ 30x40 ರ ಮನೆ ಬೇಕಿದೆ. ಸ್ಥಳ: ವಿವೇಕಾನಂದನಗರ ವೃತ್ತದ ಸಮೀಪ, ಮೈಸೂರು–23
8073589849

WANTED
Female Graduates For Montessori Pre School in Bogadi
6364227636

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ. Salary : 13000/- to 21000 + ESI & PF
ವಿದ್ಯಾರ್ಹತೆ: 10th, PUC, ITI, Diploma & Any Degree
9035734821

ತಕ್ಷಣ ಬೇಕಾಗಿದ್ದಾರೆ
ಕೂರ್ಗಳ್ಳಿ, ಹೂಟಗಳ್ಳಿ ಮತ್ತು ಹೆಬ್ಬಾಳ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ಸಂಬಳ: 13500/- (8 hrs Duty)
ESI & PF ಸೌಲಭ್ಯವಿರುತ್ತದೆ.
9880727819
9620667819

ಮನೆಯಿಂದಲೇ ಕೆಲಸ
ಪಾರ್ಟ್ ಟೈಂ / ಫುಲ್ ಟೈಂ ಕನ್ನಡ ಇಂಗ್ಲೀಷ್ ಬರವಣಿಗೆ ಮೊಬೈಲ್ ಟೈಪಿಂಗ್ ಹಾಗೂ ಮೆಹಂದಿ ಪ್ಯಾಕಿಂಗ್ ಕೆಲಸ ಗಳಿಸಿ 18000/– ದಿಂದ
6360472212

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ.
ಡಾ. ಗುರೂಜಿ
9448229184
7899625268
1) Lady Receptionist ಬೇಕಾಗಿದ್ದಾರೆ.
2) Lady Telecaller ಬೇಕಾಗಿದ್ದಾರೆ.
3) Charitable Trust ಗೆ ಕೆಲಸ ಮಾಡಲು ಸಮಾಜ ಸೇವಾ ಮನೋಭಾವದ ವಿದ್ಯಾವಂತ ಯುವತಿಯರು ಬೇಕು.

40x60 ಅಳತೆಯ DTCP 'A' ಖಾತೆಯುಳ್ಳ ಸೊಸೈಟಿ ಸೈಟು ಮಾರಾಟಕ್ಕಿದೆ 24 ಲಕ್ಷಗಳು ಮಾತ್ರ ನಂಜುಂಡೇಶ್ವರ ನಗರ, TVS
9742198093

ತೇಜಸ್ವಿನಿ ಟೂರಿಸ್ಟ್
21–7–23 ರಿಂದ 5 ದಿನ ಪ್ರವಾಸ ಗುರುವಾಯೂರು, ವೈನಾಡು, ಚೋಟಾನಿಕೆರೆ, ಆಲಪ್ಪಿ, ಕೊಲಂಬೋ ಬೀಚ್, ಮುನ್ನಾರ್, ತಿರುವನಂತಪುರಂ, ತ್ರಿವೇಂಡ್ರಂ ಕೊಚ್ಚಿನ್, ಇತ್ಯಾದಿ. 28–10–23, 18 ದಿನ ಚಾರಧಾಮ್ ಯಾತ್ರೆ, ಕೇದಾರ, ಬದ್ರಿನಾಥ್, ಗಂಗೋತ್ರಿ ಯಮನೋತ್ರಿ ಹರಿದ್ವಾರ, ತೆಹರಿ ಡ್ಯಾಂ, ಉತ್ತರಕಾಶಿ, ಇತ್ಯಾದಿ, 11–8–23, 5 ದಿನ ತಮಿಳುನಾಡು, ತಿರುನಾಳಾರ್, 9 ನವಗ್ರಹ, ರಾಮೇಶ್ವರ, ಕಂಚಿ, ಕನ್ಯಾಕುಮಾರಿ, ಇತ್ಯಾದಿ.
9379792644

ಮಳಿಗೆಗಳು ಬಾಡಿಗೆಗಿವೆ
12 ಅಡಿ ಅಗಲ–24 ಅಡಿ ಉದ್ದ ಮೈಸೂರು–ಮಾನಂದವಾಡಿ ಮುಖ್ಯರಸ್ತೆ (ಕೆಎಸ್‌ಆರ್‌ಟಿಸಿ ಲೇಔಟ್ ಎದುರುಗಡೆ) ದಾರಿಪುರ ಗ್ರಾಮ, ಜಯಪುರ
9449539398

ಮನೆ ಬಾಡಿಗೆಗೆ ಇದೆ
ಸುಭಾಶ್ ನಗರದಲ್ಲಿ 3 ಬೆಡ್ ರೂಂಗಳುಳ್ಳ ಕಿಚನ್, ವರಾಂಡ, ಹಾಲ್, ಕಾರ್ ಪಾರ್ಕಿಂಗ್ ಎಲ್ಲಾ ರೀತಿಯ ಅನುಕೂಲ ಇರುವವ ಮನೆ ಬಾಡಿಗೆಗೆ ಇದೆ.
7348831599

REQUIRED
LAB TECHNICIAN AND NURSING STAFF REQUIRED
9343055819

WANTED
Immediately joiner
Male No. 10
Female No. 25
Salary 10 K to 12 K
PG Facilities Available
SH Meghana (HR)
7829803426

FOR SALE
Buy & Sell site , House, land
1) 20x30,30x40,40x60 sites in H.D.Kote Road and Bogadi Road
2) 30x40 sites Srinagar attch (JP Nagar)
3) Commercial 25 Guntas Land Narasipura toll near
4) 20x30 30x40 House RK Nagar, JP Nagar, Dattagalli , Kuvempu
95386 90359
90359 90359

SHOP FOR RENT
8X15 SQFT. 'N' Facing in Main Road, H.D.Kote Suitable for all Commercial activities
9110861343
Health Insurance Done

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೇಲುಕೋಟೆಯಲ್ಲಿ ವೈಭವದ ಕೃಷ್ಣರಾಜಮುಡಿ ಉತ್ಸವ



ಮೇಲುಕೋಟೆ, ಜು.9– ಪ್ರಸಿದ್ಧ ಆಷಾಢ ಜಾತ್ರಾ ಮಹೋತ್ಸವದ ಶ್ರೀಕೃಷ್ಣರಾಜಮುಡಿ ಬ್ರಹ್ಮೋತ್ಸವದ 4ನೇ ತಿರುನಾಳ್ ಅಂಗವಾಗಿ ಭಾನುವಾರ ರಾತ್ರಿ ಶ್ರೀ ಚೆಲುವನಾರಾಯಣಸ್ವಾಮಿಯವರ ಕೃಷ್ಣರಾಜಮುಡಿ ಕಿರೀಟ ಧಾರಣ ಮಹೋತ್ಸವ ವೈಭವದಿಂದ ನೆರವೇರಿತು.

ಜಿಲ್ಲಾ ಖಜಾನೆಯಿಂದ ಬಿಗಿ ಪೊಲೀಸ್ ಭದ್ರತೆಯೊಂದಿಗೆ ತಂದ ಶ್ರೀಕೃಷ್ಣರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ದೇಶಿಕರ ಸನ್ನಿಧಿಯಲ್ಲಿ ತೆರೆದು ವಜ್ರ ಖಚಿತ ಕೃಷ್ಣರಾಜಮುಡಿ ಮತ್ತು ಗಂಡ ಬೇರುಂಡ ಪದಕವನ್ನು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಅವರು ಸ್ಥಾನೀಕರು, ಅರ್ಚಕ ಪರಿಚಾರಕರ ಸಮ್ಮುಖದಲ್ಲಿ ಪರಿಶೀಲನೆ ನಡೆಸಿದರು.

ನಂತರ ಶ್ರೀದೇವಿ, ಭೂದೇವಿ ಅಮ್ಮನವರ ಸಮೇತ ಗರುಡರೂಢನಾದ ಶ್ರೀ ಚೆಲುವನಾರಾಯಣಸ್ವಾಮಿಗೆ ವಜ್ರ ಖಚಿತ ಶ್ರೀಕೃಷ್ಣರಾಜಮುಡಿ ಕಿರೀಟಧಾರಣೆ ಮಾಡಲಾಯಿತು. ಇದೇ ವೇಳೆ ಗಂಡ ಬೇರುಂಡ ಪದಕ ಹಾಗೂ ಇತರ ಆಭರಣಗಳನ್ನು ತೊಡಿಸಿ ವಿಶೇಷ ಪುಷ್ಪ ಮಾಲೆಗಳಿಂದ ಸ್ವಾಮಿಯನ್ನು ಅಲಂಕರಿಸಿ ಮಹಾ ಮಂಗಳಾರತಿ ನೆರವೇರಿಸಿ ಶ್ರೀಕೃಷ್ಣರಾಜಮುಡಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ದಿವ್ಯ ಪ್ರಬಂಧ ಹಾಗೂ ಮಂಗಳ ವಾದ್ಯದೊಂದಿಗೆ ರಾಜ ಬೀದಿಯಲ್ಲಿ ಕೃಷ್ಣರಾಜಮುಡಿ ಉತ್ಸವ ವಿಜೃಂಭಣೆಯಿಂದ ನೆರವೇರಿತು. ನಂತರ ದೇವಾಲಯದಲ್ಲಿ ಪಡಿಯೇತ್ತ ಕಾರ್ಯಕ್ರಮಗಳು ವಿಧಿ ವಿಧಾನದೊಂದಿಗೆ ನೆರವೇರಿತು. ಈ ವೇಳೆ ದೇವಾಲಯದ ಇಓ ಮಹೇಶ್ ಸೇರಿದಂತೆ ನೂರಾರು ಭಕ್ತರು ಇದ್ದರು.

ಭಕ್ತರ ಮನಸೆಳೆದ ಆಭರಣ: ಮೈಸೂರು ಅರಸ ಮುಮ್ಮಡಿ ಕೃಷ್ಣರಾಜ ಒಡೆಯರ್ ತಮ್ಮ ಮನೆ ದೇವರಾದ ಶ್ರೀಚೆಲುವ ನಾರಾಯಣಸ್ವಾಮಿಗೆ ಭಕ್ತಿಯಿಂದ ಅರ್ಪಿಸಿರುವ ಕೆಂಪು, ಬಿಳಿ ವಜ್ರದ ಪಚ್ಚೆ ಮಣಿಯ ಸಿಂಹ ಲಾಂಛನವುಳ್ಳ ಕೃಷ್ಣರಾಜಮುಡಿ ಮತ್ತು ಗಂಡ ಬೇರುಂಡ ಪದಕ ದರ್ಶನ ಭಕ್ತರ ಮನ ಸೆಳೆಯಿತು.

ಇದಕ್ಕೂ ಮುನ್ನಾ ಜಿಲ್ಲಾ ಖಜಾನೆಯಲ್ಲಿದ್ದ ಶ್ರೀಕೃಷ್ಣರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ಶಿವಳ್ಳಿ ಮಾರ್ಗವಾಗಿ ಮೇಲುಕೋಟೆಗೆ ತಂದು ವೀರಾಂಜನೇಯಸ್ವಾಮಿ ಗುಡಿಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಪಲ್ಲಕಿಯಲ್ಲಿಟ್ಟು ಶ್ವೇತಛತ್ರಿ ಮತ್ತು ಮಂಗಳ ವಾದ್ಯದೊಂದಿಗೆ ದೇವಾಲಯಕ್ಕೆ ಮೆರವಣಿಗೆ ಮೂಲಕ ತರಲಾಯಿತು. ಜು.14ರವರೆಗೆ ಪ್ರತಿದಿನ ಸಂಜೆ ವಿವಿಧ ಉತ್ಸವದಲ್ಲಿ ಕೃಷ್ಣರಾಜಮುಡಿ ಕಿರೀಟ ಧಾರಣೆಯೊಂದಿಗೆ ಶ್ರೀಚೆಲುವ ನಾರಾಯಣಸ್ವಾಮಿ ಕಂಗೊಳಿಸಲಿದ್ದಾನೆ.

ದೇವೇಗೌಡರ ಹೆಸರೇಳದೆ ರಾಜಕೀಯ ಮಾಡಲು ಆಗಲ್ಲ

ಕುಮಾರಸ್ವಾಮಿ ವಿರುದ್ಧ ಸಚಿವ ಚಲುವರಾಯಸ್ವಾಮಿ ವಾಗ್ದಾಳಿ

ಮಂಡ್ಯ, ಜು.9– ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಹೆಸರೇಳದೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಗೆ ರಾಜಕೀಯ ಮಾಡಲು ಆಗಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಟೀಕಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಆಡಿಯೋ ಬಿಡುಗಡೆ ಮಾಡುವುದನ್ನು ನಾವು ಹಿಡಿದಿಟ್ಟು ಕೊಳ್ಳಲು ಸಾಧ್ಯವಿಲ್ಲ. ಸರ್ಕಾರದ ವಿರುದ್ಧ ದಾಖಲೆಗಳು ಇದ್ದರೆ ಬಿಡುಗಡೆ ಮಾಡಬೇಡಿ ಎನ್ನುವುದಕ್ಕೆ ಆಗಲ್ಲ. ಅವರು ಸದನದಲ್ಲಿಯೇ ಬಿಡುಗಡೆ ಮಾಡಲಿ ಸಂತೋಷ. ನನಗೆ ಆ ಬಗ್ಗೆ ಯಾವುದೇ ಕುತೂಹಲ ಇಲ್ಲ ಎಂದು ಲೇವಡಿ ಮಾಡಿದರು.



ಕುಮಾರಸ್ವಾಮಿ ಅವರು ಒಕ್ಕಲಿಗರನ್ನು ದೂರ ಇಡುತ್ತಾ ಬಂದಿದ್ದಾರೆ. ನನ್ನ ಗೆಲ್ಲೋದೆ ಇಲ್ಲ ಅಂದು ಕೊಂಡಿದ್ದರು. ಮಂಡ್ಯ ಜನ ನನ್ನನ್ನು ಪಾಪದ ಹುಡುಗ ಎಂದು ಗೆಲ್ಲಿಸಿದ್ದಾರೆ. ಈಗ ನಾನು ಮಂತ್ರಿಯೂ ಆಗಿದ್ದೇನೆ. ನಾನು ಹೀಗೆ ಆಗಿರುವುದನ್ನು ಕುಮಾರ ಸ್ವಾಮಿ ಹೇಗೆ ಸಹಿಸುತ್ತಾರೆ. ಅವರಿಗೆ ಸಹಿಸಿಕೊಳ್ಳೋಕೆ ಕಷ್ಟ ಆಗುತ್ತೆ. ನಾವು ಅರ್ಥ ಮಾಡಿಕೊಳ್ಳಬೇಕು. ಮೊದಲಿನಿಂದ ಅವರಿಗೆ ಯಾರನ್ನು ಸಹಿಸಿಕೊಳ್ಳೋಕೆ ಆಗಲ್ಲ. ನಮಗೆ ಅವರ ಮೇಲೆ ಹೊಟ್ಟೆ ಉರಿ ಇಲ್ಲ. ಅವರು ಇನ್ನೂ ಒಂದು ಬಾರಿ ರಾಜ್ಯದ ಸಿಎಂ ಆದರೂ ನಮಗೆ ಬೇಸರ ಇಲ್ಲ. ಹಳೇ ಮೈಸೂರು ಭಾಗದ ಜನರಿಗೆ ಇವರು ಒಕ್ಕಲಿಗರನ್ನು ಬೆಳಸಲ್ಲ ಎಂಬುದು ಗೊತ್ತಾಗಿದೆ ಎಂದು ಆರೋಪಿಸಿದರು.

ನಾನು ಒಕ್ಕಲಿಗ ಎಂದು ನನ್ನ ಮೇಲೆ ಅವರಿಗೆ ದ್ವೇಷ. ನಾನು ಸದನದಲ್ಲಿ ದೇವೇಗೌಡರ ಬಗ್ಗೆ ಮಾತನಾಡಿಲ್ಲ. ಕುಮಾರಸ್ವಾಮಿ ಅವರು ದೇವೇಗೌಡರ ಬಗ್ಗೆ ಮಾತನಾಡಿಲ್ಲ ಅಂದರೆ ಅವರ ಬೇಳೆಕಾಳು ಬೇಯೋದಿಲ್ಲ. ದೇವೇಗೌಡರ ವಿಚಾರವನ್ನು ಯಾರು ಚರ್ಚೆ ಮಾಡಲಿಲ್ಲ. ಅವರೆ ದೇವೇಗೌಡರ ವಿಚಾರ ಎತ್ತುತ್ತಾರೆ. ದೇವೇಗೌಡರು ಹಿರಿಯರು, ಪ್ರಧಾನಿಯಾ ದವರು. ರಾಷ್ಟ್ರ ಹಾಗೂ ರಾಜ್ಯದ ಜನರು ಸೇರಿದಂತೆ ನಾವು ಅವರನ್ನು ಪ್ರೀತಿ ಮಾಡುತ್ತೇವೆ. ಕುಮಾರಸ್ವಾಮಿ ದೇವೇಗೌಡರ ಹೆಸರು ತರಲಿಲ್ಲ ಅಂದ್ರೆ ಅವರಿಗೆ ನೆಮ್ಮದಿ ಇಲ್ಲ ಎಂದು ಕಿಡಿಕಾರಿದರು.

ಮಳೆಗಾಗಿ ಈಗಾಗಲೇ ದೇವರಲ್ಲಿ ಪ್ರಾರ್ಥಿಸಿದ್ದೇನೆ. ಕೆಆರ್‌ಎಸ್‌ನಲ್ಲಿ 84.50 ಅಡಿಗೆ ನೀರು ಏರಿಕೆಯಾಗಿದೆ. 100 ಅಡಿ ದಾಟಿದರೆ ನಮಗೆ ಅನುಕೂಲ ಆಗುತ್ತದೆ ಎಂದರು. ಬಜೆಟ್‌ನಲ್ಲಿ ಮಂಡ್ಯ ಕಡೆಗಣನೆ ವಿಚಾರದ ಬಗ್ಗೆ ಮಾತನಾಡಿ, ಗ್ಯಾರಂಟಿ ಯೋಜನೆಯಡಿ ಮಹಿಳೆಯರಿಗೆ 2 ಸಾವಿರ, ಅಕ್ಕಿ, ಕರೆಂಟ್ ಬಿಲ್ ಮಂಡ್ಯ ಜನರಿಗೆ ತಲುಪುವುದಿಲ್ಲವೇ? ಎಂದ ಅವರು ಮಂಡ್ಯ ಅಭಿವೃದ್ಧಿ ಮಾಡಿ ತೋರಿಸುತ್ತೇವೆ. 3 ವರ್ಷದಲ್ಲಿ ಮಂಡ್ಯ ಬದಲಾವಣೆ ಮಾಡುತ್ತೇವೆ. ವಿಸಿ ನಾಲೆ ಆಧುನೀಕರಣ ಸಂಬಂಧ ರೈತರ, ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ ಎಂದರು.

ಶಾಸಕ ಗಣಿಗ ರವಿಕುಮಾರ್ ಮಾತನಾಡಿ, ಶೃಂಗೇರಿಯಲ್ಲಿ ವೃಷಭ ಶೃಂಗೇಶ್ವರನಿಗೆ ಪೂಜೆ ಸಲ್ಲಿಸಿದರೆ ಮಳೆ ಬರುತ್ತದೆ ಎಂಬ ಪ್ರತೀತಿ ಇದೆ. ಅದರಂತೆ ನಿನ್ನೆ ಪೂಜೆ ಸಲ್ಲಿಸಿ ಹೊರ ಬರುತ್ತಿದ್ದಂತೆ ಮಳೆ ಬಂತು. ಉತ್ತಮ ಮಳೆಯಾಗಿ, ಕೆಆರ್‌ಎಸ್ ತುಂಬಿದರೆ ನಮ್ಮೆಲ್ಲರಿಗೂ ಅನುಕೂಲವಾಗಲಿದೆ ಎಂದರು.

ಬಜೆಟ್‌ನಲ್ಲಿ ಮಂಡ್ಯಕ್ಕೆ ಅನ್ಯಾಯದ ಬಗ್ಗೆ ಮಾತನಾಡಿ, ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿದೆ. ಜಿಲ್ಲೆಯಲ್ಲಿ 60 ಸಾವಿರ ಕುಟುಂಬವಿದೆ. 2 ಸಾವಿರ ಹಣ, ಅಕ್ಕಿ ಎಷ್ಟು ಹಣ ಆಗುತ್ತೆ, ಅದು ಕೂಡ ಬಜೆಟ್ ಅಲ್ವಾ? ಕರೆಂಟ್ ಬಿಲ್ ಕಟ್ಟಂಗಿಲ್ಲ, ಅದು ಕೂಡ ಉಳಿತಾಯ. ನಗರಾಭಿವೃದ್ಧಿ ಇಲಾಖೆಯಿಂದ 50 ಕೋಟಿ ಒಳಚರಂಡಿ ಅಭಿವೃದ್ಧಿಗೆ ನೀಡಿದ್ದಾರೆ. ಹಂತ ಹಂತವಾಗಿ ಮಂಡ್ಯ ಅಭಿವೃದ್ಧಿ ಪಡಿಸುತ್ತೇವೆ ಎಂದರು.

ಕೌಟುಂಬಿಕ ಕಲಹ ಹಿನ್ನಲೆ

ಪತಿಯಿಂದಲೇ ಪತ್ನಿಗೆ ಚಾಕುವಿನಿಂದ ಇರಿತ: ತೀವ್ರ ಗಾಯ

ನಾಗಮಂಗಲ, ಜು.9– ಕೌಟುಂಬಿಕ ಕಲಹ ವಿಕೋಪಕ್ಕೆ ತಿರುಗಿ ಪತಿಯೇ ಪತ್ನಿಗೆ ಚಾಕುವಿನಿಂದ ಇರಿದು ತೀವ್ರವಾಗಿ ಗಾಯಗೊಳಿಸಿರುವ ಘಟನೆ ತಾಲೂಕಿನ ಚಿಣ್ಯದಲ್ಲಿ ನಡೆದಿದೆ.

ತಾಲೂಕಿನ ಗಂಗವಾಡಿ ಗ್ರಾಮದ ನಿವಾಸಿ ಕೃಷ್ಣಮೂರ್ತಿ ಎಂಬಾತ ತನ್ನ ಪತ್ನಿ ಗೌರಮ್ಮನಿಗೆ ಚಾಕುವಿನಿಂದ ಇರಿದು ತೀವ್ರವಾಗಿ ಗಾಯಗೊಳಿಸಿದ್ದು, ಇದೀಗ ಆತನನ್ನು ಪೊಲೀಸರು ಬಂಧಿಸಿದ್ದಾರೆ. ಕಳೆದ ಮೂರು ವರ್ಷಗಳಿಂದ ಕೌಟುಂಬಿಕ ವಿಚಾರಕ್ಕೆ ಇಬ್ಬರ ನಡುವೆ ಜಗಳ ನಡೆಯುತ್ತಿತ್ತು ಎನ್ನಲಾಗಿದೆ. ಇಂದು ವಿಕೋಪಕ್ಕೆ ತಿರುಗಿ ಚಿಣ್ಯದ ಸಾರ್ವಜನಿಕ ಆಸ್ಪತ್ರೆ ಎದುರು ಈ ಘಟನೆ ಸಂಭವಿಸಿದೆ.

ಗಾಯಾಳು ಗೌರಮ್ಮಳಿಗೆ ಪಾಂಡವಪುರ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದ್ದು, ಈ ಸಂಬಂಧ ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಗೌರಮ್ಮಳ ಪತಿ ಕೃಷ್ಣಮೂರ್ತಿ ಯನ್ನು ಪೊಲೀಸರು ಬಂಧಿಸಿದ್ದಾರೆ.

ಕಾರು ಪಲ್ಟಿ: ಐವರಿಗೆ ಗಾಯ

ಮಳವಳ್ಳಿ, ಜು.9– ಚಾಲಕನ ನಿಯಂತ್ರಣ ತಪ್ಪಿದ ಕಾರು ಪಲ್ಟಿ ಹೊಡೆದು ಐವರು ಗಾಯಗೊಂಡಿರುವ ಘಟನೆ ತಾಲೂಕಿನ ಬಾಚನಹಳ್ಳಿ ಬಳಿ ಭಾನುವಾರ ಸಂಜೆ ನಡೆದಿದೆ.

ಕಾರಿನಲ್ಲಿದ್ದ ಬೆಂಗಳೂರಿನ ನೆಲಮಂಗಲದ ಐವರು ಗಾಯಗೊಂಡಿದ್ದಾರೆ. ಇವರೆಲ್ಲಾ ಇನೋವಾ ಕಾರಿನಲ್ಲಿ ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ರಂಗನಬೆಟ್ಟಕ್ಕೆ ತೆರಳಿ ದೇವರ ದರ್ಶನ ಪಡೆದು ಬೆಂಗಳೂರಿಗೆ ವಾಪಸ್ಸಾಗುತ್ತಿದ್ದ ವೇಳೆ ಬಾಚನಹಳ್ಳಿ ಸಮೀಪ ಬೈಕ್ ಅಡ್ಡ ಬಂದಿದೆ. ಚಾಲಕ ಬೈಕ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಪ್ರಯತ್ನಿಸಿದ್ದು, ಈ ವೇಳೆ ನಿಯಂತ್ರಣ ಕಳೆದುಕೊಂಡ ಕಾರು 3 ಸುತ್ತು ಪಲ್ಟಿಯಾಗಿ ರಸ್ತೆ ಬದಿ ದನಕಟ್ಟುವ ಕೊಟ್ಟಿಗೆ ಹಾಗೂ ಪೆಟ್ಟಿ ಅಂಗಡಿಗೆ ಡಿಕ್ಕಿ ಹೊಡೆದಿದ್ದು, ಕಾರು ಹಾಗೂ ಕೊಟ್ಟಿಗೆ ಜಖಂಗೊಂಡಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದ ಐವರಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ಇವರು ಸಚಿವ ಕೃಷ್ಣ ಭೈರೇಗೌಡರ ಸಂಬಂಧಿಕರು ಎನ್ನಲಾಗಿದೆ. ಸ್ಥಳಕ್ಕೆ ಗ್ರಾಮಾಂತರ ಸಿಪಿಐ ಎಂ.ಜಗದೀಶ್ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಣತಿ ಕಾರ್ಯ

ಮಂಡ್ಯ, ಜು.9– ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಮಗ್ಗಪೂರ್ವ ಹಾಗೂ ವಿದ್ಯುತ್ ಮಗ್ಗ ನೇಕಾರರ ಚಟುವಟಿಕೆಗಳಲ್ಲಿ ತೊಡಗಿರುವ ನೇಕಾರರು ಹಾಗೂ ಕೆಲಸಗಾರರ ಗಣತಿ ಹಾಗೂ ಘಟಕಗಳ ಸಮೀಕ್ಷೆ ಕಾರ್ಯ ಅಂತಿಮ ಹಂತದಲ್ಲಿದ್ದು, ಬಿಟ್ಟು ಹೋಗಿರುವ ವಿದ್ಯುತ್ ಮಗ್ಗ ನೇಕಾರರ/ಕೆಲಸಗಾರರ ವಿವರಗಳನ್ನು ಜು.15 ರೊಳಗೆ ಕಚೇರಿಗೆ ಖುದ್ದಾಗಿ ಭೇಟಿ ನೀಡಿ ಮಾಹಿತಿ ನೀಡಲು ಸೂಚಿಸಲಾಗಿದೆ ಹಾಗೂ ಗಣತಿ ಕಾರ್ಯ ಅಂತ್ಯಗೊಂಡ ನಂತರ ಯಾವುದೇ ಕಾರಣಕ್ಕೂ ಸೇಪರ್ಡೆ ಮಾಡಲು ಅವಕಾಶವಿರುವುದಿಲ್ಲ. ಮಾಹಿತಿಗೆ ದೂ: 08232–222366 ಅನ್ನು ಸಂಪರ್ಕಿಸ ಬಹುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ಪೇಟೆ ಪಿಎಲ್‌ಡಿ ಬ್ಯಾಂಕ್‌ಗೆ ಚಂದ್ರೇಗೌಡ ಉಪಾಧ್ಯಕ್ಷ



ಕೆ.ಆರ್.ಪೇಟೆ, ಜು.9– ತಾಲೂಕು ಪಿಎಲ್‌ಡಿ ಬ್ಯಾಂಕ್ ನೂತನ ಉಪಾಧ್ಯಕ್ಷರಾಗಿ ನಾಟನಹಳ್ಳಿ ಚಂದ್ರೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷ ಬಣ್ಣೇನಹಳ್ಳಿ ಧನಂಜಯ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚಂದ್ರೇಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಸಹಕಾರ ಇಲಾಖೆ ಅಧಿಕಾರಿ ಪಾರ್ವತಮ್ಮ ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ಬ್ಯಾಂಕ್ ಕಾರ್ಯದರ್ಶಿ ರವಿಕುಮಾರ್ ಕಾರ್ಯ ನಿರ್ವಹಿಸಿದರು.

ನೂತನ ಉಪಾಧ್ಯಕ್ಷ ಚಂದ್ರೇಗೌಡ ಮಾತನಾಡಿ, ನನ್ನ ಅಧಿಕಾರವಧಿಯಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಬ್ಯಾಂಕ್ ಅಭಿವೃದ್ಧಿಗೆ ಶ್ರಮಿಸುತ್ತೇನೆ. ರೈತರ ಹಿತದೃಷ್ಟಿಯಿಂದ ಬ್ಯಾಂಕ್‌ನಿಂದ ಸಾಲ ನೀಡಿ ಸಕಾಲಕ್ಕೆ ಸಾಲ ವಸೂಲಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಈ ವೇಳೆ ಬ್ಯಾಂಕ್ ಅಧ್ಯಕ್ಷೆ ಜಯಶೀಲ, ಮಾಜಿ ಅಧ್ಯಕ್ಷ ಪುಟ್ಟಸ್ವಾಮಿಗೌಡ, ಕಾಂತರಾಜೇಗೌಡ, ನಾಗರಾಜೇಗೌಡ, ಮಾಜಿ ಉಪಾಧ್ಯಕ್ಷ ಧನಂಜಯ್, ನಿರ್ದೇಶಕರಾದ ಏಜಾಜ್ ಪಾಷಾ, ರಾಧ, ನಾಗೇಶ್, ರಾಜಾನಾಯ್ಕ್, ಬ್ಯಾಂಕ್ ಮಾಜಿ ನಿರ್ದೇಶಕ ಕುಮಾರ್, ಮುಖಂಡರಾದ ರಾಮೇಗೌಡ, ರಾಮಕೃಷ್ಣ ಸೇರಿದಂತೆ ಇತರರಿದ್ದರು.

ಪತ್ನಿ ಕೊಂದ ಪತಿ ಬಂಧನ

ಶ್ರೀರಂಗಪಟ್ಟಣ, ಜು.9– ಕ್ಷುಲ್ಲಕ ಕಾರಣಕ್ಕೆ ಪತ್ನಿಯನ್ನು ಹತ್ಯೆಗೈದ ಪ್ರಕರಣಕ್ಕೆ ಸಂಬಂಧಿಸಿದಂತೆ ಆಕೆಯ ಪತಿಯನ್ನು ಕೆಆರ್‌ಎಸ್ ಪೊಲೀಸರು ಬಂಧಿಸಿದ್ದಾರೆ.



ಹೊಸಸಾಯಪನಹಳ್ಳಿಯ ಸುಬ್ರಹ್ಮಣ್ಯ ಬೆಟ್ಟದ ನಿವಾಸಿ ಗೌತಮ್(24) ಬಂಧಿತ ಆರೋಪಿ. ಈತ ಇತ್ತೀಚೆಗೆ ಕ್ಷುಲ್ಲಕ ಕಾರಣಕ್ಕೆ ತನ್ನ ಪತ್ನಿ ವರ್ಷಿತಾಳೊಂದಿಗೆ ಜಗಳವಾಡುತ್ತಿದ್ದ ವೇಳೆ ಆಕೆಯನ್ನು ಜೋರಾಗಿ ತಳ್ಳಿದ ಪರಿಣಾಮ ತಲೆ ಗೋಡೆಗೆ ಹೊಡೆದು ವರ್ಷಿತಾ ಸ್ಥಳದಲ್ಲೇ ಸಾವನ್ನಪ್ಪಿದ್ದರು. ಈ ವೇಳೆ ಗೌತಮ್ ಪರಾರಿಯಾಗಿದ್ದ. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಗೌತಮ್ ಅರಳಕುಪ್ಪೆ ಗ್ರಾಮದ ಬಳಿ ಇರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಶನಿವಾರ ರಾತ್ರಿ ಆತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಎಸ್ಪಿ ಯತೀಶ್, ಡಿವೈಎಸ್ಪಿ ಮುರಳಿ ಮಾರ್ಗದರ್ಶನದಲ್ಲಿ ಕೆಆರ್‌ಎಸ್ ಠಾಣೆ ಸಿಪಿಐ ಪುನೀತ್, ಎಸ್‌ಐ ಬಸವರಾಜು, ಎಎಸ್‌ಐ ನಟರಾಜು, ಸಿಬ್ಬಂದಿಗಳಾದ ಸತೀಶ, ಶ್ರೀಧರ, ರವೀಶ್, ಪ್ರಭುಸ್ವಾಮಿ, ಮಂಜುನಾಥ್, ದೇವರಾಜು, ಮಂಜೇಗೌಡ ಸೇರಿದಂತೆ ಇನ್ನಿತರರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸದೃಢ ಯುವ ಸಮುದಾಯದಿಂದ ಜಗತ್ತಿನ ಏಳಿಗೆ ಸಾಧ್ಯ

ಸ್ವಾಮಿ ಮುಕ್ತಿದಾನಂದ ಮಹಾರಾಜ್ ಅಭಿಮತ



ಮೈಸೂರು, ಜು.9(ಎಸ್‌ಬಿಡಿ)– ಸದೃಢ ಯುವ ಸಮುದಾಯದಿಂದ ಜಗತ್ತಿನ ಏಳಿಗೆ ಸಾಧ್ಯ ಎಂದು ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಹೇಳಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಶ್ರೀ ವಿವೇಕಾನಂದ ಕಲಾಕೇಂದ್ರ ಹಾಗೂ ಶ್ರೀ ರಾಮಕೃಷ್ಣ ವಿದ್ಯಾಶಾಲೆ ಸಹಯೋಗದಲ್ಲಿ ವಿದ್ಯಾಶಾಲೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ 'ವಂದೇ ಭಾರತ' ನೃತ್ಯ–ದೃಶ್ಯ ರೂಪಕ ವಿಶೇಷ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನಿಮ್ಮಲ್ಲಿ ನಿಮಗೆ ನಂಬಿಕೆಯಿರಬೇಕು. ಧೃಡವಾದ ಆತ್ಮವಿಶ್ವಾಸವಿದ್ದಾಗ ಮಾತ್ರ ಯಶಸ್ಸು ಖಚಿತ. ಮಹಾ ಕಾರ್ಯಗಳು ಮಹಾ ಸಂಕಲ್ಪದಿಂದ ಮಾತ್ರ ಸಾಧ್ಯ. ನಾವು ಹೇಡಿಗಳಾಗಬಾರದು, ಧೈರ್ಯದಿಂದ ಮುನ್ನಡೆಯಬೇಕು. ಸ್ವಾಮಿ ವಿವೇಕಾನಂದರ ಇಂತಹ ಸಂದೇಶಗಳು ಎಂದಿಗೂ ಸ್ಫೂರ್ತಿದಾಯಕ ಎಂದು ತಿಳಿಸಿದರು.

ಆದರ್ಶ ಪ್ರಾಯರಾದ ಸ್ವಾಮಿ ವಿವೇಕಾನಂದರ ಸಂದೇಶಗಳಿಂದ ಸ್ವಾತಂತ್ರ್ಯ ಸಂಗ್ರಾಮದ ನೇತಾರರಾದ ಮಹಾತ್ಮ ಗಾಂಧೀಜಿ ಹಾಗೂ ಅವರ ಅನುಯಾಯಿಗಳು ಪ್ರಭಾವಿತರಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ಅಮರರಾದರು. ಇಂತಹ ವಿಚಾರಗಳನ್ನು ಯುವ ಜನತೆ ಅರಿಯಬೇಕು. ಏಕೆಂದರೆ ಜಗತ್ತಿನ ಏಳಿಗೆಗೆ ಬಲಿಷ್ಠ, ಸದೃಢ ಯುವ ಪೀಳಿಗೆ ಅಗತ್ಯ ಎಂದರು.

ಈ ನಿಟ್ಟಿನಲ್ಲಿ ಶ್ರೀ ವಿವೇಕಾನಂದ ಕಲಾ ಕೇಂದ್ರದ ವತಿಯಿಂದ 'ವಂದೇ ಭಾರತ' ವಿಶೇಷ ನೃತ್ಯ–ದೃಶ್ಯ ರೂಪಕವನ್ನು ಪ್ರಸ್ತುತಪಡಿಸಿದ್ದು ಅಭಿನಂದನಾರ್ಹ. ದೇಶಾದ್ಯಂತ ಸಂಚರಿಸಿ ವೈವಿಧ್ಯಮಯ ಮೌಲ್ಯಾಧಾರಿತ ಸಾಂಸ್ಕೃತಿಕ ಕಾರ್ಯಕ್ರಮ ಗಳ ಮೂಲಕ ರಾಷ್ಟ್ರ ಜಾಗೃತಿ ಹಾಗೂ ಸಂಸ್ಕೃತಿ ಮಹತ್ವ ಸಾರುವ ಮೂಲಕ ಈ ಕಲಾ ತಂಡ ದೇಶಕ್ಕೆ ಉತ್ತಮ ಸೇವೆ ಸಲ್ಲಿಸುತ್ತಿದೆ ಎಂದು ಪ್ರಶಂಸಿಸಿದರು. ಕಾರ್ಯಕ್ರಮದಲ್ಲಿ ಶ್ರೀ ವಿವೇಕಾನಂದ ಕಲಾಕೇಂದ್ರದ ಡಾ.ವಿ.ನಾಗರಾಜ್ ಹಾಗೂ ಡಾ.ಶ್ವೇತಾ ಮತ್ತಿತರರು ಉಪಸ್ಥಿತರಿದ್ದರು.

ಮುಂದಿನ ವರ್ಷ ಎಲ್ಲಾ ಮಠ–ಮಾನ್ಯಗಳಿಗೆ ಅನುದಾನ

ವಿಜಯಪುರ, ಜು.9– ನಮಗೆ ಮಠ ಮಾನ್ಯಗಳ ಬಗ್ಗೆ ಅಪಾರ ಗೌರವ ಇದೆ. ಈ ವರ್ಷ ನಾವು ಗ್ಯಾರಂಟಿಗಳಲ್ಲಿ ಘೋಷಣೆ ಮಾಡಿದ್ದೇವೆ. ಮುಂದಿನ ವರ್ಷ ಎಲ್ಲಾ ಮಠ–ಮಾನ್ಯಗಳಿಗೆ ಅನುದಾನ ಕೊಡುತ್ತೇವೆ. ಸಿಸಿ ಪಾಟೀಲ್ ಅವರ ಮಠ ಇದ್ದರೂ ಹೇಳಲಿ ಎಂದು ಟಾಂಗ್ ಕೊಡುವ ಮೂಲಕ ಸಚಿವ ಎಂಬಿ ಪಾಟೀಲ್ ಮಠಗಳಿಗೆ ಅನುದಾನ ಕೊಡುವ ಭರವಸೆ ನೀಡಿದ್ದಾರೆ.



ಮಠ ಮಾನ್ಯಗಳ ಅನುದಾನ ಕಡಿತ ಮಾಡಲಾಗುತ್ತಿರುವ ಬಗ್ಗೆ ಮಾಜಿ ಸಚಿವ ಸಿಸಿ ಪಾಟೀಲ್ ಆರೋಪ ಮಾಡಿರುವ ವಿಚಾರವಾಗಿ ಮಾತನಾಡಿದ ಎಂಬಿ ಪಾಟೀಲ್, ನಾವು ಭೇದ–ಭಾವ ಮಾಡಲ್ಲ. ಎಲ್ಲರಿಗೂ ಅನುದಾನ ಕೊಡುತ್ತೇವೆ. ಹಿಂದೂ ಮಠಗಳು, ಕ್ರಿಶ್ಚಿಯನ್ ಚರ್ಚ್‌ಗಳು, ಮುಸ್ಲಿಂ ಮಸೀದಿ, ಜೈನರ ಬಸದಿ, ಬೌದ್ಧ ವಿಹಾರಗಳನ್ನು ಸಮಾನವಾಗಿ ಕಾಣುತ್ತೇವೆ. ಎಲ್ಲರಿಗೂ ಹಣಕಾಸಿನ ಅನುದಾನ ಕೊಡುತ್ತೇವೆ. 1 ವರ್ಷ ಸಿಸಿ ಪಾಟೀಲ್ ತಾಳ್ಮೆಯಿಂದಿರಲಿ ಎಂದರು.

ಬಿಜೆಪಿ ಸರ್ಕಾರದ ಮೇಲೆ ಗಂಭೀರ ಆರೋಪ ಮಾಡಿದ ಎಂಬಿ ಪಾಟೀಲ್, ಸಿ.ಸಿ.ಪಾಟೀಲ್, ನೀರಾವರಿ ಇಲಾಖೆಯಲ್ಲಿ 10–15 ಸಾವಿರ ಕೋಟಿ ರೂ. ಹೆಚ್ಚು ಖರ್ಚು ಮಾಡಿದ್ದಾರೆ. ಬಜೆಟ್‌ಗಿಂತ ಹೆಚ್ಚು ಯಾಕೆ ಖರ್ಚು ಮಾಡಿದ್ದೀರಿ. ಜನರನ್ನು ಯಾಕೆ ಮರಳು ಮಾಡಿದ್ದೀರಿ. ಇದರ ಹಿಂದಿನ ಉದ್ದೇಶ ಏನು ಎಂದು ಪ್ರಶ್ನಿಸಿದ್ದಾರೆ.

ಲೂಟಿ ಹೊಡೆಯಲು ಬಜೆಟ್‌ಗಿಂತ ಹೆಚ್ಚಿನ ಅನುದಾನ ಖರ್ಚು ಮಾಡಿದ್ದೀರಿ. ಬಜೆಟ್‌ಗಿಂತ ಹೆಚ್ಚು ಖರ್ಚು ಮಾಡುವಾಗ ನಿಮ್ಮ ಶಿಸ್ತು ಎಲ್ಲಿತ್ತು? ನೀವು ಮಾಡಿದ ಅಕ್ರಮಗಳನ್ನು ಅಶಿಸ್ತನ್ನು ಎಳೆ–ಎಳೆಯಾಗಿ ನಮ್ಮ ಸಿಎಂ ಬಜೆಟ್ ಪುಸ್ತಕದಲ್ಲಿಯೇ ಹೇಳಿ ಬಿಟ್ಟಿದ್ದಾರೆ. ಇವರ ಮುಖ ಏನು ಉಳಿದಿಲ್ಲ ಎಂದು ಹೇಳಿದರು.

ದೊಡ್ಡಬಳ್ಳಾಪುರ ಎಂಜಿನಿಯರ್ ಮನೆಯಲ್ಲಿ ಇವಿಎಂ ಯಂತ್ರಗಳು ಪತ್ತೆ


ಚಿಕ್ಕಬಳ್ಳಾಪುರ, ಜು.9– ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಮೋಪರಹಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿ ಸಂಬಂಧ ಹಳೆಯ ಮನೆಯನ್ನು ನೆಲಸಮಗೊಳಿಸುವಾಗ ಇವಿಎಂ ಕಂಟ್ರೋಲ್ ಯೂನಿಟ್‌ಗಳು ಪತ್ತೆ ಆಗಿವೆ.

ದೊಡ್ಡಬಳ್ಳಾಪುರ ನಿರ್ಮಿತಿ ಕೇಂದ್ರದ ಎಇಇ ಶಿವಕುಮಾರ್ ಎಂಬುವವರ ಮನೆಯಲ್ಲಿ ಈ ಯಂತ್ರಗಳು ಪತ್ತೆ ಆಗಿವೆ ಎಂದು ತಹಶೀಲ್ದಾರ್ ಮೋಹನಕುಮಾರಿ ತಿಳಿಸಿದ್ದಾರೆ. ಇವು 2018ರ ಚುನಾವಣೆಯಲ್ಲಿ ಬಳಸಿ ತಿರಸ್ಕೃತಗೊಂಡ ಇವಿಎಂ ಕಂಟ್ರೋಲ್ ಯೂನಿಟ್‌ಗಳು ಎಂದು ತಹಶೀಲ್ದಾರ್ ಮಾಹಿತಿ ಹಂಚಿಕೊಂಡಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕಾಗಿ ಮನೆಯನ್ನು ನೆಲಸಮ ಮಾಡಲಾಗುತ್ತಿತ್ತು. ಈ ವೇಳೆ ಮನೆಯ ಅವಶೇಷಗಳಲ್ಲಿ ಇವಿಎಂ ಕಂಟ್ರೋಲ್ ಯೂನಿಟ್ ಪತ್ತೆ ಆಗಿವೆ. ಯೂನಿಟ್‌ಗಳು ಪತ್ತೆಯಾದ ಹಿನ್ನೆಲೆ ಸ್ಥಳಕ್ಕೆ ತಹಶೀಲ್ದಾರ್ ಮೋಹನಕುಮಾರಿ ಭೇಟಿ ನೀಡಿ ಯಂತ್ರಗಳನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೆ ಈ ಕುರಿತಂತೆ ಶಿವಕುಮಾರ್ ಅವರಿಗೆ ನೋಟೀಸ್ ನೀಡಲಾಗಿದೆ.

ಮುಂದಿನ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿ ಶಿವಶಂಕರ್ ಅವರಿಗೆ ವರದಿಯನ್ನು ನೀಡಿದ್ದಾರೆ. ಸದ್ಯ ರಿಜೆಕ್ಟ್ ಆಗಿರುವ ಇವಿಎಂ ಕಂಟ್ರೋಲ್ ಯೂನಿಟ್‌ಗಳನ್ನು ಮನೆಯಲ್ಲಿ ಇರಿಸಿಕೊಂಡಿದ್ದು ಯಾಕೆ ಇದು 2018ರ ಯಂತ್ರಗಳೇ ಎಂಬ ಪ್ರಶ್ನೆ ಕಾಡುತ್ತಿದ್ದು ತನಿಖೆಯ ನಂತರ ಸ್ಪಷ್ಟ ಉತ್ತರ ಸಿಗಲಿದೆ.

ಬಿಜೆಪಿ ಮಾಜಿ ಶಾಸಕ ಸಿಎಂ ನಿಂಬಣ್ಣವರ್ ನಿಧನ



ಬೆಂಗಳೂರು, ಜು.9– ಅನಾರೋಗ್ಯದಿಂದ ಬಳಲುತ್ತಿದ್ದ ಬಿಜೆಪಿ ಮಾಜಿ ಶಾಸಕ ಸಿ.ಎಂ. ನಿಂಬಣ್ಣವರ್ (77) ಬನ್ನೇರುಘಟ್ಟದ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದಾರೆ.

ಧಾರವಾಡ ಜಿಲ್ಲೆ ಕಲಘಟಗಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾಗಿದ್ದ ಅವರು ಸಾಕಷ್ಟು ಜನಪ್ರಿಯತೆಯನ್ನು ಹೊಂದಿದ್ದರು. 2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದರು. ಆದರೆ, ಈ ಬಾರಿ ಚುನಾವಣೆಯಲ್ಲಿ ಅವರಿಗೆ ಬಿಜೆಪಿಯಿಂದ ಟಿಕೆಟ್ ನಿರಾಕರಿಸಲಾಗಿತ್ತು.

ಸಹಕಾರಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿ

ಒಂದನೇ ಪುಟದಿಂದ

ಶತಮಾನೋತ್ಸವದಲ್ಲಿ ಭಾಗವಹಿಸಲು ಬಹಳ ಆಸಕ್ತಿ ಮತ್ತು ಗೌರವದಿಂದ ಬಂದಿದ್ದೇನೆ. ಪ್ರಾರಂಭದಿಂದ ಈವರೆಗೆ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕ ಮಂಡಳಿಯವರು, ಅಧಿಕಾರಿ–ಸಿಬ್ಬಂದಿ ವರ್ಗದ ಕೊಡುಗೆ ಈ ಬ್ಯಾಂಕಿನ ಯಶಸ್ಸಿಗೆ ಕಾರಣವಾಗಿದೆ ಎಂದರು.

ಬ್ಯಾಂಕ್‌ನಲ್ಲಿ 44 ಕೋಟಿ ಠೇವಣಿ, 18 ಕೋಟಿ ಕ್ಷೇಮ ನಿಧಿ ಇದ್ದು, ಎಲ್ಲಾ ಸೇರಿ 70 ಕೋಟಿಗೂ ಅಧಿಕ ಹಣವಿದೆ. ಆದರೆ ಸಾಲ ತೆಗೆದುಕೊಂಡಿರುವ ಮೊತ್ತ ಕೇವಲ 29 ಕೋಟಿ ರೂ. ಮಾತ್ರ. ಠೇವಣಿದಾರರಿಂದ ತೆಗೆದುಕೊಳ್ಳುವ ಹಣದಲ್ಲಿ ಸಾಲ ವಿತರಣೆ ಮಾಡಿದಷ್ಟು ಆರ್ಥಿಕವಾಗಿ ಬ್ಯಾಂಕ್ ಸದೃಢಗೊಳ್ಳಲು ಸಾಧ್ಯ. ಆಗ ಸದಸ್ಯರಿಗೂ ಡಿವಿಡೆಂಡ್ ಕೊಡಲು ಸಾಧ್ಯವಾಗುತ್ತದೆ. ಇಲ್ಲಿ ಡಿವಿಡೆಂಡ್ ಕೊಡಲು ಕಷ್ಟವಿದೆ ಎಂದು ಅನಿಸುತ್ತದೆ. ಈ ಸಂಸ್ಥೆಯ ಇತಿಹಾಸ ಉತ್ತಮವಾಗಿದೆ. ಇಲ್ಲಿನ ಸದಸ್ಯರ ನಿರೀಕ್ಷೆಗೆ ಪೂರಕವಾಗಿ ಸ್ಪಂದಿಸುವ ಅವಕಾಶ ಈ ಬ್ಯಾಂಕಿಗೆ ಬರಲೆಂದು ಆಶಿಸುತ್ತೇನೆ. ಕ್ಷೇಮ ನಿಧಿಯಲ್ಲಿ ತಲಾ 5 ಸಾವಿರ ನಿಗದಿ ಮಾಡಿರುವುದು ಸಾಲದು. ಅದನ್ನು ಹೆಚ್ಚಳ ಮಾಡಿಕೊಳ್ಳಬೇಕೆಂಬುದು ನನ್ನ ಸಲಹೆ. ಈ ಬ್ಯಾಂಕ್ ಆರೋಗ್ಯಕರ ರೀತಿಯಲ್ಲಿ ಇನ್ನು ಬೃಹದಾಕಾರವಾಗಿ ಬೆಳೆಯಲಿ ಎಂದು ಹಾರೈಸಿದರು.

ಮೈಸೂರು ತನ್ನದೇ ಆದ ಉನ್ನತ ಇತಿಹಾಸ ಹೊಂದಿದೆ. ಎಲ್ಲಾ ರಂಗದಲ್ಲೂ ರಾಜ್ಯಕ್ಕೆ ಮಾತ್ರವಲ್ಲದೇ ರಾಷ್ಟ್ರಕ್ಕೇ ಮಾರ್ಗದರ್ಶನ ನೀಡುವ ಸಾಮರ್ಥ್ಯ ಹೊಂದಿದ ನೆಲವಾಗಿದೆ. ಮೈಸೂರಿಗೆ ಭೇಟಿ ನೀಡಿದಾಗ ನಮ್ಮಂಥವರಿಗೂ ಹೊಸ ಆಲೋಚನೆಗಳು ಬರಲಿವೆ. ಮೈಸೂರು ಎಲ್ಲಾ ರೀತಿಯಲ್ಲಿಯೂ ದೇಶಕ್ಕೆ ಮಾದರಿಯಾಗಬಲ್ಲ ಜನತೆಯನ್ನು ಒಳಗೊಂಡಿದೆ ಎಂದು ಅಭಿಮಾನ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಸರ್ಕಾರದಿಂದ ನಾಮನಿರ್ದೇಶನಗೊಂಡ ಸದಸ್ಯರೇ ಅಧ್ಯಕ್ಷರಾಗುವ ಪರಿಪಾಠ ಆರಂಭವಾಗಿದ್ದು, ಇದು ಒಳ್ಳೆಯ ಬೆಳವಣಿಗೆಯಲ್ಲ. ಇದರಿಂದ 10–15 ವರ್ಷಗಳಿಂದ ಹೋರಾಟ ಮಾಡಿ ಆಯ್ಕೆಯಾಗಿ ಬಂದವರು ಅವಕಾಶ ವಂಚಿತರಾಗುತ್ತಾರೆ. ಜೊತೆಗೆ ಆಡಳಿತ ಮಂಡಳಿಯಲ್ಲಿ ದೊಡ್ಡ ಅಸಮಾಧಾನ ಸೃಷ್ಟಿಗೂ ಕಾರಣವಾಗುತ್ತದೆ. ಈ ಸಂಬಂಧ ಸರ್ಕಾರ ಗಮನಹರಿಸಬೇಕು. ಜೊತೆಗೆ ಸಹಕಾರಿ ನ್ಯಾಯಾಲಯದ ವ್ಯವಸ್ಥೆಗೊಳಿಸಬೇಕೆಂದು ಕೋರಿದರು.

ಇದೇ ವೇಳೆ ಸ್ಮರಣ ಸಂಚಿಕೆ 'ಶತಸಿರಿ' ಬಿಡುಗಡೆ ಮಾಡಲಾಯಿತು. ಅಲ್ಲದೆ, ಬ್ಯಾಂಕಿನ ಮಾಜಿ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ವಿವಿಧ ಮಠಾಧೀಶರು ಕಳುಹಿಸಿರುವ ಶತಮಾನೋತ್ಸವದ ಶುಭ ಸಂದೇಶವನ್ನು ಬ್ಯಾಂಕಿನ ಸದಸ್ಯೆ ಎಂ.ಎ. ಹೇಮಲತ ವಾಚಿಸಿದರು. ಬ್ಯಾಂಕಿನ ಅಧ್ಯಕ್ಷ ಎನ್.ಶ್ರೀನಿವಾಸ ಅಧ್ಯಕ್ಷತೆ ವಹಿಸಿದ್ದರು. ಮೇಯರ್ ಶಿವಕುಮಾರ್, ಶಾಸಕರಾದ ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮುಡಾ ಮಾಜಿ ಅಧ್ಯಕ್ಷರಾದ ಬಸವೇಗೌಡ, ಹೆಚ್.ವಿ.ರಾಜೀವ್, ಬ್ಯಾಂಕಿನ ಉಪಾಧ್ಯಕ್ಷ ಆರ್.ಅನಂತರಾಮು, ಸದಸ್ಯರಾದ ಕೆ.ಜಿ.ಸತೀಶ್, ಟಿ.ಎಸ್.ರವಿಶಂಕರ್, ಡಾ.ಸುಜಾತ ಎಸ್.ರಾವ್, ಮಡ್ಡಿಕೆರೆ ಗೋಪಾಲ್ ಮತ್ತಿತರರು ಹಾಜರಿದ್ದರು.

ಸಹಕಾರಿ ಕ್ಷೇತ್ರ ಎಲ್ಲರನ್ನೂ ಒಳಗೊಂಡು ಅಭಿವೃದ್ಧಿ ಕಾಣಬೇಕು

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ಮೈಸೂರು,ಜು.9(ಪಿಎಂ)–ಸಹಕಾರಿ ಕ್ಷೇತ್ರ ಕೇವಲ ಕೆಲವೇ ಜನರ ಸ್ವತ್ತುಗಳಾಗದೇ, ಕೆಲವೇ ಜನರ ಹಿತಕ್ಕೆ ಸೀಮಿತವಾಗದೇ ಎಲ್ಲರನ್ನು ಒಳಗೊಂಡು ಅಭಿವೃದ್ಧಿ ಕಾಣಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹೇವಪ್ಪ ಹೇಳಿದರು.

ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ತತ್ವದ ಮೂಲಕ ಸಮಾನತೆ, ಸ್ವಾವಲಂಬನೆಯಿಂದ ಬದುಕುವಂತಹ ಸ್ವರಾಜ್ಯ ಕಲ್ಪನೆಗೆ ಹೆಚ್ಚು ಒತ್ತು ನೀಡಬೇಕು. ಈ ನಿಟ್ಟಿನಲ್ಲಿ ನಮ್ಮ ಸಹಕಾರ ಕ್ಷೇತ್ರ ಕೆಲಸ ಮಾಡಬೇಕು ಎಂದರು.

ಸಹಕಾರ ತತ್ವದಡಿ ಆರ್ಥಿಕ ಸ್ವಾವಲಂಬನೆ ಆಗಬೇಕೆಂಬುದು ನಮ್ಮ ಸಂವಿಧಾನದ ಆಶಯ ಕೂಡ. ಗಾಂಧೀಜಿ ಮತ್ತು ಅಮರ್ತ್ಯ ಸೇನ್ ಅವರ ನಿಲುವು ಸಹ ಇದೇ. 'ಅಂಬೇಡ್ಕರ್ ನನ್ನ ಅರ್ಥಶಾಸ್ತ್ರದ ಶಿಕ್ಷಕರು' ಎಂದು ತಮಗೆ ನೋಬೆಲ್ ಪ್ರಶಸ್ತಿ ಬಂದಾಗ ಅಮರ್ತ್ಯ ಸೇನ್ ಹೇಳಿಕೊಂಡಿದ್ದಾರೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಆರ್ಥಿಕ ಪರಿಕಲ್ಪನೆಯಡಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸ್ಥಾಪನೆಗೊಂಡಿತು. ಎಲ್ಲಾ ಸಹಕಾರ ಬ್ಯಾಂಕ್‌ಗಳು ಆರ್‌ಬಿಐ ಮಾರ್ಗಸೂಚಿಯಂತೆಯೇ ಕಾರ್ಯನಿರ್ವಹಿಸಬೇಕು. ಸಣ್ಣರಾಮನಗೌಡ ಸಿದ್ದರಾಮನಗೌಡ ಪಾಟೀಲ ಕರ್ನಾಟಕ ಸಹಕಾರ ಕ್ಷೇತ್ರದ ಪಿತಾಮಹ. ಕರ್ನಾಟಕ ಸಹಕಾರ ಚಳುವಳಿಯ ತೊಟ್ಟಿಲು. 1923ರಲ್ಲಿ ಪ್ರೊ.ಎನ್.ಎಸ್. ಸುಬ್ಬರಾವ್ ಅವರ ಮುಂದಾಲೋಚನೆಯ ಪರಿಣಾಮ ಸ್ಥಾಪನೆಯಾದ ಈ ಬ್ಯಾಂಕ್ ಇಂದು 100 ವರ್ಷಗಳನ್ನು ಪೂರೈಸಿದೆ. ಈ ಸಂಸ್ಥೆ 100 ವರ್ಷಗಳ ಸಾರ್ಥಕ ಜೀವನ ನಡೆಸಿದೆ ಎಂದು ಶತಮಾನೋತ್ಸವದ ಶುಭಾಷಯ ಕೋರಿದರು.

ಸಹಕಾರಿ ರತ್ನ ಪ್ರಶಸ್ತಿ ಪುನರಾರಂಭಿಸಿ, ಮೀಸಲಾತಿ ಜಾರಿಗೆ ವಿಶ್ವನಾಥ್ ಮನವಿ

ಮೈಸೂರು,ಜು.9(ಪಿಎಂ)– ಸಹಕಾರಿ ರತ್ನ ಪ್ರಶಸ್ತಿ ಪುನರಾರಂಭಿಸಬೇಕು ಎಂದು ಮನವಿ ಮಾಡಿದ ಎಂಎಲ್‌ಸಿ ಎ.ಹೆಚ್.ವಿಶ್ವನಾಥ್, ಸಹಕಾರಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೊಳಿಸಬೇಕೆಂದೂ ಸಹಕಾರ ಸಚಿವರಲ್ಲಿ ಕೋರಿದರು.

ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, 1904ರಲ್ಲಿ ಗದಗ ಜಿಲ್ಲೆಯ ಹಳ್ಳಿಯೊಂದರಲ್ಲಿ ಸಣ್ಣರಾಮನಗೌಡ ಸಿದ್ದರಾಮನಗೌಡ ಪಾಟೀಲ ಅವರು (ಎಸ್.ಎಸ್.ಪಾಟೀಲ) ಸಹಕಾರಿ ಚಳವಳಿಯನ್ನು ಇಡೀ ಭಾರತದಲ್ಲಿ ಪ್ರಥಮವಾಗಿ ಪ್ರಾರಂಭಿಸಿದರು. ನಾನು ಸಹಕಾರ ಮಂತ್ರಿ ಇದ್ದಾಗ ಎಸ್.ಎಸ್.ಪಾಟೀಲರ ಹೆಸರಿನಲ್ಲಿ ಸಹಕಾರಿ ರತ್ನ ಪ್ರಶಸ್ತಿಯನ್ನು ಪ್ರಾರಂಭ ಮಾಡಿದ್ದೆ. ತದನಂತರ ಈ ಪ್ರಶಸ್ತಿ ಪ್ರದಾನ ನಿಲ್ಲಿಸಲಾಗಿದೆ. ಮತ್ತೆ ಪ್ರಾರಂಭಿಸಲು ಕ್ರಮ ವಹಿಸಬೇಕೆಂದು ಮನವಿ ಮಾಡಿದರು.

2004ರಲ್ಲಿ ಸಹಕಾರ ಸಚಿವನಾಗಿದ್ದಾಗ, ಸಹಕಾರಿ ವಲಯದಲ್ಲಿ ಮೀಸಲಾತಿ ಜಾರಿಗೊಳಿಸಬೇಕೆಂದು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಸಚಿವ ಸಂಪುಟದ ಉಪಸಮಿತಿ ರಚನೆಯಾಯಿತು. ಕೆ.ಹೆಚ್.ರಂಗನಾಥ್ ಅವರು ಈ ಉಪಸಮಿತಿ ಅಧ್ಯಕ್ಷರಾದರು. 6 ತಿಂಗಳು ಮುಂಗಡವಾಗಿ ಚುನಾವಣೆ ನಿಗದಿಯಾದ್ದರಿಂದ ಉಪಸಮಿತಿಯ ಕಾರ್ಯ ಪ್ರಾರಂಭವಾಗಲಿಲ್ಲ ಎಂದರು.


ಸ್ಥಳೀಯ ಸಂಸ್ಥೆ ಮಾದರಿ ಮೀಸಲು: ಸಹಕಾರಿ ವಲಯದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ಹೀಗಾಗಿ ಸ್ಥಳೀಯ ಸಂಸ್ಥೆಗಳ ಮಾದರಿಯಲ್ಲಿ ಮೀಸಲಾತಿ ಜಾರಿಗೆ ತರಬೇಕು. ನೇಮಕಾತಿ, ಸಾಲ ವಿತರಣೆ ಮತ್ತು ಆಡಳಿತ ಮಂಡಳಿಯಲ್ಲಿ ಮೀಸಲಾತಿ ಜಾರಿಯಾಗಬೇಕು. ಸಹಕಾರಿ ವಲಯದಲ್ಲಿ ಮೀಸಲಾತಿ ತರುವ ಮೂಲಕ ಎಲ್ಲರೂ ಇದರಲ್ಲಿ ಭಾಗವಹಿಸುವ ಅವಕಾಶವನ್ನು ಸರ್ಕಾರ ಮಾಡಿಕೊಡಬೇಕು ಎಂದು ಕೋರಿದರು.

ಯಶಸ್ವಿನಿ ಪರಿಣಾಮಕಾರಿ ಅನುಷ್ಠಾನಗೊಳಿಸಿ: ನಾನು ಸಹಕಾರ ಸಚಿವರಾಗಿದ್ದಾಗ ಯಶಸ್ವಿನಿ ಆರೋಗ್ಯ ವಿಮಾ ಯೋಜನೆ ಜಾರಿಗೊಳಿಸಲಾಯಿತು. ಹಲವು ಕಾರಣಗಳಿಂದ ಸ್ಥಗಿತವಾಗಿದ್ದ ಈ ಯೋಜನೆ ಕಳೆದ ಬಸವರಾಜ ಬೊಮ್ಮಾಯಿ ಸರ್ಕಾರದಲ್ಲಿ ಒತ್ತಾಯದ ಮೇರೆಗೆ ಮತ್ತೆ ಪ್ರಾರಂಭವಾಗಿದೆ. ಈ ಯೋಜನೆಯಿಂದ ಇಡೀ ಗ್ರಾಮೀಣ ಜನತೆಗೆ ಆರೋಗ್ಯ ಸೇವೆ ಲಭ್ಯವಾಗಲಿದೆ. ಈ ಯೋಜನೆಗೆ ಹೆಚ್ಚು ಒತ್ತು ನೀಡಬೇಕು ಎಂದು ಮನವಿ ಮಾಡಿದರು.



ಕಾಫಿ, ಅಡಿಕೆ ತೋಟಕ್ಕೆ ಕಾಡಾನೆಗಳ ಲಗ್ಗೆ, ಅಪಾರ ನಷ್ಟ

ಕಾಫಿ, ಅಡಿಕೆ, ತೆಂಗು, ಕರಿಮೆಣಸು, ಬಾಳೆ ಸಂಪೂರ್ಣ ನಾಶ



ಕಾಡಾನೆ ಹಾವಳಿ ತಡೆಯದಿದ್ದರೆ ರಸ್ತೆ ತಡೆ ನಡೆಸಿ ಪ್ರತಿಭಟನೆ



ನಾಪೋಕ್ಲು, ಜು.9– ಸಮೀಪದ ಕಕ್ಕಬೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಮರಂದೋಡ ಗ್ರಾಮದಲ್ಲಿ ಬೀಡುಬಿಟ್ಟಿರುವ ಆನೆಗಳು ಶನಿವಾರ ರಾತ್ರಿ ಚಂಡೀರ ಗಪ್ಪು ಗಣಪತಿಯವರ ಅಡಿಕೆ ತೋಟಕ್ಕೆ ಲಗ್ಗೆ ಇಟ್ಟು ಅಪಾರ ಪ್ರಮಾಣದ ನಷ್ಟ ಉಂಟುಮಾಡಿವೆ.

ಇದೇ ರೀತಿ ಗ್ರಾಮದ ಕಾಫಿ ಬೆಳೆಗಾರರಾದ ಚಂಡೀರ ಜಗದೀಶ್, ರನ್ನು ಉತ್ತಪ್ಪ, ದೇವರಾಜ್, ಪೂಣಚ್ಚ ಸೇರಿದಂತೆ ಇತರರ ತೋಟಗಳಿಗೂ ಕಾಡಾನೆಗಳು ನುಗ್ಗಿ ಕಾಫಿ, ಅಡಿಕೆ, ತೆಂಗು, ಕರಿ ಮೆಣಸು, ಬಾಳೆ ಸೇರಿದಂತೆ ಕೃಷಿ ಉತ್ಪನ್ನ ಗಿಡಗಳನ್ನು ಧ್ವಂಸ ಮಾಡಿ ಬೆಳೆಗಳನ್ನು ನಾಶ ಪಡಿಸಿದ್ದಲ್ಲದೆ ಕೆರೆಗಳನ್ನು ಈಜುಕೊಳಗಳನ್ನಾಗಿ ಮಾಡಿಕೊಂಡಿದ್ದರಿಂದ ಭಾರೀ ನಷ್ಟ ಸಂಭವಿಸಿದೆ. ಚೆಯ್ಯಂಡಾಣೆ ನರಿಯಂಡಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದಲ್ಲಿ ಕಾಡಾನೆಗಳ ಉಪಟಳದಿಂದ ಗ್ರಾಮಸ್ಥರು ನಲುಗುವಂತಾಗಿದೆ. ಕಳೆದ ಕೆಲವು ದಿನಗಳಿಂದ ಗ್ರಾಮದಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳು ಒಂದು ಕಡೆ ಆದರೆ ಇನ್ನೊಂದು ಕಡೆ ಕಕ್ಕಬೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಮರಂದೋಡ ಗ್ರಾಮದಲ್ಲೂ ಕಾಡಾನೆಗಳ ಹಾವಳಿ ನಿರಂತರವಾಗಿದ್ದು, ಪುನರಾವರ್ತನೆಯಾಗಿ ಭಾನುವಾರ ಬೆಳಿಗ್ಗೆ ಕಾಡಾನೆಗಳ ಹಿಂಡು ಗ್ರಾಮಸ್ಥರಿಗೆ ಕಾಣಿಸಿಕೊಂಡಿದೆ.

ಕಾಡಾನೆಗಳ ಉಪಟಳದಿಂದ ತೋಟಗಳಲ್ಲಿ ದುಡಿಯುವ ಕಾರ್ಮಿಕರು ಭಯಗೊಂಡು ಒಂದು ವಾರದಿಂದ ರಜೆ ಮಾಡಿ ಲೈನ್ ಮನೆಯಲ್ಲಿ ಕೂರುವ ಪ್ಪರಿಸ್ಥಿತಿ ಉದ್ಭವಿಸಿದೆ.ಅಧಿಕಾರಿಗಳು ಸಮಸ್ಯೆಗೆ ಸ್ಪಂದಿಸುವಂತೆ ಕೋರಿರುವ ಗ್ರಾಮಸ್ಥರು ಆನೆಗಳ ಸ್ಥಳಾಂತರ ಅಥವಾ ಪರ್ಯಾಯ ವ್ಯವಸ್ಥೆಗೆ ಆಗ್ರಹಿಸಿದ್ದಾರೆ.ತಪ್ಪಿದಲ್ಲಿ ಕಕ್ಕಬೆ ಪಟ್ಟಣದಲ್ಲಿ ಹುಣಸೂರು – ಬಾಗಮಂಡಲ ರಸ್ತೆತಡೆ ಮಾಡಿ ತೀವ್ರತರದ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಗ್ರಾಮಸ್ಥರ ಪರವಾಗಿ ಚಂಡೀರ ಜಗದೀಶ್, ರನ್ನು ಉತ್ತಪ್ಪ, ದೇವರಾಜ್, ಪೂಣಚ್ಚ ,ದೇವಯ್ಯ, ಸುಂದರ, ರ್‍ಯಾಲಿ ಗಣಪತಿ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಇಂದು ಪ್ರತಿಭಟನೆ: ಕಾಡಾನೆಗಳಿಂದ ಉಪಟಳದಿಂದ ಕಂಗೆಟ್ಟ ಕೋಕೇರಿ, ಮರಂದೋಡ, ನರಿಯಂದಡ ಹಾಗೂ ಚೇಲಾವರ ಗ್ರಾಮಸ್ಥರು ಸೋಮವಾರ ಚೆಯ್ಯಂಡಾಣೆಯಲ್ಲಿ ಬೆಳಿಗ್ಗೆ 10 ಗಂಟೆಯಿಂದ 12 ಗಂಟೆವರೆಗೆ ರಸ್ತೆ ಮಾಡಿ ಪ್ರತಿಭಟನೆ ನಡೆಸಲಿದ್ದಾರೆ.

ವಿರಾಜಪೇಟೆಯಲ್ಲಿ ಎಎಸ್‌ಪಿ ರಕ್ಷಣಾ ತಂಡ ಅಸ್ತಿತ್ವಕ್ಕೆ

ಹುಟ್ಟುಹಬ್ಬ ಆಚರಿಸಿಕೊಂಡ ಶಾಸಕ ಪೊನ್ನಣ್ಣ ಬೇದಭಾವವಿಲ್ಲದ ಎಲ್ಲರ ನೆರವಿಗೆ ಸ್ಪಂದಿಸಲು ಕರೆ



ವಿರಾಜಪೇಟೆ, ಜು.9– ಇಂದು ರಚನೆಯಾಗಿ ಅಸ್ತಿತ್ವಕ್ಕೆ ಬಂದಿರುವ ರಕ್ಷಣಾ ತಂಡ ಯಾವುದೇ ಜಾತಿ, ಧರ್ಮ ನೋಡದೆ, ಪಕ್ಷಬೇಧವಿಲ್ಲದೆ, ರಾಜಕೀಯ ಬೆರೆಸದೆ ಜನರ ತುರ್ತು ಅಗತ್ಯಗಳಿಗೆ ಕೆಲಸ ಮಾಡಬೇಕು ಎಂದು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ತಾಕೀತು ಮಾಡಿದ್ದಾರೆ.

ತಮ್ಮ ಜನ್ಮದಿನದ ಅಂಗವಾಗಿ ನಗರ ಕಾಂಗ್ರೆಸ್ ವತಿಯಿಂದ ವಿರಾಜಪೇಟೆ ಪುರ ಭವನದಲ್ಲಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರ ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಸಲುವಾಗಿ ಆರಂಭಿಸಿರುವ ಪೊನ್ನಣ್ಣ ಡಾಟ್‌ಕಾಮ್ ವೆಬ್‌ಸೈಟ್ ಮತ್ತು ಎಎಸ್‌ಪಿ ರಕ್ಷಣಾ ತಂಡಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜನರ ಸಮಸ್ಯೆಗಳಿಗೆ ಸ್ಪಂದಿಸಲು ಒಂದೇ ಸೂರಿನಡಿ ಎಲ್ಲಾ ಸೌಲಭ್ಯ ಕಲ್ಪಿಸಿರುವುದಾಗಿ ತಿಳಿಸಿದರು.

ನೀವು ನೀಡಿರುವ ರಕ್ತ ಮುಂದೆ ಅಗತ್ಯ ಉಳ್ಳವರಿಗೆ ಜೀವ ಉಳಿಸಲು ಲಭಿಸುತ್ತದೆ. ರಕ್ತ ಯಾವ ಜಾತಿ ಧರ್ಮ ಎಂದು ಯಾರಿಗೂ ತಿಳಿಯದು. ಎಲ್ಲರ ರಕ್ತ ಒಂದೇ ಎಂಬುವುದು ಇಲ್ಲಿ ನಿಜವಾಗುತ್ತದೆ. ಜಾತಿ, ಧರ್ಮ ಪಂಗಡ ಎಲ್ಲವು ಮಾನವನ ಕಾಲ್ಪನಿಕ ಸೃಷ್ಟಿ. ಇಂದು ರಕ್ಷಣಾ ತಂಡ ರಚಿಸಿರುವ ಯುವಕರು ಜನರ ತುರ್ತು ಆಗತ್ಯಗಳಿಗೆ ಬೇದವಿಲ್ಲದೆ ಕೆಲಸ ಮಾಡಲಿದ್ದಾರೆ. ಇದು ಕೊಡಗಿನಾದ್ಯಂತ ಬೆಳೆದು ಎಲ್ಲರಿಗೂ ಪ್ರೇರಣೆಯಾಗಲಿ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಅವರು ಮುಖ್ಯ ಅತಿಥಿಯಾಗಿ ಮಾತನಾಡಿ, ಕೊಡಗಿನ ಇತರೆಡೆಗಳಲ್ಲಿ ಶಾಸಕ ಪೊನ್ನಣ್ಣ ಅವರು ಕಳೆದ ಮೂರು ವರ್ಷಗಳಿಂದ ಜನಪರ ಕೆಲಸ ಮಾಡಿದ್ದಾರೆ. ಈಗ ಅವರಿಗೆ ವಿರಾಜಪೇಟೆ ಕ್ಷೇತ್ರದ ಶಾಸಕ ಸ್ಥಾನ ಸಿಕ್ಕಿದೆ. ಜನ ಪರ ಕಾಳಜಿ ಇರುವ ಪೊನ್ನಣ್ಣರಿಗೆ ಉತ್ತಮ ಸ್ಥಾನ ಲಭಿಸಿದೆ ಎಂದರು.

ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ ಅವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಾತಿ ಧರ್ಮಗಳ ಬೇಧವಿಲ್ಲದೆ 50 ಮಂದಿ ರಕ್ತದಾನ ಮಾಡಿದ್ದಾರೆ. ಮುಂದಿನ ದಿನದಲ್ಲಿ ರಕ್ತದ ಅವಶ್ಯಕತೆ ಇರುವವರು ಪಡೆದುಕೊಳ್ಳುವಂತಾಗಲಿ. ಎಲ್ಲರ ರಕ್ತ ಒಂದೇ ಎಂಬ ಸಂದೇಶ ಶಾಸಕರು ಹುಟ್ಟು ಹಬ್ಬದಲ್ಲಿ ನೀಡಿದ್ದೇವೆ ಎಂದರು.

ಪುರಸಭಾ ಸದಸ್ಯ ಮಹ್ಮದ್ ರಫಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಪಕ್ಷದ ರಾಜ್ಯ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ ಶಾಸಕರಿಗೆ ಶುಭ ಹಾರೈಸಿದರು. ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿಪೂಣಚ್ಚ, ಪುರಸಭಾ ಮುಖ್ಯಾಧಿಕಾರಿ ಚಂದ್ರಕುಮಾರ್, ಜಿಲ್ಲಾ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಡಾ. ಕರಂಬಯ್ಯ, ಈ ಸಂದರ್ಭ ರಚನಾ ಪೊನ್ನಣ್ಣ ಮತ್ತಿತರರು ಉಪಸ್ಥಿತರಿದ್ದರು. ನಗರ ಕಾಂಗ್ರೆಸ್ ಕಾರ್ಯದರ್ಶಿ ಎಂ.ಎಂ.ಶಶಿಧರನ್ ಸ್ವಾಗತಿಸಿದರು.

ಭಾರೀ ಗಾಳಿ ಮಳೆಗೆ ಗುಡಿಸಲು ಮೇಲೆ ಬಿದ್ದ ಮರ

ಸಣ್ಣ–ಪುಟ್ಟ ಗಾಯಗಳೊಂದಿಗೆ ಕುಟುಂಬ ಪಾರು



ಸಿದ್ದಾಪುರ, ಜು.9– ವಿರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೇಟ್ ಹಾಡಿಯ ರಾಜಪ್ಪ ಎಂಬುವರ ಗುಡಿಸಲಿನ ಮೇಲೆ ಭಾರೀ ಗಾಳಿ ಮಳೆಗೆ ಮರ ಬಿದ್ದು ಮನೆ ಸಂಪೂರ್ಣ ನೆಲಸಮವಾಗಿ ಘಟನೆ ಸಂಭವಿಸಿದೆ. ಭಾರೀ ಗಾತ್ರದ ಮರ ಬಿದ್ದಿದ್ದು ಮನೆಯಲ್ಲಿದ್ದ ರಾಜಪ್ಪ, ಪತ್ನಿ ಹಾಗೂ ಇಬ್ಬರು ಮಕ್ಕಳು ಸಣ್ಣ–ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆಯ ಸಿಬ್ಬಂದಿಗಳು ಭೇಟಿ ನೀಡಿ ಗುಡಿಸಲು ಮೇಲೆ ಬಿದ್ದಿದ್ದ ಮರವನ್ನು ತೆರವುಗೊಳಿಸಿದ್ದಾರೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರವೀಣ್, ಸಹಾಯಕಿ ಸಾವಿತ್ರಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಂರಕ್ಷಿತ ಅರಣ್ಯ ಪ್ರದೇಶದ ಒತ್ತುವರಿ ತೆರವು

ಅರಣ್ಯ ಇಲಾಖೆ ಸುಪರ್ದಿಗೆ ತೆಗೆದುಕೊಂಡ ಜಾಗ



ಮಡಿಕೇರಿ, ಜು.9– ಸೋಮವಾರ ಪೇಟೆ ಬಳಿಯ ಶಾಂತಳ್ಳಿ ಹೋಬಳಿಯ ತಲ್ತಾರೆಶೆಟ್ಟಳ್ಳಿ ಗ್ರಾಮದ ಸುಗ್ಗಿ ದೇವರಬನ, ದೇವರಕಾಡು ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಒತ್ತುವರಿ ಮಾಡಿಕೊಂಡು ಅಕ್ರಮವಾಗಿ ಸಾಗುವಳಿ ಮಾಡಿದ್ದ ಜಾಗವನ್ನು ಅರಣ್ಯ ಇಲಾಖೆ ತೆರವುಗೊಳಿಸಿ ಇಲಾಖಾ ಸುಪರ್ದಿಗೆ ಪಡೆದುಕೊಂಡಿದೆ.

ಸುಗ್ಗಿ ದೇವರ ಬನದ ಜಾಗವನ್ನು ಅಬ್ಬಿಮಠ ಗ್ರಾಮದ ವ್ಯಕ್ತಿಯೊಬ್ಬರು ಒತ್ತುವರಿ ಮಾಡಿಕೊಂಡು ಸಾಗುವಳಿ ಮಾಡಿಕೊಂಡಿದ್ದು, ಈ ಕುರಿತು ಸೋಮವಾರಪೇಟೆ ಅರಣ್ಯ ಇಲಾಖೆಯಲ್ಲಿ ಒತ್ತುವರಿ ಪ್ರಕರಣ ದಾಖಲಾಗಿತ್ತು. ವಿಚಾರಣೆ ನಡೆಸಿದ ಸೋಮವಾರಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಒತ್ತುವರಿ ಜಾಗವನ್ನು ತೆರವುಗೊಳಿಸಲು ಆದೇಶ ನೀಡಿದ್ದರು. ಆದರೆ ಒತ್ತುವರಿದಾರರು ಅರಣ್ಯ ಸಂರಕ್ಷಾಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರ ಕೊಡಗು ವೃತ್ತದಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಸೋಮವಾರಪೇಟೆ ಉಪ ವಿಭಾಗದ ಜುಲೈ 16ರ 2018ರ ಆದೇಶವನ್ನು ಎತ್ತಿಹಿಡಿದ ಮೇಲ್ಮನವಿ ಪ್ರಾಧಿಕಾರ, 2023ರ ಫೆಬ್ರವರಿ 10ರಂದು ಒತ್ತುವರಿದಾರರ ಮೇಲ್ಮನವಿಯನ್ನು ವಜಾಗೊಳಿಸಿ, 30 ದಿನಗಳ ಒಳಗೆ ಒತುವರಿ ತೆರವುಗೊಳಿಸಿ, ಅರಣ್ಯ ಇಲಾಖೆಯ ಸುಪರ್ದಿಗೆ ಪಡೆದುಕೊಳ್ಳಲು ಆದೇಶಿಸಿತ್ತು. ಹಿರಿಯ ಅರಣ್ಯಾಧಿಕಾರಿಗಳ ಮಾರ್ಗ ದರ್ಶನದಲ್ಲಿ ಸೋಮವಾರಪೇಟೆ ವಲಯ ಅರಣ್ಯಾಧಿಕಾರಿಗಳ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ, ಕಾಫಿ, ಕಿತ್ತಳೆ ಇನ್ನಿತರ ವಾಣಿಜ್ಯ ಬೆಳೆಗಳನ್ನು ತೆರವುಗೊಳಿಸಿದ್ದಾರೆ. ಮಾತ್ರವಲ್ಲದೇ ಹಿಟಾಚಿ ಯಂತ್ರದ ಮೂಲಕ ಜಾನುವಾರು ನಿರೋಧಕ ಕಂದಕ ತೋಡಿ, ಪೂರ್ಣ ಪ್ರಮಾಣದಲ್ಲಿ ಇಲಾಖೆಯ ವಶಕ್ಕೆ ಪಡೆದುಕೊಂಡಿದ್ದಾರೆ.

ಒತ್ತುವರಿ ತೆರವು ಸಂದರ್ಭ ಎಸಿಎಫ್ ಎ.ಎ. ಗೋಪಾಲ್, ಆರ್‌ಎಫ್‌ಓ ಚೇತನ್, ಡಿಆರ್‌ಎಫ್‌ಓ ಸತೀಶ್, ಅರಣ್ಯ ಪಾಲಕರಾದ ಕಿರಣ್, ವಿಶ್ವ, ಕರಿಮಲ್ಲಪ್ಪ, ಪೊಲೀಸರು, ದೇವರಕಾಡು ಸಂರಕ್ಷಣ ಸಮಿತಿ ಅಧ್ಯಕ್ಷರು, ಗ್ರಾಮಸ್ಥರು ಹಾಜರಿದ್ದರು.

ಕಾಫಿ ತೋಟದಲ್ಲಿದ್ದ ಹೆಬ್ಬಾವು ಸೆರೆ



ಸಿದ್ದಾಪುರ, ಜು.9– ವಿರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮದ ಮೊಳಗು ಮನೆ ಕಾಫಿ ತೋಟದಲ್ಲಿ 7ಅಡಿ ಉದ್ದದ ಹೆಬ್ಬಾವನ್ನು ಅರಣ್ಯ ಇಲಾಖೆ ಸಿಬ್ಬಂದಿಗಳು ಸೆರೆಹಿಡಿದಿದ್ದಾರೆ.

ಕಳೆದ ಎರಡು ದಿನಗಳಿಂದ ತೋಟದಲ್ಲಿ ಹೆಬ್ಬಾವನ್ನು ಕಂಡು ಸ್ಥಳೀಯರು ಹಾಗೂ ಕಾರ್ಮಿಕರು ಆತಂಕಕ್ಕೀಡಾಗಿದ್ದರು. ತೋಟಕ್ಕೆ ತೆರಳಿದ ಕಾರ್ಮಿಕರು ಚಾಮುಂಡೇಶ್ವರಿ ದೇವಸ್ಥಾನದ ಬಳಿ ಮಲಗಿದ್ದ ಹೆಬ್ಬಾವನ್ನು ಕಂಡು ಭಯಭೀತರಾಗಿದ್ದರು. ಬಳಿಕ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಆಗಮಿಸಿದ ತಿತಿಮತಿ ಅರಣ್ಯ ಇಲಾಖೆ ಸಿಬ್ಬಂದಿಗಳು 7 ಅಡಿ ಉದ್ದದ ಹೆಬ್ಬಾವನ್ನು ಸುರಕ್ಷಿತವಾಗಿ ಸೆರೆಹಿಡಿದು ಮಾಲ್ದಾರೆ ಅರಣ್ಯಕ್ಕೆ ಬಿಟ್ಟರು. ಈ ಸಂದರ್ಭ ವಲಯ ಅರಣ್ಯ ಅಧಿಕಾರಿ ಶ್ರೀನಿವಾಸ್, ಆರ್‌ಆರ್‌ಟಿ ಸಿಬ್ಬಂದಿಗಳಾದ ಗುರು, ಹರಿಪ್ರಸಾದ್, ಸಚಿನ್, ದನು ಇತರರು ಹಾಜರಿದ್ದರು.

ಪ್ರತಿಯೊಬ್ಬರೂ ಗಿಡ, ಮರಗಳನ್ನು ಪೋಷಿಸಲು ಸಲಹೆ



ಚಾಮರಾಜನಗರ, ಜು.9– ಪ್ರತಿಯೊಬ್ಬರೂ ಗಿಡ, ಮರಗಳನ್ನು ಪೋಷಿಸುವ ಮೂಲಕ ಅವುಗಳೊಂದಿಗೆ ಸ್ನೇಹ ಬೆಳೆಸಿಕೊಳ್ಳಬೇಕು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪ್ರಶಸ್ತಿ ಪುರಸ್ಕೃತರು ಆದ ಸಾಹಿತಿ ಸ್ವಾಮಿ ಪೊನ್ನಾಚಿ ತಿಳಿಸಿದರು.

ನಗರದ ಚನ್ನಿಪುರ ಮೋಳೆಯಲ್ಲಿ ಈಶ್ವರಿ ಸೋಷಿಯಲ್ ಟ್ರಸ್ಟ್ ಅಕಾಡೆಮಿಯಿಂದ ಆಯೋಜಿಸಿದ್ದ ಪರಿಸರ ಜಾಗೃತಿ ಮತ್ತು ಗಿಡಗಳನ್ನು ನೆಡುವ ಕಾರ್ಯಕ್ರಮದಲ್ಲಿ ಗಿಡ ನೆಟ್ಟು ಮಾತನಾಡಿದರು. ನಾವು ಪರಿಸರ ಸಂರಕ್ಷಣೆ ಮಾಡಿದರೆ ಪರಿಸರ ನಮ್ಮನ್ನು ಕಾಪಾಡುತ್ತದೆ. ಆಮ್ಲಜನಕ ಭೂಮಿ ಮೇಲಿರುವ ಮನುಷ್ಯ, ಪ್ರಾಣಿ, ಪಕ್ಷಿ ಸೇರಿದಂತೆ ಪ್ರತಿಯೊಂದು ಜೀವಿಗಳಿಗೂ ಅವಶ್ಯಕ. ಹೀಗಾಗಿ ನಾವು ಹೆಚ್ಚಾಗಿ ಗಿಡ ಮರಗಳನ್ನು ಬೆಳೆಸುವ ಮೂಲಕ ಆಮ್ಲಜನಕ ಪಡೆಯಬಹುದು ಎಂದರು.

ಯುವ ಸಾಹಿತಿ ಕೆ.ಶ್ರೀಧರ್ ಮಾತನಾಡಿ, ಅತ್ಯಮೂಲ್ಯವಾಗಿರುವ ನೀರನ್ನು ಮಿತವಾಗಿ ಬಳಸಿ ಮುಂದಿನ ತಲೆಮಾರಿಗೆ ಉಳಿಸಬೇಕಿದೆ. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ ಪರಿಸರ ಸಂರಕ್ಷಣೆಗೆ ಸಹಕರಿಸಬೇಕು. ಇದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂದರು. ಈಶ್ವರಿ ಸೋಷಿಯಲ್ ಟ್ರಸ್ಟ್ ಅಕಾಡೆಮಿ ಸಂಸ್ಥಾಪಕ ಸಿ.ಎಂ.ವೆಂಕಟೇಶ್ ಮಾತನಾಡಿ, ಪ್ಲಾಸ್ಟಿಕ್ ಜೀವ ಸಂಕುಲಕ್ಕೆ ಮಾರಕವಾಗಿದೆ. ಆದ್ದರಿಂದ ಈಶ್ವರಿ ಟ್ರಸ್ಟ್ ಸಾಲು ಗಿಡಗಳನ್ನು ನೆಡುವ ಜೊತೆಗೆ ಪ್ಲಾಸ್ಟಿಕ್ ನಿರ್ಮೂಲನೆ ಕುರಿತು ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಈ ವೇಳೆ ಗ್ರಾಮದ ಮಹೇಶ, ಸೋಮು, ಚಂದ್ರು, ರಾಮಕೃಷ್ಣ, ರಾಜೇಂದ್ರ, ರಾಜು ಇತರರಿದ್ದರು.

ಜಿಲ್ಲಾ ಉಪಾಧ್ಯಕ್ಷರಾಗಿ ನೇಮಕ




ಚಾಮರಾಜನಗರ, ಜು.9– ರಾಹುಲ್ ಗಾಂಧಿ ವಿಚಾರ್ ಮಂಚ್ ಜಿಲ್ಲಾ ಉಪಾಧ್ಯಕ್ಷರಾಗಿ ಸೈಯದ್ ಇಸ್ಮಾಯಿಲ್ ನೇಮಕ ಮಾಡಿ ಮಂಚ್‌ನ ರಾಜ್ಯಾಧ್ಯಕ್ಷ ಹೇಮಂತ್ ಕುಮಾರ್ ಆದೇಶ ಹೊರಡಿಸಿದ್ದಾರೆ.

ನಿಗಮ ಮಂಡಳಿಗೆ ಹಲವರಿಂದ ತೆರೆಮರೆಯ ಕಸರತ್ತು

ಹಾಲಿ, ಮಾಜಿ ಶಾಸಕರು ಹಾಗೂ ಹಿರಿಯ ಮುಖಂಡರ ಪೈಪೋಟಿ

● ಸಿದ್ದಲಿಂಗಸ್ವಾಮಿ




ಪುಟ್ಟರಂಗಶೆಟ್ಟಿ



ಎಸ್. ಜಯಣ್ಣ



ನರೇಂದ್ರ



ಮರಿಸ್ವಾಮಿ



ನಂಜಪ್ಪ

ಚಾಮರಾಜನಗರ, ಜು.9– ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ನೂತನ ಸರ್ಕಾರ ರಚನೆಯಾಗಿ ಸಚಿವ ಸ್ಥಾನಗಳು ಭರ್ತಿಯಾಗಿವೆ. ಸಚಿವ ಸ್ಥಾನ ದೊರೆಯದ ಶಾಸಕರು ಹಾಗೂ ಪಕ್ಷದ ಹಿರಿಯ ಮುಖಂಡರು ನಿಗಮ ಮಂಡಳಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಜಿಲ್ಲೆಯ ಹಾಲಿ, ಮಾಜಿ ಶಾಸಕರು ಹಾಗೂ ಹಿರಿಯ ಮುಖಂಡರು ನಿಗಮ ಮಂಡಳಿ ಪಡೆಯಲು ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದ್ದಾರೆ.

ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳ ಪೈಕಿ 3 ಕ್ಷೇತ್ರದಲ್ಲಿ ಕೈ ಶಾಸಕರು ಗೆಲುವು ಸಾಧಿಸಿದ್ದಾರೆ. ಚಾಮರಾಜನಗರದಲ್ಲಿ ಬಿಜೆಪಿ ಹಿರಿಯ ನಾಯಕ ವಿ.ಸೋಮಣ್ಣ ಅವರನ್ನು ಸೋಲಿಸಿ ಸತತ 4ನೇ ಬಾರಿ ಗೆಲುವು ದಾಖಲಿಸಿದ ಶಾಸಕ ಸಿ.ಪುಟ್ಟರಂಗಶೆಟ್ಟಿಗೆ ನಿಗಮ ಮಂಡಳಿ ದೊರೆಯುವ ಸಾಧ್ಯತೆ ಹೆಚ್ಚಿದ್ದು, ಉಳಿದಂತೆ ಕೊಳ್ಳೇಗಾಲದ ಮಾಜಿ ಶಾಸಕ ಎಸ್. ಜಯಣ್ಣ ಹನೂರಿನ ಮಾಜಿ ಶಾಸಕ ಆರ್.ನರೇಂದ್ರ, ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ, ಗುಂಡ್ಲುಪೇಟೆ ಹಿರಿಯ ನಾಯಕ ಎಚ್.ಎಸ್.ನಂಜಪ್ಪ ನಿಗಮದ ಮಂಡಳಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ.

ಪುಟ್ಟರಂಗಶೆಟ್ಟಿ, ಜಯಣ್ಣಗೆ ಬಹುತೇಕ ಖಚಿತ: ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಈ ಬಾರಿ ಸಚಿವ ಸ್ಥಾನ ದೊರೆಯಲಿದೆ ಎಂದು ನಿರೀಕ್ಷೆ ಮಾಡಲಾಗಿತ್ತು. ಆದರೆ, ಕೊನೆ ಗಳಿಗೆಯಲ್ಲಿ ಆದ ರಾಜಕೀಯ ಬದಲಾವಣೆಯಿಂದ ಅವರಿಗೆ ಸಚಿವ ಸ್ಥಾನ ಕೈ ತಪ್ಪಿತ್ತು. ಬಳಿಕ, ಕಾಂಗ್ರೆಸ್ ಹೈಕಮಾಂಡ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುಟ್ಟರಂಗಶೆಟ್ಟಿ ಅವರಿಗೆ ವಿಧಾನಸಭೆ ಉಪಾಧ್ಯಕ್ಷರ ಸ್ಥಾನ ನೀಡಲು ಮುಂದಾದರು. ಆದರೆ, ಪುಟ್ಟರಂಗಶೆಟ್ಟಿ ಅವರು ಉಪಾಧ್ಯಕ್ಷರಾದರೆ ಕ್ಷೇತ್ರದ ಜನರೊಂದಿಗೆ ಸಂಪರ್ಕ ಕಡಿತ ವಾಗುತ್ತದೆ ಎಂಬ ಕಾರಣಕ್ಕೆ ಆ ಸ್ಥಾನಕ್ಕೇರಲು ಹಿಂದೇಟು ಹಾಕಿದ್ದರು.

ಸಚಿವ ಸ್ಥಾನ ಕೈ ತಪ್ಪಿದ್ದರಿಂದ ಪುಟ್ಟರಂಗಶೆಟ್ಟಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ ಎನ್ನಲಾಗಿದೆ. ಈ ಬೇಡಿಕೆಗೆ ಸಕರಾತ್ಮಕವಾಗಿ ಸ್ಪಂದಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪುಟ್ಟರಂಗಶೆಟ್ಟಿ ಅವರಿಗೆ ಯಾವುದಾದರೊಂದು ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡುವುದು ಬಹುತೇಕ ಖಚಿತ ಎಂಬ ಮಾತುಗಳು ಕೇಳಿ ಬರುತ್ತಿದೆ.

ಇನ್ನೂ ಸಿದ್ದರಾಮಯ್ಯ ಅವರ ಆಪ್ತ ಬಳಗದ ಮಾಜಿ ಶಾಸಕ ಎಸ್.ಜಯಣ್ಣ ಕೊಳ್ಳೇಗಾಲ ದಿಂದ ಸ್ಪರ್ಧಿಸಲು ಪ್ರಬಲ ಆಕಾಂಕ್ಷಿಯಾಗಿದ್ದರು. ಚುನಾವಣೆ ಸಂದರ್ಭ ಸಿದ್ದರಾಮಯ್ಯ ಹಾಗೂ ಹಿರಿಯ ನಾಯಕರ ಸೂಚನೆ ಮೇರೆಗೆ ಚುನಾವಣೆಯಿಂದ ಹಿಂದೆ ಸರಿದು, ಕೊಳ್ಳೇಗಾಲದಲ್ಲಿ ಪಕ್ಷದ ಗೆಲುವಿಗೆ ಶ್ರಮಿಸಿದ್ದರು. ಹೀಗಾಗಿ ವರಿಷ್ಠರು ಜಯಣ್ಣ ಅವರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಲಿದ್ದಾರೆ ಎಂಬ ಮಾತುಗಳು ಜಿಲ್ಲಾದ್ಯಂತ ಕೇಳಿ ಬರುತ್ತಿದೆ.

ಹಲವರಿಂದ ಕಸರತ್ತು: ಉಳಿದಂತೆ ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳ ಕಾಂಗ್ರೆಸ್‌ನ ಹಿರಿಯ ಮುಖಂಡರು, ಮಾಜಿ ಶಾಸಕರು, ನಿಗಮ ಮಂಡಳಿಗಾಗಿ ಕಸರತ್ತು ನಡೆಸುತ್ತಿದ್ದು, ಹೈಕಮಾಂಡ್ ಹಾಗೂ ವರಿಷ್ಠರ ಮನವೊಲಿಸಲು ಲಾಬಿ ಶುರು ಮಾಡಿದ್ದಾರೆ.

ಹನೂರಿನಲ್ಲಿ ಪಕ್ಷ ಸಂಘಟನೆ ಹಾಗೂ ನಿರಂತರವಾಗಿ 3 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಮಾಜಿ ಶಾಸಕ ಆರ್.ನರೇಂದ್ರ ಅವರಿಗೆ ನಿಗಮ ಮಂಡಳಿ ನೀಡಬೇಕು ಎಂದು ನರೇಂದ್ರ ಬೆಂಬಲಿಗರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಬೇಡಿಕೆ ಸಲ್ಲಿಸಿದ್ದಾರೆ ಎನ್ನಲಾಗಿದೆ. ಅಲ್ಲದೇ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಕೂಡ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ತಮಗೂ ನಿಗಮ ಮಂಡಳಿಯಲ್ಲಿ ಅವಕಾಶ ನೀಡುವಂತೆ ಮನವಿ ಸಲ್ಲಿಸಿದ್ದಾರೆ. ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ಸಹ ನಿಗಮ ಮಂಡಳಿ ಪಡೆಯಲು ಲಾಬಿ ನಡೆಸುತ್ತಿದ್ದಾರೆ ಎನ್ನಲಾಗಿದೆ.

ಗುಂಡ್ಲುಪೇಟೆ ಹಿರಿಯ ಮುಖಂಡ ಎಚ್.ಎಸ್. ನಂಜಪ್ಪ ಕೂಡ ಶಾಸಕ ಗಣೇಶ ಪ್ರಸಾದ್ ಮೂಲಕ ಹೈಕಮಾಂಡ್‌ಗೆ ಮನವಿ ಸಲ್ಲಿಸಿದ್ದಾರೆ ಎನ್ನಲಾಗುತ್ತಿದೆ. ಒಟ್ಟಾರೆ, ನೂತನ ಸರ್ಕಾರ ದಲ್ಲಿ ನಿಗಮ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಜಿಲ್ಲೆಯಲ್ಲಿ ಆಕಾಂಕ್ಷಿಗಳ ದಂಡೇ ಇದ್ದು, ಎಲ್ಲರೂ ತಮ್ಮ–ತಮ್ಮ ಬೆಂಬಲಿಗರೊಂದಿಗೆ ವರಿಷ್ಠ ರನ್ನು ಭೇಟಿ ಮಾಡಿ ಒತ್ತಡ ಹೇರುತ್ತಿದ್ದಾರೆ ಎನ್ನಲಾಗಿದೆ. ಈ ಪೈಕಿ ಯಾರಿಗೆ ಅದೃಷ್ಟ ಒಲಿಯಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಪೋಷಕರು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ನಿಗಾ ವಹಿಸಿ



ಚಾಮರಾಜನಗರ, ಜು.9– ಪೋಷಕರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ನಿಗಾ ವಹಿಸುವ ಮೂಲಕ ಅವರ ಶೈಕ್ಷಣಿಕ ಪ್ರಗತಿ ಬಗ್ಗೆ ಆಗಾಗೆ ಕಾಲೇಜಿಗೆ ಭೇಟಿ ನೀಡಿ ಉಪನ್ಯಾಸಕರ ಜೊತೆ ಚರ್ಚಿಸಬೇಕು ಎಂದು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಾರ್ವಜನಿಕ ಸಂಪರ್ಕ ಅಧಿಕಾರಿ ಆರ್.ಎಂ.ಸ್ವಾಮಿ ತಿಳಿಸಿದರು.

ನಗರದ ಜೆಎಸ್‌ಎಸ್ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣ ಮಟ್ಟ ಭರವಸೆ ಸಮಿತಿ ಆಯೋಜಿಸಿದ್ದ ಶಿಕ್ಷಕರು ಮತ್ತು ಪೋಷಕರ ಸಭೆಯಲ್ಲಿ ಅವರು ಮಾತನಾಡಿದರು. ಕಾಲೇಜಿನಲ್ಲಿ ಉಪನ್ಯಾಸಕರು ಮಾಡುವ ಪಾಠ ಪ್ರವಚನದ ಜೊತೆಗೆ, ಮಕ್ಕಳು ಮನೆಯಲ್ಲಿ ನಿಯಮಿತವಾಗಿ ವ್ಯಾಸಂಗ ಮಾಡುವ ಬಗ್ಗೆ ಪೋಷಕರು ಗಮನ ಹರಿಸಬೇಕು. ನೀವು ಮೊಬೈಲ್, ಟಿವಿ ಬಂದ್ ಮಾಡಿ, ನಿಮ್ಮ ಮಗಳೊಡನೆ ಕುಳಿತು ಅವಳನ್ನು ಓದಿಸಿ. ಅವಳ ಪಾಠದ ಬಗ್ಗೆ ಚರ್ಚಿಸಿ. ಈ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಅನೇಕರು ಉನ್ನತ ಹುದ್ದೆಗಳಲ್ಲಿದ್ದಾರೆ. ನೀವು ನಿಮ್ಮ ಮಕ್ಕಳ ಮೇಲೆ ವಹಿಸುವ ಕಾಳಜಿಗಿಂತ ಹೆಚ್ಚು ಕಾಳಜಿಯನ್ನು ಜೆಎಸ್‌ಎಸ್ ಸಂಸ್ಥೆ ವಹಿಸುತ್ತದೆ. ಇಲ್ಲಿ ನುರಿತ ಪ್ರಾಧ್ಯಾಪಕರಿದ್ದಾರೆ. ಉನ್ನತ ಮಟ್ಟದ ಮೂಲ ಸೌಕರ್ಯಗಳಿವೆ. ಜಿಲ್ಲೆಯಲ್ಲೇ ಉನ್ನತ ಕಾಲೇಜೆಂಬ ಹೆಸರನ್ನು ನಮ್ಮ ಕಾಲೇಜು ಪಡೆದುಕೊಂಡಿದೆ ಎಂದರು.

ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಕೆ.ಪಿ. ಮಹದೇವಪ್ಪ ಮಾತನಾಡಿ, ಮೊಬೈಲ್ ಉಪಕಾರಿಯೂ ಹೌದು, ಅಪಾಯಕಾರಿಯೂ ಹೌದು. ಸ್ಪರ್ಧಾತ್ಮಕ ಜಗತ್ತಿನಲ್ಲಿ ಇಂದು ಪೋಷಕರು ಮೊಬೈಲ್ ಮೂಲಕ ತಮ್ಮ ಮಕ್ಕಳಿಗೆ ಉತ್ತಮ ಜ್ಞಾನ ನೀಡಬಹುದು. ಪ್ರತಿದಿನ ಮಕ್ಕಳಿಗೆ 2 ಗಂಟೆ ಓದುವ ವಾತಾವರಣವನ್ನು ಪೋಷಕರು ಕಲ್ಪಿಸಿಕೊಡಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಜಿ.ಸಿದ್ದರಾಜು, ಪೋಷಕರು ನಿಮ್ಮ ಮಕ್ಕಳ ಮೊಬೈಲ್ ಫೋನ್ ಬಳಕೆ ಬಗ್ಗೆ ಎಚ್ಚರವಹಿಸಿ, ಅವರ ಮೊಬೈಲ್ ಫೋನ್ ತುಂಬಾ ಖಾಸಗಿಯಾಗಿರದಂತೆ ನೋಡಿಕೊಳ್ಳಿ. ಸಾಮಾಜಿಕ ಜಾಲತಾಣಗಳ ಬಳಕೆ ಮಿತವಾಗಿರಲಿ. ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿ. ಅವರ ಜೊತೆ ಹೆಚ್ಚು ಸಮಯ ಕಳೆಯಿರಿ ಎಂದು ಕಿವಿಮಾತು ಹೇಳಿದರು.

ಈ ವೇಳೆ ಉಪನ್ಯಾಸಕರಾದ ಅರುಣಾಶ್ರೀ, ಜಮುನಾ, ರೂಪಶ್ರೀ, ಮಲ್ಲಿಕಾರ್ಜುನ ಸ್ವಾಮಿ, ಬಸವರಾಜು, ಮಹೇಶ್, ವರಪ್ರಸಾದ್, ಸುಷ್ಮಾ, ಸೌಮ್ಯಾ ಮತ್ತಿತರರಿದ್ದರು.



ಗುಂಡ್ಲುಪೇಟೆಯ ಶ್ರೀಮದ್ದಾನೇಶ್ವರ ಮಹಾಮನೆ ಯೋಗ ಕೇಂದ್ರದಲ್ಲಿ ಭಾನುವಾರ ಗುರು ಪೂರ್ಣಿಮೆ ಅಂಗವಾಗಿ ಯೋಗ ಗುರುಗಳಾದ ಬಸವಣ್ಣ, ಕೆ.ಸಿ.ರಾಜಪ್ಪ ಅವರನ್ನು ಸನ್ಮಾನಿಸಲಾಯಿತು. ಇದೇ ವೇಳೆ ನಿವೃತ್ತ ಶಿಕ್ಷಕರು ಹಾಗೂ ನಿವೃತ್ತ ಯೋಧರನ್ನು ಯೋಗ ಕೇಂದ್ರದ ಪದಾಧಿಕಾರಿಗಳು ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದರು. ಯೋಗ ಕೇಂದ್ರದ ಅಧ್ಯಕ್ಷ ಕೆ.ವಿ.ಶ್ರೀನಿವಾಸ್, ಕಾರ್ಯದರ್ಶಿ ಗಿರೀಶ್, ಪದಾಧಿಕಾರಿಗಳಾದ ರಾಜಶೇಖರ್, ಶಿವಬಸವಮೂರ್ತಿ ಇತರರಿದ್ದರು.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮ.ಬೆಟ್ಟದಲ್ಲಿ ರಸ್ತೆ ತಡೆ



ಚಾಮರಾಜನಗರ, ಜು.9– ಮಲೆ ಮಹದೇಶ್ವರ ಬೆಟ್ಟದಲ್ಲಿ ಮೂಲ ಸೌಕರ್ಯ ಕಲ್ಪಿಸುವುದು ಮತ್ತು ಮಹದೇಶ್ವರ ಪ್ರತಿಮೆ ದರ್ಶನಕ್ಕೆ ಸಾರ್ವಜನಿಕರಿಗೆ ಅವಕಾಶ ನೀಡುವಂತೆ ಆಗ್ರಹಿಸಿ ಮಹದೇಶ್ವರ ಬೆಟ್ಟದ ಚೆಕ್‌ಪೋಸ್ಟ್ ಬಳಿ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ರಸ್ತೆ ತಡೆದು, ಪ್ರತಿಭಟನೆ ನಡೆಸಲಾಯಿತು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಹ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ಜಮಾಯಿಸಿದ ಸಂಘದ ಪದಾಧಿಕಾರಿಗಳು, ಮಹದೇಶ್ವರ ಭಕ್ತ ಮಂಡಳಿ ಸದಸ್ಯರು ಜಿಲ್ಲಾಡಳಿತ, ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರ, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬೆಟ್ಟದಲ್ಲಿ ಕುಡಿಯುವ ನೀರು, ಶೌಚಾಲಯ ಸ್ವಚ್ಛತೆ ಸೇರಿದಂತೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸಬೇಕು. ಕ್ಷೇತ್ರದಲ್ಲಿ ನಿರ್ಮಾಣವಾಗಿರುವ ಮಹದೇಶ್ವರ ಪ್ರತಿಮೆ ದರ್ಶನಕ್ಕೆ ಸಾರ್ವಜನಿಕರಿಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಕೊಳ್ಳೇಗಾಲದಿಂದ ಸಂಪರ್ಕ ಕಲ್ಪಿಸುವ ರಸ್ತೆ ಸಾಕಷ್ಟು ಹಳ್ಳ–ಕೊಳ್ಳ ಗಳಿಂದ ಕೂಡಿದ್ದು, ಇದರಿಂದ ಭಕ್ತರ ಸಂಚಾರಕ್ಕೆ ಸಾಕಷ್ಟು ತೊಂದರೆಯಾಗುತ್ತಿದೆ. ಆದ್ದರಿಂದ ರಸ್ತೆ ಕಾಮಗಾರಿ ಕೈಗೆತ್ತಿಕೊಂಡು ದುರಸ್ತಿಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಭಕ್ತರು ದಾಸೋಹ ಭವನಕ್ಕೆ ನೀಡುವ ದವಸ ಧಾನ್ಯ, ತರಕಾರಿ, ಅಕ್ಕಿ ಬಳಸದೆ ಪಡಿತರ ಚೀಟಿ ವ್ಯವಸ್ಥೆಯಲ್ಲಿ ಬರುವ ಅಕ್ಕಿಯನ್ನು ಬಳಸಿ ದಾಸೋಹ ನಡೆಯುತ್ತಿದೆ. ಭಕ್ತರು ನೀಡಿದಂತಹ ಅಕ್ಕಿ ಎಲ್ಲಿಗೆ ಹೋಗುತ್ತಿದೆ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ನಾಗರಾಜು, ಕೆರೆಹುಂಡಿ ರಾಜಣ್ಣ, ಹಾಡ್ಯ ರವಿ, ಮಲೆಯೂರು ಹರ್ಷ, ರೇವಣ್ಣ, ಮಹದೇವಸ್ವಾಮಿ, ನಂದೀಶ್, ಸೋಮು, ಗುರುಮೂರ್ತಿ, ಮಂಜು, ನಾಗೇಂದ್ರ, ಸಂತೋಷ್, ಪ್ರಮೋದ್, ಅಭಿ, ನಂಜುಂಡಸ್ವಾಮಿ, ಗುರು ಹಾಜರಿದ್ದರು.

ಒಂದನೇ ಪುಟದಿಂದ

ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ

ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಸಹಸ್ರನಾಮಾರ್ಚನೆ, ತ್ರಿಪದಿ, ಅಷ್ಟೋತ್ತರ ಪೂಜೆ ನೆರವೇರಿಸಿದ ಬಳಿಕ ಮಂಗಳಾರತಿ ಬೆಳಗಿ 8 ಗಂಟೆಗೆ ದೇವಾಲಯದ ದ್ವಾರ ತೆರೆದು ಭಕ್ತರ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ರಾತ್ರಿ 8.30ಕ್ಕೆ ಉತ್ಸವ ಪೂಜೆ ನಡೆಸಿ 8.45ಕ್ಕೆ ದರ್ಬಾರ್ ಉತ್ಸವ ನೆರವೇರಿಸಲಾಯಿತು. ರಾತ್ರಿ 10ಕ್ಕೆ ದೇವಾಲಯವನ್ನು ಮುಚ್ಚಲಾಗುತ್ತದೆ.

ಅಡ್ಡ ಪಲ್ಲಕ್ಕಿ ಉತ್ಸವ: ಮಹೋತ್ಸವದ ಹಿನ್ನೆಲೆಯಲ್ಲಿ ಬೆಳಗ್ಗೆ 10.30ಕ್ಕೆ ಚಿನ್ನದ ಅಡ್ಡ ಪಲ್ಲಕ್ಕಿಯಲ್ಲಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯನ್ನು ಇಟ್ಟು ದೇವಾಲಯದ ಸುತ್ತ ಮೆರವಣಿಗೆ ಮಾಡಿ, ಪಲ್ಲಕ್ಕಿ ಉತ್ಸವ ಹಾಗೂ ಮಂಟಪೋತ್ಸವ ನೆರವೇರಿಸಲಾಗುತ್ತದೆ. ಈ ವೇಳೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಅವರು ಅಡ್ಡ ಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ವರ್ಧಂತಿ ಮಹೋತ್ಸವದ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದೇವಾಲಯ ಬೆಳಗ್ಗೆ 8 ಗಂಟೆವರೆಗೂ ಬಂದ್ ಮಾಡಲಾಗಿರುತ್ತದೆ. ಆಷಾಢ ಮಾಸದ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮುಂಜಾನೆ 3 ಗಂಟೆಯಿಂದಲೇ ಬೆಟ್ಟಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾಗಿರುತ್ತದೆ. ಪ್ರತಿ ಶುಕ್ರವಾರ ಬೆಳಗ್ಗೆ 6 ಗಂಟೆಯಿಂದಲೇ ದರ್ಶನಕ್ಕೆ ಅವಕಾಶ ನೀಡಲಾಗುತ್ತಿತ್ತು. ಆದರೆ ವರ್ಧಂತಿ ದಿನವಾದ ಸೋಮವಾರ ಬೆಳಗ್ಗೆ 8 ಗಂಟೆ ನಂತರ ದೇವಾಲಯದ ಬಾಗಿಲು ತೆರೆಯುವುದರಿಂದ ಬೆಟ್ಟದಲ್ಲಿ ಹೆಚ್ಚಿನ ಸಂಖ್ಯೆಯ ಭಕ್ತರು ಸೇರುವುದರಿಂದ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಲು ಅಗತ್ಯ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ. ಎಂದಿನಂತೆ ಲಲಿತಮಹಲ್ ಪ್ಯಾಲೇಸ್ ಮೈದಾನದಿಂದ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಖಾಸಗಿ ವಾಹನಗಳಲ್ಲಿ ಬರುವ ಭಕ್ತರು, ಪ್ರವಾಸಿಗರು ತಮ್ಮ ವಾಹನವನ್ನು ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ ನಿಲ್ಲಿಸಿ ಉಚಿತ ಬಸ್‌ನಲ್ಲಿ ಬೆಟ್ಟಕ್ಕೆ ತೆರಳಲು ವ್ಯವಸ್ಥೆ ಮಾಡಲಾಗಿದೆ.

ದಸರಾ ಉನ್ನತ ಸಮಿತಿ ಸಭೆ

ಧಾರ್ಮಿಕ ಆಚಾರ-ವಿಚಾರ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂವಿಧಾನದಲ್ಲಿ ಅವಕಾಶ ಕೊಡಲಾಗಿದೆ. ಹೀಗಾಗಿ ಅದನ್ನು ಮೊಟುಕುಗೊಳಿಸಲು ಯಾರಿಗೂ ಅಧಿಕಾರ ಇಲ್ಲ. ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಇಲ್ಲವಾದರೆ ಹಾಗೂ ಇತಿಹಾಸ ತಿರುಚಿಲ್ಲವೆಂದರೆ, ಸುಮ್ಮನೆ ಏಕೆ ಅಡ್ಡಿಪಡಿಸಬೇಕು. ಇದು ಚರ್ಚಾಸ್ಪದ ವಿಷಯವಲ್ಲ ಎಂದು ತಿಳಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಪೆನ್‌ಡ್ರೈವ್ ಹಿಡಿದು, ರಾಜ್ಯ ಸರ್ಕಾರದ ವಿರುದ್ಧ ವರ್ಗಾವಣೆ ದಂಧೆ ಆರೋಪ ಮಾಡುತ್ತಿದ್ದಾರೆ. ದಾಖಲೆಗಳನ್ನು ಬಿಡುಗಡೆ ಮಾಡಿದರೆ ಸಚಿವರೊಬ್ಬರು ರಾಜೀನಾಮೆ ಕೊಡಬೇಕಾಗುತ್ತದೆ ಎನ್ನುತ್ತಿದ್ದಾರೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ವಿಧಾನಸಭೆಯಲ್ಲೇ ಪೆನ್‌ಡ್ರೈವ್‌ನಲ್ಲಿ ಏನಿದೆ ಎಂದು ಮುಖ್ಯಮಂತ್ರಿಯಾದಿ ಯಾಗಿ ನಾವೆಲ್ಲಾ ಕೇಳಿದ್ದೇವೆ. ಅವರು ಒಬ್ಬ ಮಾಜಿ ಮುಖ್ಯಮಂತ್ರಿ. ಅವರು ಆರೋಪ ಮಾಡುವಾಗ ದಾಖಲೆಗಳು ಇರಬೇಕು. ಆಗ ಅವರ ಆರೋಪಕ್ಕೊಂದು ಅರ್ಥ ಬರುತ್ತದೆ. ಆದರೆ ಅವರು ಗಾಳಿಯಲ್ಲಿ ಗುಂಡು ಹೊಡೆಯುತ್ತಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿನ ಮೀಸಲಾತಿ ಹಂಚಿಕೆ ವಿಚಾರವಾಗಿ ಪ್ರತಿಕ್ರಿಯಿಸಿ, ಅಡ್ವೋಕೇಟ್ ಜನರಲ್ ಅವರೊಂದಿಗೆ ಈ ಸಂಬಂಧ ಮಾತುಕತೆ ನಡೆಸಬೇಕು. ಶೇ.50ರಷ್ಟು ಮೀಸಲಾತಿ ಪ್ರಮಾಣ ಮೀರಲು ಅವಕಾಶವಿಲ್ಲ. ಯಾವ ರೀತಿ ಮಾಡಬೇಕೆಂದು ಪರಿಶೀಲಿಸಲಾಗುವುದು ಎಂದರಲ್ಲದೆ, ಎಲ್ಲಾ ಗ್ಯಾರಂಟಿಗಳನ್ನು ಈಡೇರಿಸಲಾಗುವುದು. ಬಜೆಟ್‌ನಲ್ಲೇ ಗ್ಯಾರಂಟಿ ಈಡೇರಿಸಲು ಯೋಜನೆ ರೂಪಿಸಿ, ಘೋಷಣೆ ಮಾಡಲಾಗಿದೆ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ದೂರು ದಾಖಲು

ಲೋಕೇಷನ್ ಮೂಲಕ ಸ್ಥಳ ಪತ್ತೆ ಮಾಡಿಕೊಂಡು ಖುದ್ದು ಭೇಟಿ ನೀಡುತ್ತಾರೆ. ಅಲ್ಲದೆ ವೆಬ್‌ಸೈಟ್ **www.ka.ners.in** ಮತ್ತು **erss112 ktk@ksp.gov.in** ಗೆ ಇ-ಮೇಲ್ ಮಾಡುವುದರ ಮೂಲಕವೂ ದೂರು ಸಲ್ಲಿಸಬಹುದಾಗಿದೆ. 112 ಸೇವೆ ಆರಂಭವಾದ 2 ವರ್ಷದಲ್ಲಿ 21,227 ದೂರು ದಾಖಲಾಗಿ ಅಷ್ಟು ದೂರುಗಳಿಗೆ ಸ್ಪಂದಿಸಲಾಗಿತ್ತು. ಕೊರೊನಾ ಸಂದರ್ಭದಲ್ಲಿ ಲಾಕ್‌ಡೌನ್‌ನಿಂದ ಕಡಿಮೆಯಾಗಿತು. ಆದರೆ, ಈ ವರ್ಷ ಈಗಾಗಲೇ 11,585 ದೂರುಗಳು ದಾಖಲಾಗಿದ್ದು, ಇದರಲ್ಲಿ 597 ಪ್ರಕರಣಗಳಿಗೆ ಎಫ್‌ಐಆರ್ ದಾಖಲಿಸುವ ಮೂಲಕ 112 ಸೇವೆ ಸಾರ್ವಜನಿಕರಿಂದ ಮನ್ನಣೆಗಳಿಸುತ್ತಿದೆ.

ತಿ.ನರಸೀಪುರದಲ್ಲಿ ಯುವಕನ ಹತ್ಯೆ

ಮೃತದೇಹವನ್ನು ಇಲ್ಲಿನ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿ, ಪರಿಸ್ಥಿತಿ ವಿಕೋಪಕ್ಕೆ ತಿರುಗದಂತೆ ಭದ್ರತಾ ವ್ಯವಸ್ಥೆ ಕೈಗೊಂಡರು. ಎಸ್ಪಿ ಸೀಮಾ ಲಾಟ್ಕರ್, ಎಎಸ್‌ಪಿ ನಂದಿನಿ, ನಂಜನಗೂಡು ಉಪ ವಿಭಾಗದ ಡಿವೈಎಸ್ಪಿ ಗೋವಿಂದ ರಾಜು ತಿ.ನರಸೀಪುರಕ್ಕೆ ಆಗಮಿಸಿ, ವಿವರಗಳನ್ನು ಪಡೆದು ಆರೋಪಿಗಳ ಪತ್ತೆಗಾಗಿ ಸೂಕ್ತ ನಿರ್ದೇಶನಗಳನ್ನು ನೀಡಿದ್ದಾರೆ. ಅಲ್ಲದೆ ತಿ.ನರಸೀಪುರ ಪಟ್ಟಣಕ್ಕೆ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ. ಈ ಸಂಬಂಧ ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಂಚಭೂತಗಳಲ್ಲಿ ಲೀನ

ಇದನ್ನೆಲ್ಲಾ ನೋಡಿದರೆ ಸಾಕಷ್ಟು ಅನುಮಾನ ಕಾಡುತ್ತಿದೆ. ಅದಕ್ಕೆ ಸಿಬಿಐ ವಿಚಾರಣೆ ಮಾಡಬೇಕು ಎಂದಿದ್ದಾರೆ. ಹಿರೇಕೋಡಿಯ ಜೈನಮುನಿ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಸಂಬಂಧ ಚಿಕ್ಕೋಡಿಯಲ್ಲಿ ಇಂದು ಜೈನ ಸಮುದಾಯದ ಮುಖಂಡರ ಸಭೆ ನಡೆಯಿತು. ಜೈನ್ ಸಮಾಜದ ಮುಖಂಡ ಎನ್.ಎ.ಮಗದುಮ್, ಬಿಜೆಪಿ ಶಾಸಕ ಅಭಯ್ ಪಾಟೀಲ್, ಬೆಳಗಾವಿ ಜಿಲ್ಲಾ ಬಿಜೆಪಿ ಗ್ರಾಮೀಣ ಘಟಕದ ಅಧ್ಯಕ್ಷ ಸಂಜಯ್ ಪಾಟೀಲ್ ಸಭೆಯಲ್ಲಿ ಭಾಗಿಯಾಗಿದ್ದರು.

ಸಭೆ ಬಳಿಕ ಜೈನ ಸಮುದಾಯ ಮುಖಂಡ ಡಾ.ಎನ್.ಎ.ಮಗದುಮ್ ಮಾಧ್ಯಮಗಳೊಂದಿಗೆ ಮಾತನಾಡಿದರು. ಇದು ಬಹಳ ದುಃಖಕರ ಸನ್ನಿವೇಶ, ಇಂತಹ ಘಟನೆ ಆಗಬಾರದಿತ್ತು. ಘಟನೆಯನ್ನು ಖಂಡಿಸಲು ನಾವು ಸಭೆ ಮಾಡಿದ್ದೇವೆ. ಯಾವುದೇ ಸರ್ಕಾರ ಇರಲಿ ಮುನಿಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಯಾವುದೇ ಪಕ್ಷದ ಸರ್ಕಾರ ಇರಲಿ, ಮುನಿಗಳಿಗೆ ರಕ್ಷಣೆ ಸಿಗಬೇಕು. ನಮ್ಮ ಧರ್ಮ ಅಂತಾ ಅಷ್ಟೇ ಅಲ್ಲ ಯಾವುದೇ ಧರ್ಮ ಇರಲಿ ಗುರುಗಳು ಅಂದರೆ ಎಲ್ಲರಿಗೂ ಅಷ್ಟೇ. ಕ್ರೂರ ಹತ್ಯೆ ಖಂಡಿಸಲು ನಾವೆಲ್ಲರೂ ಸೇರಿದ್ದೇವೆ. ಸೋಮವಾರದಂದು ಚಿಕ್ಕೋಡಿಯಲ್ಲಿ ನಾವು ಮೌನ ಪ್ರತಿಭಟನೆ ನಡೆಸಲಿದ್ದೇವೆ. ಹತ್ತು ಸಾವಿರಕ್ಕೂ ಹೆಚ್ಚು ಜನ ಸೇರಿ ಮೌನ ಪ್ರತಿಭಟನೆ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸುತ್ತೇವೆ ಎಂದು ತಿಳಿಸಿದರು.

ಪೈಶಾಚಿಕ ಕೃತ್ಯವೆಸಗಿದರೂ ಮುಖ್ಯಮಂತ್ರಿ ಸ್ಪಂದನೆ ಇಲ್ಲ

ಸಿದ್ದರಾಮಯ್ಯ ವಿರುದ್ಧ ಜೈನಮುನಿ ಗುಣಧರನಂದಿ ಕಿಡಿ

ಹುಬ್ಬಳ್ಳಿ: ಕ್ರೂರವಾಗಿ ಜೈನ ಮುನಿ ಕಾಮಕುಮಾರನಂದಿ ಮಹರಾಜರನ್ನು ಕೊಲ್ಲಲಾಗಿದೆ. ಇಂತಹ ಪೈಶಾಚಿಕ ಕೃತ್ಯವೆಸಗಿದರೂ ಸಿಎಂ ಸಿದ್ದರಾಮಯ್ಯ ಸ್ಪಂದನೆ ನೀಡಿಲ್ಲ ಎಂದು ನವಗ್ರಹ ತೀರ್ಥ ಕ್ಷೇತ್ರದ ಜೈನಮುನಿ ಗುಣಧರನಂದಿ ಮಹಾರಾಜ ಬಹಿರಂಗವಾಗಿ ಆಕ್ರೋಶ ಹೊರಹಾಕಿದರು. ತಾಲೂಕಿನ ವರೂರು ಗ್ರಾಮದಲ್ಲಿ ಮಾತನಾಡಿದ ಅವರು, ನಮ್ಮ ದೇಶದಲ್ಲಿ ಆತಂಕವಾದಿಗಳಿಗೆ ಯಾವ ಶಿಕ್ಷೆಯಾಗುವುದಿಲ್ಲವೋ ಅಂತಹ ಶಿಕ್ಷೆ ಜೈನ ಮುನಿಗಳಿಗೆ ನೀಡಲಾಗಿದೆ. ಕಾಮಕುಮಾರನಂದಿ ಶ್ರೀಗಳನ್ನು ಅದಕ್ಕಿಂತ ಕ್ರೂರವಾಗಿ ಕೊಲ್ಲಲಾಗಿದೆ. ಇಂತಹ ದುಷ್ಕೃತ್ಯ ವೆಸಗಿದರೂ ಸಿಎಂ ಯಾವುದೇ ಸ್ಪಂದನೆ ಮಾಡಿಲ್ಲ. ಅಲ್ಪಸಂಖ್ಯಾತ, ಕುರುಬ ಸಮಾಜದ ಶ್ರೀಗಳಿಗೆ ಹೀಗಾಗಿದರೆ ಸುಮ್ಮನಿರುತ್ತಿದ್ದರಾ ಎಂದು ಪ್ರಶ್ನಿಸಿದರು.



ನಮ್ಮ ಸಮಾಜದ ಬಗ್ಗೆ ಸಿಎಂ ಸಿದ್ದರಾಮಯ್ಯನವರಿಗೆ ಯಾಕಿಷ್ಟು ನಿರ್ಲಕ್ಷ್ಯ ಎಂದು ಪ್ರಶ್ನಿಸಿದ ಜೈನ ಮುನಿ ಗುಣಧರನಂದಿ, ಒಬ್ಬ ಜೈನಮುನಿಗೆ ಈ ರೀತಿ ಚಿತ್ರಹಿಂಸೆ ನೀಡಿ ಕೊಲೆ ಮಾಡಿರುವುದು ನಿಜಕ್ಕೂ ನೋವಿನ ಸಂಗತಿ. ಮಾಧ್ಯಮಗಳ ಸಹಾಯದಿಂದ ಈ ಕೃತ್ಯ ಇದೀಗ ಬೆಳಕಿಗೆ ಬಂದಿದೆ. ಇದೀಗ ಸರ್ಕಾರ ಹಾಗೂ ಜನಪ್ರತಿನಿಧಿಗಳಿಂದ ಸ್ಪಂದನೆ ಸಿಗುತ್ತಿದೆ. ನಾಳೆ ಸಂಜೆ 5 ಗಂಟೆ ಒಳಗೆ ನಮ್ಮ ಬೇಡಿಕೆಗೆ ಮನ್ನಣೆ ನೀಡುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಭರವಸೆ ನೀಡಿದ್ದಾರೆ ಎಂದರು. ಅಲ್ಲದೆ, ದೇಶಾಂತರ ಪಾದಯಾತ್ರೆ ಮಾಡುವಾಗ ಭದ್ರತೆ ಇಲ್ಲದಿರುವುದರಿಂದ ಜೈನ ಮುನಿಗಳಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಪಾದಯಾತ್ರೆ ಮಾಡುವ ಪ್ರತಿಯೊಬ್ಬ ಜೈನಮುನಿಗಳಿಗೆ ಸೂಕ್ತ ಭದ್ರತೆ ಜೊತೆಗೆ ಆಶ್ರಯ ನೀಡಬೇಕು ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮೂಲಕ ಕೇಂದ್ರ ಗೃಹಸಚಿವರಿಗೆ ಮನವಿ ಸಲ್ಲಿಸಲಾಗಿದೆ ಎಂದ ಜೈನಮುನಿ, ನಮ್ಮ ಮನವಿಗೆ ಸರ್ಕಾರ ಸ್ಪಂದಿಸದಿದ್ದರೆ ಅಮರಣಾಂತ ಉಪವಾಸ ಕೈಬಿಡುವುದಿಲ್ಲ. ನಮಗೆ ಭದ್ರತೆ ಒದಗಿಸುವವರೆಗೂ ಅಮರಣಾಂತ ಉಪವಾಸ ನಡೆಸುತ್ತೇವೆ ಎಂದು ಜೈನಮುನಿ ಗುಣಧರನಂದಿ ಎಚ್ಚರಿಕೆ ನೀಡಿದರು.

ಜೈನ ಮುನಿಯೊಂದಿಗೆ ಮಾತನಾಡಿದ ಗೃಹ ಸಚಿವ: ನಮಗೆ ಭದ್ರತೆಯಿಲ್ಲ ನಾಳೆ ನಮಗೆ ಏನಾದರು ಆದರೆ ಏನು ಮಾಡುವುದು ಎಂದು ಕಣ್ಣೀರು ಹಾಕಿದ್ದ ಗುಣಧರನಂದಿ ಮಹರಾಜರೊಂದಿಗೆ ದೂರವಾಣಿ ಕರೆ ಮೂಲಕ ಮಾತನಾಡಿ, ಧೈರ್ಯ ತುಂಬಿದ ಗೃಹ ಸಚಿವ ಡಾ. ಜಿ.ಪರಮೇಶ್ವರ್, ಆರೋಪಿಗಳಿಗೆ ಶಿಕ್ಷೆ ಕೊಡಿಸುವುದಾಗಿ ಭರವಸೆ ನೀಡಿದರು. ಈ ವೇಳೆ, ಹತ್ಯೆಗೈದ ಆರೋಪಿಗಳಿಗೆ ಶಿಕ್ಷೆ ನೀಡಬೇಕು ಎಂಬುದು ನಮ್ಮ ಬೇಡಿಕೆ ಅಲ್ಲ. ಅವರಿಗೂ ಕುಟುಂಬ ಇರುತ್ತದೆ. ನಾವು ಅಹಿಂಸಾ ತತ್ವವಾದಿಗಳು ಶಾಂತಿ ಪ್ರಿಯರು. ಹೀಗಾಗಿ ನಮ್ಮ ನಾಲ್ಕು ಬೇಡಿಕೆಗಳನ್ನು ನಿಮ್ಮ ಮುಂದಿಟ್ಟಿದ್ದೇವೆ, ಅವುಗಳನ್ನು ಈಡೇರಿಸಿದರೆ ಸಾಕು ಎಂದರು. ಅಲ್ಲದೆ, ನಾಳೆ ಗುಣಧರನಂದಿ ಅವರನ್ನು ಪರಮೇಶ್ವರ್ ಅವರು ಭೇಟಿಯಾಗುವ ಭರವಸೆ ನೀಡಿದರು.

ಬಡ ವಿದ್ಯಾರ್ಥಿಗಳ ಜೀವನ ಹಸನಾಗಲು ನೆರವು ಸಹಕಾರಿ

ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್ ಅಭಿಮತ

ಮೈಸೂರು, ಜು.9(ಎಂಟಿವೈ)- ಉಳ್ಳವರು ವಿದ್ಯಾರ್ಥಿನಿಲಯಗಳಿಗೆ ನೆರವು ನೀಡಿದರೆ ಬಡ ಕುಟುಂಬದ ವಿದ್ಯಾರ್ಥಿಗಳು ಉತ್ತಮ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ಬಣಜಿಗ(ಬಲಿಜ) ವಿದ್ಯಾರ್ಥಿನಿಲಯದಲ್ಲಿ ಭಾನುವಾರ ಬಡೆದ ಅಭಿನಂಧನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಣಜಿಗ(ಬಲಿಜ) ಸಮುದಾಯ ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಪೂರಕವಾದ ವಾತಾವರಣ ಕಲ್ಪಿಸುವುದರೊಂದಿಗೆ ನೆರವು ನೀಡುವ ನಿಟ್ಟಿನಲ್ಲಿ ನೂತನ ವಿದ್ಯಾರ್ಥಿನಿಲಯ ನಿರ್ಮಿಸಲಾಗಿದೆ. ಸಮುದಾಯದ ಬಡ ಕುಟುಂಬದ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಪಡೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಗ್ರಾಮೀಣ ಪ್ರದೇಶದಿಂದ ಬರುವ ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ಸೌಲಭ್ಯ ಒದಗಿಸಲು ನಮ್ಮ ವಿದ್ಯಾರ್ಥಿನಿಲಯ ಪೂರಕವಾಗಿದೆ. ಈ ವಿದ್ಯಾರ್ಥಿನಿಲಯಕ್ಕೆ ಮೂಲ ಸೌಲಭ್ಯ ಕಲ್ಪಿಸುವುದಕ್ಕೆ ಎಸ್.ಹನುಮಾನ್ ದಂಪತಿಗಳು ತಮ್ಮ ಪುತ್ರ ಡಾ.ಹೆಚ್. ಸಂದೀಪ್ ಅವರ ಸ್ಮರಣಾರ್ಥ ಬೇರೆ ಮಕ್ಕಳ ವಿದ್ಯಾರ್ಜನೆಗೆ ಹಾಗೂ ದೇವಾಲಯಗಳ ನಿರ್ಮಾಣಕ್ಕೆ ಕೋಟ್ಯಾಂತರ ರೂ. ಆರ್ಥಿಕ ನೆರವು ನೀಡುತ್ತಿದ್ದಾರೆ. ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ನೆರವಾಗಲು ವಿದ್ಯಾರ್ಥಿ ನಿಲಯಗಳು ಆಶ್ರಯ ತಾಣವಾಗಿದೆ. ಬದುಕನ್ನು ರೂಪಿಸಿಕೊಳ್ಳಲು ಸಹಾಯವಾಗುವ ವಿದ್ಯಾರ್ಥಿ ನಿಲಯಗಳಿಗೆ ಉಳ್ಳವರು ಸಹಾಯ ಮಾಡಿದರೆ ನೂರಾರು ವಿದ್ಯಾರ್ಥಿಗಳು ಭವಿಷ್ಯ ರೂಪಿಸಿಕೊಳ್ಳುವುದರೊಂದಿಗೆ ದಾನಿಗಳ ಹೆಸರು ಉಳಿಯುತ್ತದೆ. ಜೀವನದ ಸಾರ್ಥಕತೆಗೆ ಒಂದು ಅರ್ಥ ಬರುತ್ತದೆ. ವಿದ್ಯಾಕ್ಷೇತ್ರಕ್ಕೆ ಸಹಾಯ ಮಾಡಿದರೆ ವಿದ್ಯಾರ್ಥಿಗಳು ಜೀವನವನ್ನು ರೂಪಿಸಿಕೊಂಡು ದೇಶದ ಪ್ರಗತಿಗೆ ಸಹಕಾರಿಯಾಗಲಿದ್ದಾರೆ. ಮಾಜಿ ಸಚಿವ ಎಂ.ಆರ್.ಸೀತಾರಾಮ್ ರವರ ಸಹಾಯದಿಂದ ಮೈಸೂರಿನಲ್ಲಿ ಎಂ.ಎಸ್.ರಾಮಯ್ಯ ಬಲಿಜ ವಿದ್ಯಾರ್ಥಿ ನಿಲಯ ಸ್ಥಾಪಿಸಲು ಸಾಧ್ಯವಾಯಿತು. ನೂತನ ವಿದ್ಯಾರ್ಥಿನಿಲಯದಿಂದ ವಿದ್ಯಾರ್ಥಿನಿಯರು ಮೈಸೂರಿನಲ್ಲಿ ಉತ್ತಮ ವಾತಾವರಣದಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗಿದೆ ಎಂದರು.



ಇದೇ ವೇಳೆ ನೂತನ ಮಹಿಳಾ ಮಹಿಳಾ ವಿದ್ಯಾರ್ಥಿ ನಿಲಯಕ್ಕೂ ಮೂಲಭೂತ ಸೌಲಭ್ಯ ಕಲ್ಪಿಸಲು 5 ಲಕ್ಷ ರೂ. ಆರ್ಥಿಕ ನೆರವು ನೀಡಿದ ಎಸ್.ಹನುಮಾನ್, ಬಿ. ಶಾರದ, ಆರ್. ಪೂರ್ಣಿಮಾ, ವಿ.ಸುಂದರಮೂರ್ತಿ ಅವರನ್ನು ಸನ್ಮಾನಿಸಲಾಯಿತು.

> ‘ವಿದ್ಯಾರ್ಥಿ ನಿಲಯದಲ್ಲಿ ಬಲಿಜ ವಿದ್ಯಾರ್ಥಿಗಳು ಸಾವಿರಾರು ಮಂದಿ ಜ್ಞಾನಾರ್ಜನೆ ಪಡೆದು ತಮ್ಮ ಭವಿಷ್ಯವನ್ನು ಉತ್ತಮಪಡಿಸಿಕೊಂಡಿದ್ದಾರೆ. ಬೆಂಗಳೂರು, ತುಮಕೂರಿನ ಬಳಿಕ ಮೈಸೂರಿನಲ್ಲಿ ಮಹಿಳಾ ವಿದ್ಯಾರ್ಥಿ ನಿಲಯ ಸ್ಥಾಪಿಸಲಾಗಿದೆ.
> -ಎಂ.ನಾರಾಯಣ್,
> ಬಣಜಿಗ(ಬಲಿಜ)ಸಂಘದ ಅಧ್ಯಕ್ಷ

ಕಾರ್ಯಕ್ರಮದಲ್ಲಿ ಬಣಜಿಗ(ಬಲಿಜ) ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಗೋಪಾಲಕೃಷ್ಣ, ಉಪಾಧ್ಯಕ್ಷ ಜಿ.ರಮೇಶ್, ಸಂಘದ ನಿರ್ದೇಶಕರುಗಳಾದ ಹೆಚ್.ಕೆ.ಜಗನ್ನಾಥ್, ಡಿ.ನಾಗರಾಜ್, ಡಾ.ಎಸ್.ಕೃಷ್ಣಪ್ಪ, ಬಿ.ಕೆ.ಸುರೇಶ್, ಹೆಚ್.ವಿ. ನಾಗರಾಜ್ ವಿಶೇಷ ಆಹ್ವಾನಿತರಾದ ಪಾರ್ಥ ಸಾರಥಿ, ಟಿ.ಎಸ್. ರಮೇಶ್ ಇನ್ನಿತರರು ಪಾಲ್ಗೊಂಡಿದ್ದರು.

ಕೆಂಪನಂಜಮ್ಮಣ್ಣಿ ಅವರಿಂದ ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ

ರಾಜವಂಶಸ್ಥೆ ತ್ರಿಷಿಕಾ ಕುಮಾರಿ



ಮೈಸೂರು, ಜು.9(ಜಿಎ)-ಕೆಂಪನಂಜಮ್ಮಣ್ಣಿ ಅವರು ಆಡಳಿತವನ್ನು ಸುಸೂತ್ರವಾಗಿ ನಿಭಾಯಿಸಿದಲ್ಲದೇ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ರಾಜವಂಶಸ್ಥೆ ತ್ರಿಷಿಕಾ ಕುಮಾರಿ ತಿಳಿಸಿದರು.

ಅರಸು ಮಂಡಳಿ ಸಂಘದ ವತಿಯಿಂದ ತ್ಯಾಗರಾಜ ರಸ್ತೆಯಲ್ಲಿರುವ ಸಂಘದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಮಾತೋಶ್ರೀ ಕೆಂಪನಂಜಮ್ಮಣ್ಣಿ ವಿಲಾಸ ಸನ್ನಿಧಾನ ಅವರ 157ನೇ ವರ್ಧಂತಿ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದ ಸುಧಾರಣೆಗೆ ಮಹಿಳೆಯರು ಹಲವಾರು ಕೊಡುಗೆಗಳನ್ನು ನೀಡಿ ಸಮಾಜದ ಅಭಿವೃದ್ಧಿಗೆ ಕೈ ಜೋಡಿಸಿದ್ದಾರೆ ಅಂತಹ ಮಹಿಳೆಯರಲ್ಲಿ ರಾಜಮನೆತನದ ಕೆಂಪನಂಜಮ್ಮಣ್ಣಿ ವಿಲಾಸ ಸನ್ನಿಧಾನ ಸದಾ ಮಾದರಿಯಾಗಿದ್ದಾರೆ. ಸಮಾಜದ ಏಳಿಗೆಗೆ ಶ್ರಮಿಸಿದವರ ಸೇವೆಯನ್ನು ನಾವು ಮರೆಯಬಾರದು ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬಾಲಕರಾಗಿದ್ದಾಗ ಅಧಿಕಾರವನ್ನು ವಹಿಸಿಕೊಂಡ ಕೆಂಪನಂಜಮ್ಮಣ್ಣಿ ಅವರು ಆಡಳಿತವನ್ನು ಸುಸೂತ್ರವಾಗಿ ನಿಭಾಯಿಸಿದಲ್ಲದೇ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸಮಾಜಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸುವ ಮೂಲಕ ಅವರ ಆದರ್ಶಗಳನ್ನು ಅನುಕರಣೆ ಮಾಡಬೇಕು. ಅರಸು ಮಂಡಳಿ ಸಂಘದ ಸಮಾಜದ ಸೇವಾ ಕಾರ್ಯಗಳು ಮುಂದುವರೆಯಲಿ ನಾನು ಕೂಡು ಸಂಘದ ಎಲ್ಲ ಸಾಮಾಜಿಕ ಕೆಲಸಗಳಿಗೂ ಕೈಜೋಡಿಸುತ್ತೇನೆ ಎಂದು ಭರವಸೆ ನೀಡಿದರು.

ಶ್ರೀಚಾಮರಾಜೇಂದ್ರ ಎಜುಕೇಷನ್ ಟ್ರಸ್ಟ್ ಉಪಾಧ್ಯಕ್ಷೆ ಡಾ.ಭಾರತಿ ಅರಸ್ ಮಾತನಾಡಿ, ರಾಜಮಹಾರಾಜರು ಎಂದರೆ ಯುದ್ಧವಲ್ಲ. ಅಭಿವೃದ್ಧಿಯ ಮೂಲಕ ಸಮಾಜವನ್ನು ಕಟ್ಟಬಹುದು ಎಂಬುದನ್ನು ಮೈಸೂರು ರಾಜರು ತೋರಿಸಿದ್ದಾರೆ. ಅದರಂತೆ ಕೆಂಪನಂಜಮ್ಮಣ್ಣಿ ಕತ್ತಿ ಹಿಡಿದು ಹೋರಾಡಲಿಲ್ಲ, ಲೇಖನಿಯಲ್ಲಿ ಬರೆದು ಕ್ರಾಂತಿ ಮಾಡಲಿಲ್ಲ. ಬದಲಾಗಿ ಜನೋಪಯೋಗಿ ಕೆಲಸಗಳನ್ನು ಮಾಡುವ ಮೂಲಕ ಹೆಸರುವಾಸಿಯಾದರು ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಡಿಎಆರ್‌ಎಲ್ ವಿಜ್ಞಾನಿ ರಾಧಿಕಾ ಮದನ್ ಅರಸ್, ಎಲ್‌ಐಸಿ ಸಹಾಯಕ ವಿಭಾಗೀಯ ವ್ಯವಸ್ಥಾಪಕರಾದ ಬಿ.ಕೆ.ಗಿರಿಜಾ ಅರಸ್, ಶ್ರೀಚಾಮರಾಜೇಂದ್ರ ಎಜುಕೇಷನ್ ಟ್ರಸ್ಟ್‌ನ ಟ್ರಸ್ಟಿ ಪದ್ಮಶ್ರೀ ಅರಸ್ ಚಿದಾನಂದ್, ಛಾರ್ವಿ ಡೆಂಟಲ್ ಕೇರ್‌ನ ದಂತ ವೈದ್ಯೆ ಡಾ.ಎಂ.ವಿ.ಶಿಲ್ಪಾ ಅರಸ್ ಅವರನ್ನು ಸನ್ಮಾನಿಸಲಾಯಿತು. ಉಪ ಮೇಯರ್ ಡಾ.ರೂಪಾ ಯೋಗೀಶ್, ಹೆಚ್ಚುವರಿ ಜಿಲ್ಲಾಧಿಕಾರಿ ಕವಿತ ರಾಜಾರಾಂ, ಸಂಘದ ಅಧ್ಯಕ್ಷರಾದ ಎಸ್.ಲಿಂಗರಾಜೇ ಅರಸ್ ಉಪಸ್ಥಿತರಿದ್ದರು.



ಮೈಸೂರು ತಾಲ್ಲೂಕು ಪುಟ್ಟೇಗೌಡನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಸ್ ಮಹದೇವಪ್ಪ, ಗ್ರಾಪಂ ಮಾಜಿ ಸದಸ್ಯ ಮಂಜು ಪ್ರಕಾಶ್, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ನಾಗರಾಜು, ಕಾಂಗ್ರೆಸ್ ಮುಖಂಡ ಬಸವಣ್ಣ, ಅವರು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಅಭಿನಂದಿಸಿದರು.

ರಷ್ಯಾ: ಭಾರತಕ್ಕೆ ಪೂರೈಸುವ ತೈಲದ ಮೇಲಿನ ರಿಯಾಯಿತಿ 4 ಡಾಲರ್‌ನಷ್ಟು ಕಡಿತ

ನವದೆಹಲಿ, ಜು.9- ಉಕ್ರೇನ್ ಯುದ್ಧದ ಕಾರಣದಿಂದ ಭಾರತಕ್ಕೆ ಪೂರೈಸುವ ಕಚ್ಚಾ ತೈಲದ ಮೇಲಿನ ರಿಯಾಯಿತಿಯನ್ನು ರಷ್ಯಾ 4 ಡಾಲರ್‌ನಷ್ಟು ತಗ್ಗಿಸಿದೆ. ಮತ್ತೊಂದೆಡೆ, ರಷ್ಯಾ ಸ್ಥಾಪಿಸಿದ ತೈಲ ಸಾರಿಗೆ ಕಂಪನಿಗಳ ಶುಲ್ಕಗಳು ಇನ್ನೂ ಹೆಚ್ಚಿವೆ. ಇದು ದೇಶೀಯ ತೈಲ ಬೆಲೆಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ವರದಿ ತಿಳಿಸಿದೆ.

ಪ್ರಸ್ತುತ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬೆಲೆ ನಿಯಂತ್ರಣದಿಂದಾಗಿ ರಷ್ಯಾವು ಭಾರತಕ್ಕೆ ಕಚ್ಚಾ ತೈಲವನ್ನು ಬ್ಯಾರೆಲ್‌ಗೆ 60ಡಾಲರ್ ಗಿಂತ ಕಡಿಮೆ ಮಾರಾಟ ಮಾಡುತ್ತಿದೆ. ಆದರೆ ಬಾಲ್ಟಿಕ್ ಮತ್ತು ಕಪ್ಪು ಸಮುದ್ರದಿಂದ ಭಾರತದ ಪಶ್ಚಿಮ ಕರಾವಳಿಗೆ ತರಲು ಪ್ರತಿ ಬ್ಯಾರೆಲ್ 11 ರಿಂದ 19ಡಾಲರ್ ವರೆಗೆ ಹಡಗು ಶುಲ್ಕ ವಿಧಿಸುತ್ತದೆ. ಇದು ಮಾರುಕಟ್ಟೆ ಬೆಲೆಗಿಂತ ಹೆಚ್ಚಾಗಿದೆ. ಇದಕ್ಕಾಗಿ, ರಷ್ಯಾದಲ್ಲಿರುವ 100 ಕ್ಕೂ ಹೆಚ್ಚು ಟ್ಯಾಂಕರ್‌ಗಳಲ್ಲಿ ಕೆಲವನ್ನು ಭಾರತಕ್ಕೆ ತೈಲ ಪೂರೈಸಲು ಬಳಕೆ ಮಾಡಲಾಗುತ್ತಿದ್ದು, ಇವುಗಳಿಗೆ ಹೆಚ್ಚಿನ ಬೆಲೆ ವಿಧಿಸಲಾಗುತ್ತಿದೆ.

ಕಳೆದ ಫೆಬ್ರವರಿಯಲ್ಲಿ ರಷ್ಯಾವು ಏಷ್ಯಾದ ಜಪಾನ್ ಸೇರಿ ಯುರೋಪಿಯನ್ ಖರೀದಾರರನ್ನು ದೂರವಿಟ್ಟಿತ್ತು. ಈ ರಿಯಾಯಿತಿ ಕಡಿತವು ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್, ಹಿಂದುಸ್ತಾನ್ ಪ್ರೈವೇಟ್ ಲಿಮಿಟೆಡ್, ಭಾರತ್ ಪೆಟ್ರೋಲಿಯಮ್ ಲಿಮಿಟೆಡ್, ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ಮತ್ತು ಎಚ್‌ಪಿಸಿಎಲ್ ಮಿತ್ತಲ್ ಎನರ್ಜಿ ಲಿಮಿಟೆಡ್ ಸೇರಿದಂತೆ ಖಾಸಗಿ ತೈಲ ಕಂಪನಿಗಳ ಮೇಲೆಯೂ ಪರಿಣಾಮ ಬೀರಲಿದೆ.

ಸಾಂಸ್ಕೃತಿಕ ನಗರಿಯಲ್ಲಿ ಜಾವ ಬೈಕ್‌ಗಳ ಕಲರವ

● ಜಾವ ದಿನದ ಹಿನ್ನೆಲೆಯಲ್ಲಿ ರ್‍ಯಾಲಿ ಆಯೋಜನೆ ● ರಿಂಗ್ ರಸ್ತೆಯಲ್ಲಿ ಸಂಚರಿಸಿ, ಶ್ರೀರಂಗಪಟ್ಟಣಕ್ಕೆ ಪ್ರಯಾಣ ● ಜಾವ ಫ್ರೆಂಡ್ಸ್ ಕ್ಲಬ್ ಮೈಸೂರು ವತಿಯಿಂದ ರ್‍ಯಾಲಿ





ಮೈಸೂರು, ಜು.9(ಎಂಟಿವೈ)- ಮೈಸೂರಿನಲ್ಲಿ ಭಾನುವಾರ ಜಾವ ಮತ್ತು ಯೆಜ್ಡಿ ಬೈಕ್‌ಗಳು ರಸ್ತೆಗಳಿದು ಸದ್ದು ಮಾಡಿದವು. ರಿಂಗ್ ರಸ್ತೆಯಲ್ಲಿ ಸಂಚರಿಸಿದ ಹಳೆ ಸುಂದರಿಯರು ಸಾರ್ವಜನಿಕರ ಗಮನ ಸೆಳೆದವು.

ಮೈಸೂರು ಜಾವ ಫ್ರೆಂಡ್ಸ್ ಕ್ಲಬ್ ವತಿಯಿಂದ 21ನೇ ಅಂತರರಾಷ್ಟ್ರೀಯ ಜಾವ ದಿನದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಜಾವ ಬೈಕ್ ರ್‍ಯಾಲಿಯಲ್ಲಿ ಮೈಸೂರು, ಬೆಂಗಳೂರು, ತುಮಕೂರು, ಮಂಡ್ಯ, ಕೊಡುಗೆ ಜಿಲ್ಲೆ ಸೇರಿದಂತೆ ವಿವಿಧೆಡೆ ಗಳಿಂದ ಜಾವ ಮತ್ತು ಯೆಜ್ಡಿ ಬೈಕ್‌ಗಳೊಂದಿಗೆ ಆಗಮಿಸಿ ರ್‍ಯಾಲಿಯಲ್ಲಿ ಪಾಲ್ಗೊಂಡರು.

ಮೈಸೂರಿನ ರಿಂಗ್‌ರಸ್ತೆಯಲ್ಲಿರುವ ಆರ್‌ಟಿಓ ಕಚೇರಿ ಮುಂಭಾಗದಿಂದ ಆರಂಭವಾದ ರ್‍ಯಾಲಿ ಸಾತಗಳ್ಳಿ ರಸ್ತೆ ಜಂಕ್ಷನ್, ಬನ್ನೂರು ರಸ್ತೆ ಜಂಕ್ಷನ್, ತಿ.ನರಸೀಪುರ ರಸ್ತೆ, ನಂಜನಗೂಡು ರಸ್ತೆ, ಹೆಚ್.ಡಿ. ಕೋಟೆ ರಸ್ತೆ, ಬೋಗಾದಿ ರಸ್ತೆ, ಹುಣಸೂರು ರಸ್ತೆ, ಕೆಆರ್‌ಎಸ್ ರಸ್ತೆ ಜಂಕ್ಷನ್ ಮೂಲಕ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಮೂಲಕ ಶ್ರೀರಂಗಪಟ್ಟಣದ ಸರ್ಕಾರಿ ಅತಿಥಿ ಗೃಹದವರೆಗೂ ಸಂಚರಿಸಿದವು.

ಜಾವ ಬೈಕ್ ರ್‍ಯಾಲಿಯಲ್ಲಿ: ಜಾವ ರ್‍ಯಾಲಿಯಲ್ಲಿ 1960 ರಿಂದ 1990ರವರೆಗೆ ತಯಾರಾದ ವಿವಿಧ ಮಾಡೆಲ್‌ಗಳ ಜಾವಾ ಹಾಗೂ ಯೆಜ್ಡಿ ಬೈಕ್‌ಗಳು ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಯೆಜ್ಡಿ ಕೊಲ್ಟ್ ಮಾಡೆಲ್‌ನಿಂದ ಕಳೆದ ವರ್ಷ ಮಾರುಕಟ್ಟೆ ಬಿಡುಗಡೆಯಾಗಿರುವ ಹೊಸ ಬೈಕ್‌ಗಳು ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದವು. 40 ಸಿಸಿ ಯಿಂದ 400 ಸಿಸಿವರೆಗೆ ಜಾವಾ, ಯೆಜ್ಡಿ, ರೋಡ್ ಕಿಂಗ್ ಸೇರಿದಂತೆ ಇನ್ನಿತರ ಮಾಡೆಲ್‌ಗಳ ಬೈಕ್‌ಗಳು ಪಾಲ್ಗೊಂಡಿದ್ದವು.

ಈ ಸಂದರ್ಭದಲ್ಲಿ ಜಾವ ಫ್ರೆಂಡ್ಸ್ ಕ್ಲಬ್ ಮೈಸೂರು ಸದಸ್ಯರಾದ ಸಮೀರ್, ಕೈಝುರ್, ಶಿವು, ವಿನಿತ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಅರ್ಜಿ ಆಹ್ವಾನ

ಮೈಸೂರು, ಜು.9- ಆದಿವಾಸಿ ಜನರಲ್ಲಿ ಆರೋಗ್ಯದ ಕಾಳಜಿ ಹೆಚ್ಚಿಸುವ ಕಾರ್ಯಕ್ರಮದ ಅಂಗವಾಗಿ ಟ್ರೈಬಲ್ ಹೆಲ್ತ್ ನ್ಯಾವಿಗೇಶನ್ ಮಾಡೆಲ್ ಕಾರ್ಯಕ್ರಮದಡಿಯಲ್ಲಿ ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಆದಿವಾಸಿ ಆರೋಗ್ಯ ಕಾರ್ಯಕರ್ತೆಯರು ಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಯಲ್ಲಿ ಆದಿವಾಸಿ ಆರೋಗ್ಯ ಸಂಯೋಜಕರನ್ನು ನೇಮಕ ಮಾಡುವ ಸಂಬಂಧ ಅರಣ್ಯಾಧಾರಿತ ಪರಿಶಿಷ್ಟ ವರ್ಗದ ಸೋಲಿಗ, ಕಾಡುಕುರುಬ, ಜೇನುಕುರುಬ ಹಾಗೂ ಯರವ ಜನಾಂಗದ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಜುಲೈ 22 ಕಡೆಯ ದಿನಾಂಕವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ದೂ.ಸಂ. 0821-2411113/7899235352, ಎಚ್.ಡಿ.ಕೋಟೆ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ದೂ.ಸಂ.08228-255681/8497079704, ಹುಣಸೂರು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ದೂ.ಸಂ.08222-252812/9686544602 ಹಾಗೂ ಪಿರಿಯಾಪಟ್ಟಣ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಗ್ರೇಡ್-2 ದೂ.ಸಂ.08223-273128/9480116321 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಸಾಮಾಜಿಕ ಜಾಲತಾಣವನ್ನು ನಂಬದೇ ಸತ್ಯಾಂಶ ತಿಳಿಯುವುದು ಅವಶ್ಯ

ಚಿಂತಕ ಪ್ರೊ.ಪುರುಷೋತ್ತಮ ಬಿಳಿಮಲೆ ಅಭಿಮತ

ಮೈಸೂರು, ಜು.9(ಜಿಎ)- ಸಾಮಾಜಿಕ ಜಾಲತಾಣಗಳಾದ ವ್ಯಾಟ್ಸಾಪ್, ಫೇಸ್‌ಬುಕ್‌ನಲ್ಲಿ ಬಂದಿರುವುದನ್ನು ನಂಬುವುದು ಬೇಡ. ಗ್ರಂಥಾಲಯಕ್ಕೆ ಹೋಗಿ ಮೂಲ ಪುಸ್ತಕಗಳನ್ನು ಪುಸ್ತಕಗಳನ್ನು ಓದಿ ಸತ್ಯಾಂಶ ತಿಳಿಯುವುದು ಅವಶ್ಯವೆಂದು ಚಿಂತಕ ಪ್ರೊ.ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ರಂಗಾಯಣದ ಶ್ರೀರಂಗ ವೇದಿಕೆಯಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಕೃಷ್ಣಜನಮನ ಅವರು ರಚಿಸಿರುವ ‘ಕೊಂಡವಾಡೆ’, ‘ಶಾಂತಿಯಾತ್ರೆ’ ಪುಸ್ತಕಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಕಳೆದ ಹತ್ತು ವರ್ಷಗಳಿಂದ ನೆಹರೂ ಬಗ್ಗೆ ಶೇ.99 ಸುಳ್ಳು ಮಾಹಿತಿಗಳು ಸಾಮಾಜಿಕ ಜಾಲತಾಣದಲ್ಲಿ ಬಂದಿದೆ. ನೆನ್ನೆ ಮೊನ್ನೆ ಹುಟ್ಟಿದವರು ನೆಹರೂ ಬಗ್ಗೆ ಸುಳ್ಳು ಹೇಳುತ್ತಾರೆ. ನೆಹರೂ ಅವರು ಭಾರತದ ಬಗ್ಗೆ, ಇಂದಿರಾಗೆ ಬರೆದ ಪತ್ರಗಳು, ಅಮೆರಿಕಕ್ಕೆ ಹೋದಾಗ ಮಾಡಿದ ಭಾಷಣಗಳನ್ನು ಮುಕ್ತವಾಗಿ ಓದಬೇಕು. ಮಹಾತ ಗಾಂಧಿ, ಬಿ.ಆರ್. ಅಂಬೇಡ್ಕರ್, ಜವಾಹರ್‌ಲಾಲ್ ನೆಹರು ಓದುವಾಗ ಸಾಂಸ್ಥಿಕರಣಗೊಳಿಸದೇ ಅವರನ್ನು ಚರ್ಚಿಸಬೇಕು. ಈ ಪ್ರಕ್ರಿಯೆಯಲ್ಲಿ ಅವರು ಬೆಳೆಯುತ್ತಾರೆ. ನಾವು ಬೆಳೆಯುತ್ತೇವೆ ಎಂದು ಅಭಿಪ್ರಾಯಪಟ್ಟರು.



ದೇಶ ಕಟ್ಟಿದ ಮಹನೀಯರನ್ನು ಓದದೇ ವಿಮರ್ಶೆ ಮಾಡುವುದು ಸರಿಯಲ್ಲ. ಸಾಂಸ್ಥೀಕರಗೊಳ್ಳದ ಹಾಗೇ ಪ್ರಶ್ನೆಗಳನ್ನು ಹಾಕುತ್ತಾ ಹೋಗುವುದು. ಇವರ ಬಗ್ಗೆ ಹೆಚ್ಚು ಹೆಚ್ಚು ಓದುವುದು ಒಳ್ಳೆಯದು ಎಂದ ಅವರು, ಸಾಮಾಜಿಕ ಜಾಲತಾಣಗಳಾದ ವ್ಯಾಟ್ಸಾಪ್, ಫೇಸ್‌ಬುಕ್‌ನಲ್ಲಿ ಬಂದಿರುವುದನ್ನು ನಂಬುವುದು ಬೇಡ. ಗ್ರಂಥಾಲಯಕ್ಕೆ ಹೋಗಿ ಪುಸ್ತಕಗಳನ್ನು ಓದಿ ಸತ್ಯಾಂಶ ತಿಳಿಯಬೇಕು. ಹಾಗಂತ ಇವುಗಳನ್ನು ಬಳಸದೇ ಹಿಮಾಲಯಕ್ಕೆ ಹೋಗಿ ಸನ್ಯಾಸಿಯಾಗುವಂತೆ ಹೇಳುವುದಿಲ್ಲ. ಮೂಲ ಪುಸ್ತಕಗಳನ್ನು ಪರಾಮರ್ಶೆ ಮಾಡುವುದು ಅವಶ್ಯ ಎಂದು ಸಲಹೆ ನೀಡಿದರು.

ಪುಸ್ತಕ ಬರೆಯುವಷ್ಟು ಕಾಲ ಲೇಖಕ ನಿರುಪದ್ರವಿ. ಹಾಗಂತ ಪುಸ್ತಕ ಓದುವುದು, ಬರೆಯುವುದನ್ನು ನಿಲ್ಲಿಸುವಂತೆ ಹೇಳುತ್ತಿಲ್ಲ. ಆದರೆ, ಪುಸ್ತಕದಿಂದ ಆರ್ಥಿಕ ಲಾಭ ಕಷ್ಟ, ಚಿನ್ನ ಮಾಡಿಸಿಕೊಂಡು ಬ್ಯಾಂಕ್‌ನಲ್ಲಿ ಇಡಬಹುದಾದರೆ, ಪುಸ್ತಕ ಖರೀದಿಸಿ ಮನೆಯಲ್ಲಿ ಇಟ್ಟರೆ ಏನು ತಪ್ಪು? ಎಂದರು.

ಚಿಂತಕ ಡಾ.ಎಸ್.ನರೇಂದ್ರ ಕುಮಾರ್ ಅವರು ಶಾಂತಿಯಾತ್ರೆ ಕೃತಿ ಕುರಿತು ಮಾತನಾಡಿ, ಶಾಂತಿಯಾತ್ರೆಯೂ ಗಾಂಧಿ- ಅಂಬೇಡ್ಕರ್ ಅನುಸಂಧಾನಗೊಳಿಸುವ ಕೃತಿಯಾಗಿದೆ. ಬದುಕಿನ ಘಟನೆಗಳನ್ನು ಸಾಕ್ಷಿಯಾಗಿಟ್ಟುಕೊಂಡು ಗಾಂಧೀಜಿಯನ್ನು ಹೇಗ ನೋಡಬೇಕೆಂದು ತಿಳಿಸಿದ್ದು, ಗಾಂಧೀಜಿ ಒಳಗಡೆ ಅಂಬೇಡ್ಕರ್ ಪ್ರಜ್ವಲಿಸಿದ್ದಾರೆ ಎಂದರು.

ಕೊಂಡವಾಡೆ ಕಾದಂಬರಿ ಕುರಿತು ಚಿಂತಕ ಮಹೇಶ್ ಹರವೆ ಮಾತನಾಡಿ, ಈ ಕಾದಂಬರಿಯಲ್ಲಿ ಸಮುದಾಯದೊಳಗಿನ ಸಂಘರ್ಷ, ಪ್ರಾಚೀನ ಪಂಥ ಪರಿಚಯಿಸುವ, ಗುರುಬೋಧೆ ಮಠಗಳ ಬಗ್ಗೆ ಒಳನೋಟವಿದೆ. 5 ತಲೆಮಾರಿನ ಕಥನವನ್ನು ಹಿಡಿದಿಟ್ಟಿದ್ದಾರೆ. ಆತ್ಮಕಥನವನ್ನು ಕಾದಂಬರಿಯಾಗಿಸಿದ್ದಾರೆ. ಹಾಗೇ ಗಾದೆ ಮಾತು, ಆಹಾರ ಸಂಸ್ಕೃತಿ, ಚಾಮರಾಜನಗರದ ಎಲ್ಲಾ ಚಿಂತಕರನ್ನು ಒಟ್ಟುಗೂಡಿಸುವ ಪ್ರಯತ್ನ ಇದೆ ಎಂದರು. ಕಾರ್ಯಕ್ರಮದಲ್ಲಿ ಹಿರಿಯ ಲೇಖಕಿ ಪ್ರೊ.ಚ.ಸರ್ವಮಂಗಳ, ಕೃತಿಗಳ ಕರ್ತೃ ಕೃಷ್ಣ ಜನಮನ ಉಪಸ್ಥಿತರಿದ್ದರು.

ಮೈಸೂರು ಮಿತ್ರ

5 ವರ್ಷದಲ್ಲಿ ನರಸೀಪುರ ಕ್ಷೇತ್ರ ಸಮಗ್ರ ಅಭಿವೃದ್ಧಿ

ಐತಿಹಾಸಿಕ ಹಿನ್ನೆಲೆ ಹೊಂದಿರುವ ತಲಕಾಡಿನಲ್ಲಿ ಕೆಡಿಪಿ ಸಭೆಯಲ್ಲಿ ಯೋಜನೆ: ಡಾ.ಹೆಚ್.ಸಿ.ಮಹದೇವಪ್ಪ



ತಿ.ನರಸೀಪುರ ತಾಲೂಕಿನ ತಲಕಾಡು ಗ್ರಾಮದಲ್ಲಿ ಗ್ರಾಮ ಪಂಚಾಯಿತಿಯ ರಾಜೀವ್ ಗಾಂಧಿ ಸೇವಾ ಕೇಂದ್ರದ ನೂತನ ಕಟ್ಟಡವನ್ನು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ತಿ.ನರಸೀಪುರ, ಜು.9– ಅಧಿವೇಶನ ಮುಗಿದ ಮೇಲೆ ಮುಂದಿನ 5 ವರ್ಷದಲ್ಲಿ ನರಸೀಪುರ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಐತಿಹಾಸಿಕ ಹಿನ್ನೆಲೆ ಹೊಂದಿರುವ ತಲಕಾಡು ಗ್ರಾಮದಲ್ಲಿಯೇ ಮುನ್ನುಡಿ ಬರೆಯಲು ಮೊದಲ ಜಿಲ್ಲಾ ಮಟ್ಟದ ಪ್ರಗತಿ ಪರಶೀಲನಾ(ಕೆಡಿಪಿ) ಸಭೆಯನ್ನು ನಡೆಸಲಾಗುವುದು ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಘೋಷಿಸಿದ್ದಾರೆ.

ತಾಲೂಕಿನ ತಲಕಾಡು ಗ್ರಾಮದಲ್ಲಿ ಭಾನುವಾರ ಗ್ರಾಮ ಪಂಚಾಯಿತಿಯ ರಾಜೀವ್ ಗಾಂಧಿ ಸೇವಾ ಕೇಂದ್ರದ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಧಾನ ಸಭೆ ಅಧಿವೇಶನದ ಬಳಿಕ ಸಿಎಂ ಸಿದ್ದರಾಮಯ್ಯ ಅವರು ಜಿಲ್ಲಾ ಕೇಂದ್ರದಲ್ಲಿ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿದ ಬಳಿಕ ತಲಕಾಡಿನಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಯೋಜನೆ ಸಿದ್ಧಪಡಿಸಿಕೊಳ್ಳಲು ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ದೇಶದಲ್ಲಿಯೇ ಆಕರ್ಷಣೀಯ ಕೇಂದ್ರವಾಗಿರುವ ತಲಕಾಡು ಪ್ರಮುಖ ಪ್ರವಾಸಿ ಕೇಂದ್ರವಾಗಿದ್ದು, 9 ಶತಮಾನಗಳ ಕಾಲ ಗಂಗರಸರು, ಚೋಳರು ಹಾಗೂ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿದ್ದ ದೊಡ್ಡ ಚರಿತ್ರೆಯನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಮೂಲ ಸೌಕರ್ಯವನ್ನು ಕಲ್ಪಿಸಿಕೊಟ್ಟು ಪ್ರಮುಖ ಶೈಕ್ಷಣಿಕ ಕೇಂದ್ರವನ್ನಾಗಿಯೂ ಅಭಿವೃದ್ಧಿ ಪಡಿಸಿದ್ದೇನೆ. ನೀರಾವರಿ ಸೌಲಭ್ಯವನ್ನು ವಿಸ್ತರಿಸಿದ್ದೇನೆ. ತಲಕಾಡುನಿಂದ ಕೈ ಬಿಟ್ಟು ಹೋಗಿರುವ ಪಾಲಿಟೆಕ್ನಿಕ್ ಡಿಪ್ಲೋಮಾ ಕಾಲೇಜ್ ಅನ್ನು ಕೂಡ ವಾಪಸ್ ಮಂಜೂರು ಮಾಡಲು ಶಿಕ್ಷಣ ಇಲಾಖೆಗೆ ಸೂಚನೆ ನೀಡಿದ್ದೇನೆ ಎಂದರು.

ನರೇಗಾ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ಸುಮಾರು 60 ಲಕ್ಷ ರೂ.ಗಳ ವೆಚ್ಚದ ಸುಸಜ್ಜಿತ ಆಧುನಿಕ ಶೈಲಿಯಲ್ಲಿ ರಾಜೀವ್ ಗಾಂಧಿ ಸೇವಾ ಕೇಂದ್ರ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ. ಸಂಸದ ಶ್ರೀನಿವಾಸ್ ಪ್ರಸಾದ್ ಹಾಗೂ ಎಂ.ಅಶ್ವಿನ್ ಕುಮಾರ್ ಅವರು ತಲಾ 5 ಲಕ್ಷ ರೂ. ಅನುದಾನ ನೀಡಿದ್ದು, ವಾರ್ಡ್‌ಗಳ ಅಭಿವೃದ್ಧಿಗೆ ಬಳಸಿಕೊಳ್ಳಬೇಕಿದ್ದ 15ನೇ ಹಣಕಾಸನ್ನು ಸದಸ್ಯರು ನೂತನ ಕಟ್ಟಡಕ್ಕೆ ವಿನಿಯೋಗಿಸಿರುವುದು ಹೆಮ್ಮೆಯ ವಿಚಾರವಾಗಿದೆ ಎಂದು ಸಚಿವರು ಪ್ರಶಂಸೆ ವ್ಯಕ್ತಪಡಿಸಿದರು.

ಬ್ರಿಟಿಷರ ಕಾಲದಲ್ಲಿ ತಾಲೂಕಾಗಿದ್ದ ತಲಕಾಡು ಗ್ರಾಮದಲ್ಲಿ ಒಳಚರಂಡಿ ನಿರ್ಮಾಣ ಸೇರಿದಂತೆ ಪಟ್ಟಣ ಪಂಚಾಯಿತಿ ಅಥವಾ ಪುರಸಭೆ ಆಗಿ ಮೇಲ್ದರ್ಜೆಗೇರಿಸಲು ಗಮನ ಹರಿಸುತ್ತೇನೆ. 40 ಕೋಟಿ ಅಂದಾಜು ವೆಚ್ಚದ ಮುಡುಕುತೊರೆ ಶ್ರೀ ಭ್ರಮರಾಂಭ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯ ಜೀರ್ಣೋದ್ಧಾರದ ಮೊದಲ ಹಂತದ ಕಾಮಗಾರಿಗೆ 10 ಕೋಟಿ ಹಣವನ್ನು ಮಂಜೂರು ಮಾಡಬೇಕು. ಹಳೇ ತಲಕಾಡು ರಸ್ತೆ ಅಗಲೀಕರಕ್ಕೆ ಮನೆ ಕಳೆದುಕೊಂಡವರಲ್ಲಿ ಪರ್ಯಾಯ ಪರಿಹಾರ ಪಡೆಯದಿರುವುದು 25 ಕುಟುಂಬಗಳಿಗೆ ನಿವೇಶನ ಮತ್ತು ಪರಿಹಾರವನ್ನು ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪ ಗೌಡ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ, ನಿವೃತ್ತ ಮುಖ್ಯ ಇಂಜಿನಿಯರ್ ಎನ್.ರವಿಕುಮಾರ್, ತಾಪಂ ಇಒ ಕೃಷ್ಣ ಗ್ರಾಪಂ ಸದಸ್ಯರಾದ ಶಾಂತಕುಮಾರಿ, ಶೋಭಾ, ಶಾಂತರಾಜು, ಸುಂದರ ನಾಯಕ, ನಾಗೇಂದ್ರ ಕುಮಾರ್, ಸುನಿತಾ, ಟಿ.ಆರ್. ಜಗದೀಶ್, ಮಹಾದೇವಿ, ಎಂ. ಮಮತಾ, ನಾಗರತ್ನಮ್ಮ, ಉಮಾ, ಅನಿತಾ, ಚಿಕ್ಕ ಮಾದನಾಯಕ, ಬಿ.ಎಚ್. ಕವಿತಾ, ನಾಗರಾಜಮೂರ್ತಿ, ಕೆಎಸ್. ಗೌರಮ್ಮ, ಎಲ್. ನಾಗೇಶ, ಪಿಡಿಒ ಶ್ರೀನಿವಾಸಮೂರ್ತಿ, ಮಾಜಿ ಅಧ್ಯಕ್ಷ ಮಲ್ಲಣ್ಣ, ವಿಜಯಕುಮಾರ್, ಮಾಜಿ ಉಪಾಧ್ಯಕ್ಷ ಎಸ್.ರಾಜೇಶ್‌ಮೂರ್ತಿ, ಉದ್ಯಮಿಗಳಾದ ಅಶೋಕ್ ಪಟೇಲ್, ದೊಡ್ಡನಗುಂಡಿ ನಂಜುಂಡಸ್ವಾಮಿ, ಮಾಜಿ ಸದಸ್ಯರಾದ ನರಸಿಂಹ ಮಾದನಾಯಕ, ಪೀಕಾರ್ಡ್ ಬ್ಯಾಂಕ್ ಉಪಾಧ್ಯಕ್ಷ ಬಿ.ಎಂ. ಲಿಂಗರಾಜು, ಶಿಕ್ಷಣಾಧಿಕಾರಿ ಜೆ.ಶೋಭಾ, ಜಿಪಂ ತಾಂತ್ರಿಕ ಉಪ ವಿಭಾಗದ ಎಇಇ ದೇವರಾಜು, ಸಮಾಜ ಕಲ್ಯಾಣ ಅಧಿಕಾರಿ ರಾಮೇಗೌಡ, ಭಗೀರಥ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಕಾವೇರಿಪುರ ಮಹಾದೇವ ಶೆಟ್ಟಿ, ಸದಸ್ಯ ವಿಜಾಪುರ ಶಿವಶಂಕರ್, ಮಾಜಿ ಅಧ್ಯಕ್ಷ ಕಾವೇರಿಪುರ ಶಾಂತರಾಜು, ಮುಖಂಡರಾದ ಕಾಳಿ ಹುಂಡಿ ಮಹೇಂದ್ರ, ಶಂಭುಲಿಂಗ, ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಮುಖಂಡರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.10.15ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಮ.1.05ಕ್ಕೆ.
ಸ್ಕ್ರೀನ್ 2	ಸ್ಪೈಡರ್ ಮ್ಯಾನ್ ಅಕ್ರಾಸ್ ದಿ ಸ್ಪೈಡರ್ ವರ್ಸ್ (ಇಂ): ಬೆ.10.25ಕ್ಕೆ, ಸಲ್ಮಾನ್ (3ಡಿ)(ತ): ಮ.1.15ಕ್ಕೆ, ಸ್ಪೈ (ತೆ): ಸಂ.4.30ಕ್ಕೆ, ರಾ.7.15ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಮಾಮನ್ನನ್ (ತ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಸರ್ಕಸ್ (ತು): ರಾ.7ಕ್ಕೆ.
ಸ್ಕ್ರೀನ್ 4	ಬೆಂಗಳೂರು ಬಾಯ್ಸ್ (ಕ): ಬೆ.10.15ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.1.05ಕ್ಕೆ, ಸಂ.4.05ಕ್ಕೆ, ರಾ.7.05ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	**(ದೂ: 2521923)**
ಬಂಪತ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬೆಂಗಳೂರು ಬಾಯ್ಸ್ (ಕ)	2 ಪ್ರದರ್ಶನಗಳು
ರಾಯರು ಬಂದರು ಮಾವನ ಮನೆಗೆ (ಕ)	2 ಪ್ರದರ್ಶನ
ಉಮಾ ಚಿತ್ರಮಂದಿರ	**(ದೂ: 2520009)**
ಡೇ ಅಂಡ್ ಸಮ್‌ಬನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
1920 ಹಾರರ್ಸ್ ಆಫ್ ದಿ ಹಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಹತ್ಯಾ (2023 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾಮನ್ನಾನ್ (ತ)	4 ಪ್ರದರ್ಶನಗಳು
ರಾಜ್‌ಕಮಲ್	
ರುದ್ರಾಂಗಿ (ತೆ)	4 ಪ್ರದರ್ಶನಗಳು
ಸಂಗಂ	
ಹತ್ಯಾ (2023 (ಕ)	4 ಪ್ರದರ್ಶನಗಳು
ಲಿಡೋ	
90 ಬಿಡಿ ಮನೀಗ್ ನಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟಕ್ಕರ್ (ತ)	4 ಪ್ರದರ್ಶನಗಳು
ಪ್ರಭಾ	
ರಾಘವೇಂದ್ರ ಸ್ಟೋರ್ಸ್ (ಕ)	4 ಪ್ರದರ್ಶನಗಳು

ಇಂದು ಚಾಮುಂಡೇಶ್ವರಿ ಅಮ್ಮನವರ ಜನ್ಮೋತ್ಸವ

ಹೆಚ್.ಡಿ.ಕೋಟೆ: ಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಸೋಮವಾರ (ಜು.10) ಶ್ರೀ ಚಾಮುಂಡೇಶ್ವರಿ ಅಮ್ಮನವರ ಜನ್ಮೋತ್ಸವದ ಪ್ರಯುಕ್ತ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ.

ಬೆಳಗ್ಗೆ 9 ಗಂಟೆಗೆ ಜ್ಯೋತಿ ಪೂಜೆ, ಗಂಗೆ ಪೂಜೆ, ಗಣಪತಿ ಪೂಜೆ, ಪುಣ್ಯಾಹ, ನವಗ್ರಹ ಪೂಜೆ, ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜೆ ಹಾಗೂ ಚಂಡಿಕಾ ಹೋಮ, ಪೂರ್ಣಾಹುತಿ, ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ರುದ್ರಾಭಿಷೇಕ ವಿಶೇಷ, ಅಲಂಕಾರ ಸಹಸ್ರ ನಾಮ ಕುಂಕುಮಾರ್ಚನೆ, ಮಹಾ ಮಂಗಳಾರತಿ ಮಾಡಲಾಗುವುದು. ಮಧ್ಯಾಹ್ನ 12 ಗಂಟೆಗೆ ಪ್ರಸಾದ ವಿನಿಯೋಗ ಇರುತ್ತದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಮ್ಮನವರ ಕೃಪೆಗೆ ಪಾತ್ರರಾಗಲು ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ಪ್ರಧಾನ ಅರ್ಚಕ ಸತೀಶ್‌ಶಾಸ್ತ್ರಿ ತಿಳಿಸಿದ್ದಾರೆ.

ಸಂಸ್ಕಾರವನ್ನು ಕಲಿಸುವ ಭಾಷೆ ಸಂಸ್ಕೃತ: ಸುತ್ತೂರು ಶ್ರೀ



ನಂಜನಗೂಡು, ಜು.9– ಸಂಸ್ಕೃತ ಭಾಷೆಯು ಕೇವಲ ಭಾಷೆ ಮಾತ್ರವಲ್ಲ ಜನರಿಗೆ ಸಂಸ್ಕಾರವನ್ನು ಕಲಿಸುವ ಭಾಷೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದ್ದಾರೆ.

ಶ್ರೀ ಕ್ಷೇತ್ರ ಸುತ್ತೂರಿನ ಶ್ರೀ ಸಿದ್ದನಂಜ ದೇಶಿ ಕೇಂದ್ರ ಮಂಗಳ ಮಂಟಪದಲ್ಲಿ ನಡೆದ ರಾಜ್ಯಮಟ್ಟದ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಮ್ಮೇಳನ ಮತ್ತು ಮಹಾಧಿವೇಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಕೃತ ಭಾಷೆಯು ವಿವಿಧ ಸಂಸ್ಕೃತಿಯನ್ನು ಹೊಂದಿರುವ ಭಾರತದಂತಹ ದೇಶದಲ್ಲಿ ಎಲ್ಲಾ ಜನರ ಅನ್ಯೋನ್ಯತೆಯನ್ನು ಸಾರುವ ಒಂದು ಭಾಷೆಯಾಗಿದೆ ಎಂದರು.

ಸಂಸ್ಕೃತ ಭಾಷಾ ಶಿಕ್ಷಕರು ವೃತ್ತಿಯಲ್ಲಿ ಹೆಚ್ಚು ಸಾಮರ್ಥ್ಯವನ್ನು ಬೆಳೆಸಿಕೊಂಡು ವಿದ್ಯಾರ್ಥಿಗಳಿಗೆ ಆಸಕ್ತಿದಾಯಕವಾದ ಕಲಿಕಾ ವಾತಾವರಣವನ್ನು ನಿರ್ಮಿಸಿ ಮಕ್ಕಳಿಗೆ ಸಂಸ್ಕೃತ ಭಾಷೆ ಕಲಿಸಲು ಮುಂದಾದಲ್ಲಿ ಸಂಸ್ಕೃತ ಭಾಷೆ ಪ್ರಪಂಚದಲ್ಲಿಯೇ ಅತ್ಯಂತ ಉನ್ನತ ಭಾಷೆಯಾಗಿ ಹೊರ ಹೊಮ್ಮಲಿದೆ ಎಂದರು.

ರಾಜ್ಯ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಅಹಲ್ಯ ಮಾತನಾಡಿ, ಸಂಸ್ಕೃತ ಭಾಷೆ ಭಾರತದಲ್ಲಿ ಇನ್ನೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ ಎಂದರೆ ಅದಕ್ಕೆ ಕಾರಣ ಸುತ್ತೂರು ಶ್ರೀಮಠದಂತಹ ಪ್ರೋತ್ಸಾಹ ಕೃಪಾಶೀರ್ವಾದವೇ ಕಾರಣ. ಸಂಸ್ಕೃತ ಭಾಷಾ ಶಿಕ್ಷಕರು ವಿದ್ಯಾರ್ಥಿಗಳ ಅಂತರಾಳವನ್ನು ತಿಳಿದು ಅವರಲ್ಲಿ ಆಸಕ್ತಿ ಬೆಳೆಸಿ ಬೋಧಿಸಿದಾಗ ಮಾತ್ರ ಭಾಷೆ ಬೆಳವಣಿಗೆ ಆಗಲು ಸಾಧ್ಯ ಜೊತೆಗೆ ಸಂಸ್ಕೃತ ಪಾಠ ಶಾಲೆಗಳು ಸಮುದಾಯದಲ್ಲಿ ಪಥಸಂಚಲನ ಜಾಗೃತಿ ಜಾಥಗಳನ್ನು ಹಮ್ಮಿಕೊಳ್ಳುವ ಮೂಲಕ ಜನರಿಗೆ ಸಂಸ್ಕೃತ ಭಾಷೆ ಇದೆ ಎಂಬುದರ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯ ಸಂಸ್ಕೃತ ಶಿಕ್ಷಕರ ಸಂಘದ ಅಧ್ಯಕ್ಷ ಗಂಗಾಧರಯ್ಯ ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಇದೇ ಸಂದರ್ಭದಲ್ಲಿ ಚಂದ್ರಶೇಖರಯ್ಯ, ಪ್ರೊ.ಪಾಲಯ್ಯ, ಕುಮಾರ್, ನಂಜುಂಡಯ್ಯ, ಜೆ.ಎಸ್.ಎಸ್ ಸಂಸ್ಥೆಯ ಸಂಯೋಜಕ ಡಾ.ತ್ರಿಪುರಾಂತಕ, ಪರಶಿವಮೂರ್ತಿ, ಚಂದ್ರಮೌಳೇಶ್ವರ, ಪ್ರಸಾದ್ ಹಾಗೂ ಇತರರು ಇದ್ದರು.

ಸೌಲಭ್ಯಗಳಿಂದ ವಂಚಿತರಾಗುತ್ತಿರುವ ಆದಿಜಾಂಭವ ಸಮಾಜ: ಶಿವಣ್ಣ



ಹುಣಸೂರು. ಜು.9– ರಾಜ್ಯದಲ್ಲಿ ಪರಿಶಿಷ್ಟ ಜಾತಿಯ (ಆದಿ ಜಾಂಭವ) ಜನಾಂಗವು ಜನಸಂಖ್ಯೆಯಲ್ಲಿ ಬಹುಸಂಖ್ಯಾತರಾಗಿದ್ದರೂ ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂದು ತಾಲೂಕು ಅದಿಜಾಂಬವ ಸಂಘದ ಅಧ್ಯಕ್ಷ ಶಿವಣ್ಣ ತಿಳಿಸಿದರು.

ತಾಲೂಕು ಕಛೇರಿಯಲ್ಲಿ ಬಾಬು ಜಗಜೀವನ್ ರಾಂ ಅವರ 37ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಯಾವುದೇ ಸರ್ಕಾರ ಬಂದರೂ ಈ ಸಮುದಾಯ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕವಾಗಿಯೂ ಎಲ್ಲರಿಗಿಂತ ಅತ್ಯಂತ ಹಿಂದುಳಿದಿದೆ. ಇದಕ್ಕೆ ಕಾರಣ ನಮ್ಮನ್ನು ಆಳುವ ಸರ್ಕಾರವೋ ಅಥವಾ ಈ ಅಸಂಘಟಿತ ಸಮಾಜವೋ ಗೊತ್ತಾಗುತ್ತಿಲ್ಲ ಎಂದರು.

ಸಿದ್ದರಾಮಯ್ಯನವರ ಸರ್ಕಾರ ಬಂದು 45 ದಿನಗಳು ಕಳೆದಿದೆ. ನಮ್ಮ ಜನಾಂಗದ ಮೂಲ ಸಮಸ್ಯೆ, ಒಳಮೀಸಲಾತಿ ಇದನ್ನು ಸರಿಪಡಿಸಬೇಕೆಂದು ಆಗ್ರಹಪಡಿಸುತ್ತಿದ್ದೇವೆ ಸದಾಶಿವ ಆಯೋಗದ ವರದಿಯನ್ನು ಬಿ.ಜೆ.ಪಿ. ಸರ್ಕಾರ, ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲೇ ಇಲ್ಲ. ಸುಳ್ಳು ಭರವಸೆ ನೀಡಿ ಆದಿಜಾಂಭವರಿಗೆ ಮೋಸ ಮಾಡಿತು. ಅಂದಿನ ಸರ್ಕಾರದಲ್ಲಿ ಕಾನೂನು ಮಂತ್ರಿಯಾಗಿದ್ದ ಮಾಧುಸ್ವಾಮಿ ಆದಿಜಾಂಭವ ಜನಾಂಗಕ್ಕೆ ಅಪಮಾನ ಮಾಡಿ ಹೋಗಿದ್ದಾರೆ. ಇವರ ನಡವಳಿಕೆಯನ್ನು ಆದಿಜಾಂಬವ ಸಂಘವು ತೀವ್ರವಾಗಿ ಖಂಡಿಸುತ್ತದೆ ಎಂದರು.

ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ತಡಮಾಡದೆ ಜನಾಂಗದ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಸಂಘದ ಅಧ್ಯಕ್ಷ ಬಿ. ಶಿವಣ್ಣ, ಪದಾಧಿಕಾರಿ ಡಿ. ಕುಮಾರ್ (ಪ್ರಧಾನ ಕಾರ್ಯದರ್ಶಿ), ಗೌರವ ಅಧ್ಯಕ್ಷ ರಾಚಯ್ಯ, ಮಾಜಿ ಅಧ್ಯಕ್ಷ ಆಂಜನೇಯ, ಬಲ್ಲೇನಹಳ್ಳಿ ಕೆಂಪರಾಜು, ಸುರೇಶ್.ಎಸ್.ಎಲ್, ಕಾರ್ಯದರ್ಶಿಗಳಾದ ನಾಗನಹಳ್ಳಿ ಸುರೇಶ್, ತಮ್ಮಡಹಳ್ಳಿ ಮಹದೇವ್, ಶಿವರಾಜು ಹೆಮ್ಮಿಗೆ ಇನ್ನೂ ಮುಂತಾದವರು ಆಗ್ರಹಿಸಿದರು.

ಹಕ್ಕೊತ್ತಾಯಗಳು: ಸದಾಶಿವ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡಬೇಕು. ಎಲ್ಲಾ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಜಗಜ್ಜೀವನ ರಾಂ ಭವನ ನಿರ್ಮಾಣ ಮಾಡಬೇಕು. ಮೈಸೂರು ನಗರದಲ್ಲಿ ಬಾಬು ಜಗಜ್ಜೀವನ ರಾಂ ಭವನಕ್ಕೆ ಕೂಡಲೇ ನಿವೇಶನವನ್ನು ಕಾಯ್ದಿರಿಸಬೇಕು. ಹುಣಸೂರು ನಗರದಲ್ಲಿ ಅರ್ಧಕ್ಕೆ ನಿಂತಿರುವ ಜಗಜ್ಜೀವನ ರಾಂ ಭವನಕ್ಕೆ ಕೂಡಲೇ ಅನುದಾನ ನೀಡಿ ಕಾಮಗಾರಿ ಪೂರ್ಣಗೊಳಿಸಬೇಕು.

ಕಾಡು ಹಂದಿಗಳ ದಾಳಿ: ಬೈಕ್‌ನಿಂದ ಬಿದ್ದು ಪತ್ರಕರ್ತನಿಗೆ ಗಾಯ

ಸರಗೂರು, ಜು.9– ತಾಲೂಕಿನ ಹಾದನೂರು ಗ್ರಾಮ ಪಂಚಾಯಿತಿ ಬಡಗಲಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಬಳಿ ಕಾಡು ಹಂದಿಗಳ ಗುಂಪೊಂದು ದಾಳಿ ನಡೆಸಿದ ಪರಿಣಾಮ ಪತ್ರಕರ್ತರೊಬ್ಬರು ಗಾಯಗೊಂಡಿರುವ ಘಟನೆ ವರದಿಯಾಗಿದೆ.

ಹಾದನೂರು ಗ್ರಾಮದ ಪತ್ರಕರ್ತ ಚಂದ್ರ (36) ಗಾಯಗೊಂಡವರು. ಚಂದ್ರ ಅವರು ಬೆಳಿಗ್ಗೆ 5 ಗಂಟೆ ಸಮಯದಲ್ಲಿ ಹಾದನೂರು ಗ್ರಾಮದಿಂದ ಜಾವ ಬೈಕ್‌ನಲ್ಲಿ ಸರಗೂರು ತಾಲೂಕಿಗೆ ಹೋಗುವ ಸಂದರ್ಭದಲ್ಲಿ ಸರ್ಕಾರಿ ಪ್ರೌಢಶಾಲೆಯ ಬಳಿ ಕಾಡುಹಂದಿಗಳು ದಾಳಿ ನಡೆಸಿವೆ. ಚಂದ್ರ ಅವರು ನಂಜನಗೂಡಿನ ಹೆಡಿಯಾಲ ಗ್ರಾಮದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಮನೆಗೆ ತೆರಳಿದ್ದಾರೆ.

ಅರಣ್ಯ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ, ಕಾಡು ಪ್ರಾಣಿಗಳ ಹಾವಳಿಯನ್ನು ತಡೆಯುವ ಮೂಲಕ ಗ್ರಾಮೀಣ ಭಾಗದ ಮತ್ತು ಕಾಡಂಚಿನ ಗ್ರಾಮಗಳ ರೈತಾಪಿ ವರ್ಗ ನೆಮ್ಮದಿಯಿಂದ ಜೀವನ ನಡೆಸುವಂತೆ ಕ್ರಮ ಕೈಗೊಳ್ಳಬೇಕು.

ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ಹೆಚ್.ಡಿ.ಕೋಟೆ, ಜು.9– ತಾಲೂಕಿನ ಪಟ್ಟಣದಲ್ಲಿರುವ ಸರ್ಕಾರಿ ಬಾಲಕಿಯರ ಪ್ರೌಢಶಾಲಾ ಆವರಣದಲ್ಲಿ ವಿವಿಧ ಬಗೆಯ ಗಿಡಗಳನ್ನು ಮುಖ್ಯಶಿಕ್ಷಕ ಶಾಲಾ ಮಕ್ಕಳೊಂದಿಗೆ ಸೇರಿ ಸಸಿಗಳನ್ನು ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶಾಲೆಯ ಆವರಣದಲ್ಲಿ ಮಕ್ಕಳಿಗೆ ಉತ್ತಮ ಪರಿಸರ, ಗಾಳಿ ಸಿಗುವ ನಿಟ್ಟಿನಲ್ಲಿ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ತಾಲೂಕಿನಾದ್ಯಂತ 50 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಡುವ ಮೂಲಕ ಪರಿಸರವನ್ನು ಕಾಪಾಡುವ ಕೆಲಸಗಳನ್ನು ಮಾಡುವೆ. ಶಾಲಾ ಮಕ್ಕಳು ಪರಿಸರವನ್ನು ಬೆಳೆಸುವ ಕೆಲಸದಲ್ಲಿ ಮುಂದಾಗಬೇಕು ಎಂದರು.

ನೆಲ್ಲಿ, ತೆಂಗು, ಸಂಪಿಗೆ, ನೇರಳೆ, ಗಿಡಗಳನ್ನು ಶಾಲಾ ಆವರಣದಲ್ಲಿ ನೆಡಲಾಯಿತು. ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮುಖ್ಯಶಿಕ್ಷಕ ಸುರೇಶ್ ಅವರ ಪತ್ನಿ ನೀಲಾವತಿ ಅವರು ಪ್ರೋತ್ಸಾಹ ಧನ ನೀಡುವುದರ ಮೂಲಕ ಗೌರವಿಸಿದರು. ಇದೇ ಸಂದರ್ಭದಲ್ಲಿ ಪುರಸಭಾ ಸದಸ್ಯರಾದ ಸುವಾಸಿನಿ ದಿನೇಶ್, ಮಾಜಿ ಸದಸ್ಯ ಸಿದ್ದರಾಜು, ಪ್ರಾಂಶುಪಾಲ ವೈ.ಸಿ. ಮಂಜುನಾಥ್, ಶಿಕ್ಷಕರು ಹಾಗೂ ಮಕ್ಕಳುಗಳು ಹಾಜರಿದ್ದರು.

ಇಮ್ಮಾವಿನಲ್ಲಿ ಫಿಲಂ ಸಿಟಿ: ಸಿಎಂಗೆ ಅಭಿನಂದನೆ

ತಿ.ನರಸೀಪುರ ಜು.9– ನಂಜನಗೂಡು ತಾಲೂಕು ಇಮ್ಮಾವು ಗ್ರಾಮದಲ್ಲಿ ಮೈಸೂರ್ ಫಿಲಂ ಸಿಟಿಯನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲು ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ಕೆಪಿಸಿಸಿ ಕಾರ್ಯದರ್ಶಿ ಮತ್ತು ನಿರ್ಮಾಪಕ ವಲಯದ ಕಾರ್ಯಕಾರಿ ಸಮಿತಿ ಸದಸ್ಯ ವರುಣ ಮಹೇಶ್ ಅಭಿನಂದನೆ ಸಲ್ಲಿಸಿದ್ದಾರೆ.

ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ಇಮ್ಮಾವು ಗ್ರಾಮದಲ್ಲಿ ಫಿಲಂ ಸಿಟಿಯನ್ನು ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಮಾಡಲು ಬಜೆಟ್ ಅಲ್ಲಿ ಘೋಷಿಸುತ್ತಿರುವುದು ಚಲನಚಿತ್ರ ನಿರ್ಮಾಪಕರು ನಿರ್ದೇಶಕರು ನಟ ನಟಿಯರು ಮತ್ತು ಎಲ್ಲಾ ಚಲನಚಿತ್ರದ ಒಕ್ಕೂಟದವರಿಗೆ ಸಂತಸ ತಂದಿದೆ ಎಂದಿದ್ದಾರೆ.

ಹಲ್ಲರೆ ಗ್ರಾಮದಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆ

ಗ್ರಾಮಸ್ಥರಲ್ಲಿ ಅತಂಕ, ಜಮೀನಿಗೆ ತೆರಳಲು ಹಿಂದೇಟು



ಮಲ್ಕುಂಡಿ: ಸಮೀಪದ ಹಲ್ಲರೆ ಗ್ರಾಮದ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ ಎಂಬುವವರ ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದೆ. ಜೊತೆಗೆ ಕಾಡು ಹಂದಿಯನ್ನು ಬೇಟೆಯಾಡಿ ಪರಾರಿಯಾಗಿದೆ. ಇದರಿಂದ ಗ್ರಾಮಸ್ಥರು ತಮ್ಮ ಜಮೀನಿಗೆ ಹೋಗಿ ಕೆಲಸ ಮಾಡಲು ಭಯ ಪಡುವಂತಾಗಿದೆ.

ತಕ್ಷಣ ಅರಣ್ಯ ಇಲಾಖೆಗೆ ವಿಷಯ ತಿಳಿಸಲಾಗಿ ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಸಿಬ್ಬಂದಿ ಪರಿಶೀಲಿಸಿ ಹುಲಿ ಹೆಜ್ಜೆ ಎಂದು ತಿಳಿದು ರೈತರಿಗೆ ಎಚ್ಚರಿಕೆಯಿಂದ ಓಡಾಡುವಂತೆ ತಿಳಿಸಿದ್ದಾರೆ. ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಮಳೆಯಾಗಿದೆ. ಆದ್ದರಿಂದ ರೈತರು ತಮ್ಮ ಜಮೀನಿನಲ್ಲಿ ಕೃಷಿ ಕೆಲಸಕ್ಕೆ ತೆರಳಬೇಕಿದೆ. ಹುಲಿಯಿಂದ ಗ್ರಾಮಸ್ಥರಲ್ಲಿ ಅತಂಕ ಉಂಟಾಗಿದೆ. ಅರಣ್ಯ ಅಧಿಕಾರಿಗಳು ತಕ್ಷಣ ಹುಲಿ ಸೆರೆ ಹಿಡಿದು ರೈತರು ತಮ್ಮ ಜಮೀನುಗಳಿಗೆ ತೆರಳಿ ಕೆಲಸ ಮಾಡಲು ಅನುಕೂಲ ಮಾಡಿಕೊಡಬೇಕಾಗಿದೆ ಎಂದು ತಿಳಿಸಿದರು.

ಇನ್ನರ್ ವೀಲ್ ಕ್ಲಬ್‌ಗೆ ಚೇತನ ರಾಮಚಂದ್ರ ಅಧ್ಯಕ್ಷೆ



ನಂಜನಗೂಡು, ಜು.9– ನಂಜನಗೂಡಿನ ಇನ್ನರ್ ವೀಲ್ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಚೇತನ ರಾಮಚಂದ್ರ, ಕಾರ್ಯದರ್ಶಿಯಾಗಿ ಕಲ್ಪನಾ ರೇವಣ್ಣ ಅಧಿಕಾರ ಸ್ವೀಕರಿಸಿದ್ದಾರೆ.

ನಗರದ ಶ್ರವಣ ಕಲ್ಯಾಣ ಮಂಟಪದಲ್ಲಿ ನಡೆದ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಇನ್ನರ್ ವೀಲ್ ಕ್ಲಬ್‌ನ ಮಾಜಿ ಜಿಲ್ಲಾ ಅಧ್ಯಕ್ಷೆ ಡಾ.ಸಾರಿಕಾ ಪ್ರಸಾದ್ ಅಧಿಕಾರ ಹಸ್ತಾಂತರ ಮಾಡಿದರು.

ಇನ್ನರ್ ವಿಲ್ ಕ್ಲಬ್‌ನ ನೂತನ ಅಧ್ಯಕ್ಷೆ ಚೇತನ ರಾಮಚಂದ್ರ ಮಾತನಾಡಿ, ಇನ್ನರ್ ವೀಲ್ ಸಂಸ್ಥೆಯ ಮೂಲಕ ನೊಂದವರಿಗೆ ನೆರಳಾಗಿ, ದೀಪವಾಗಿ ಅವರ ಬಾಳಿಗೆ ಬೆಳಕು ತರಬೇಕೆಂಬ ಆಶಯ ಹೊಂದಿದ್ದೇನೆ. ಈ ನಿಟ್ಟಿನಲ್ಲಿ ಅನಾಥಾಶ್ರಮ, ವೃದ್ಧಾಶ್ರಮಗಳಿಗೆ, ಅಲ್ಲದೆ ಕಡು ಬಡವರಿಗೆ ನೆರವಾಗುವಂತಹ ಕಾರ್ಯಕ್ರಮವನ್ನು ರೂಪಿಸುತ್ತೇನೆ, ಜೊತೆಗೆ ಸಮುದಾಯದ ಹಿತದೃಷ್ಟಿಯನ್ನು ಇಟ್ಟುಕೊಂಡು ಪರಿಸರ ಸಂರಕ್ಷಣೆ ನೀರಿನ ಸಂರಕ್ಷಣೆ ಆರೋಗ್ಯ ಜಾಗೃತಿಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ ಎಂದರು.

ಪದವಿ ಪ್ರದಾನ ಮಾಡಿದ ಡಾ.ಸಾರಿಕಾ ಪ್ರಸಾದ್ ಮಾತನಾಡಿ, ಇನ್ನರ್ ವೀಲ್ ಒಂದು ದೊಡ್ಡ ಇತಿಹಾಸವನ್ನು ಹೊಂದಿರುವ ಸೇವಾ ಸಂಸ್ಥೆಯಾಗಿದ್ದು, ಈ ಸಂಸ್ಥೆಯ ಮೂಲಕ ನಮ್ಮನ್ನು ನಾವು ಸೇವೆಯಲ್ಲಿ ತೊಡಗಿಸಿಕೊಳ್ಳಬೇಕಿದೆ. ನಂಜನಗೂಡಿನ ಇನ್ನರ್ ವೀಲ್ ಕ್ಲಬ್ ಕೂಡ ಕಳೆದ ಬಾರಿ ವಿದ್ಯಾರ್ಥಿಗಳಿಗೆ, ಅಂಗವಿಕಲರಿಗೆ ನೆರವಾಗುವಂತ ಸುಮಾರು 203 ಸೇವಾ ಕಾರ್ಯಗಳನ್ನು ಆಯೋಜಿಸಿ ಸಮುದಾಯದ ಸೇವೆಗೆ ತನ್ನನ್ನು ಅರ್ಪಿಸಿಕೊಳ್ಳುವ ಮೂಲಕ ಜನ ಮನ್ನಣೆ ಗಳಿಸಿದೆ. ಈ ಸೇವಾ ಕಾರ್ಯಗಳನ್ನು ಮುಂದುವರಿಸಿರುವ ಜೊತೆಗೆ ನೂತನ ತಂಡವು ಸಹ ಅಂಗವಿಕಲರಿಗೆ, ಬಡವರಿಗೆ ನೆರವಾಗುವ ಕಾರ್ಯಕ್ರಮಗಳನ್ನು ಆಯೋಜಿಸಿ ಜೊತೆಗೆ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರಗವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ವಿತರಿಸಲಾಯಿತು. ಅಂಗವಿಕಲರಿಗೆ ಅಗತ್ಯ ಸಲಕರಣೆಗಳನ್ನು ವಿತರಣೆ ಮಾಡಲಾಯಿತು.

ಸಮಾರಂಭದಲ್ಲಿ ಇನ್ನರ್ ವೀಲ್ ಕ್ಲಬ್‌ನ ನಿರ್ಗಮಿತ ಅಧ್ಯಕ್ಷೆ ಆಶಾ ನಾರಾಯಣ ರಾವ್, ವಿನುತಾ ಶಶಿಧರ, ರೂಪ, ಉಷಾ, ಶಶಿರೇಖಾ ಪ್ರಶಾಂತ್, ಸುಜಾತಾ ಶ್ರೀನಿಧಿ, ಅನುರಾಧ, ರೋಟರಿ ಸಂಸ್ಥೆಯ ಅಧ್ಯಕ್ಷ ರಮೇಶ್, ಮುಖಂಡರಾದ ಯು.ಎನ್. ಪದ್ಮನಾಭರಾವ್, ರಾಮಚಂದ್ರ ಇದ್ದರು.

ಮುಸುವಿನಕೊಪ್ಪಲು ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನ ನಿರ್ದೇಶಕರ ಆಯ್ಕೆ



ತಿ.ನರಸೀಪುರ, ಜು.9– ತಾಲೂಕಿನ ಮುಸುವಿನಕೊಪ್ಪಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ಮಾಜಿ ಅಧ್ಯಕ್ಷ ಎಂ.ಶಿವರಾಮ್ ಬಣದವರು ನೂತನವಾಗಿ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಾಲಗಾರರ ಕ್ಷೇತ್ರದಿಂದ (ಸಾಮಾನ್ಯ) ಎಂ.ಶಿವರಾಂ, ಚಂದ್ರಪ್ಪ, ಮಹದೇವಯ್ಯ, ಶಿವಣ್ಣ., ಪುಟ್ಟ ಮಾದಯ್ಯ, ಹಿಂದುಳಿದ ವರ್ಗ ಎಎಂ ಕೆಬ್ಬೆ ಹುಂಡಿ ಮಹೇಶ್, ಹಿಂದುಳಿದ ವರ್ಗ ಬಿ.ಎಂ. ಕೆಬ್ಬೆಹುಂಡಿ ಶಿವಕುಮಾರ್‌ಸ್ವಾಮಿ, ಪರಿಶಿಷ್ಟ ಜಾತಿ ವಿಭಾಗದಿಂದ ನಿಂಗರಾಜು, ಪರಿಶಿಷ್ಟ ಪಂಗಡ ವಿಭಾಗದಿಂದ ಚಿಕ್ಕಮಾದಯ್ಯ, ಮಹಿಳಾ ಕ್ಷೇತ್ರದಿಂದ ಕೆಬ್ಬೆಹುಂಡಿ ಶಾಂತಮ್ಮ, ಮುಸುವಿನಕೊಪ್ಪಲು ಕಮಲಮ್ಮ ಸಾಲಗಾರಲ್ಲದ ಕ್ಷೇತ್ರದಿಂದ ಎಸ್.ಮಹೇಶ್ ರವರು ನೂತನವಾಗಿ ನಿರ್ದೇಶಕರಾಗಿದ್ದು, ಸಹಕಾರ ಅಭಿವೃದ್ಧಿ ಅಧಿಕಾರಿ ರಾಜಣ್ಣ ಆಯ್ಕೆಯನ್ನು ಘೋಷಿಸಿದರು. ಮಾಜಿ ಅಧ್ಯಕ್ಷ ಎಂ.ಶಿವರಾಮ್ ಮಾತನಾಡಿ, ಕಳೆದ ಸಾಲಿನಲ್ಲಿ ರೈತರಿಗೆ ಸರ್ಕಾರದಿಂದ ಬರುವ ಸವಲತ್ತುಗಳನ್ನು ನೇರವಾಗಿ ತಲುಪಿಸಿದ್ದೇವೆ ಮತ್ತು ಸರ್ಕಾರದಿಂದ ಸಾಲ ಮನ್ನಾ ಆಗಿರುವ ರೈತರನ್ನು ಗುರುತಿಸಿ ಮನ್ನಾ ಮಾಡಿದ್ದೇವೆ. ಹಾಗೆ ಮಹಿಳಾ ಸ್ವಸಹಾಯ ಸಂಘಗಳ ಗುಂಪುಗಳಿಗೆ ಹೆಚ್ಚು ಸಹಕಾರ ನೀಡಿದ್ದೇವೆ. ಇನ್ನು ಮುಂದೆ ಹೆಚ್ಚಿನ ರೀತಿಯಲ್ಲಿ ಸಹಕಾರ ನೀಡುತ್ತೇವೆ ಎಂದು ಮತ್ತು ನೂತನ ನಿರ್ದೇಶಕನ ಆಯ್ಕೆ ಮಾಡಲು ಸಹಕರಿಸಿದ ರೈತ ಬಾಂಧವರಿಗೆ ಅಭಿನಂದಿಸಿದರು. ಸಹಾಯಕ ಚುನಾವಣೆ ಅಧಿಕಾರಿ, ಕಾರ್ಯದರ್ಶಿ ಎನ್.ರಾಜು, ಗುಮಾಸ್ತ ಮಣಿಕಂಠ ಹಾಜರಿದ್ದರು.

ನೃತ್ಯ ಕಲೆಗಳ ಉಳಿವಿಗೆ ನೃತ್ಯೋತ್ಸವದಂತಹ ಹಬ್‌ಗಳು ಅವಶ್ಯ

ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅಭಿಮತ





ವಿದುಷಿ ಗೀತಾ ಚಂದ್ರನ್

ಮೈಸೂರು, ಜು.9(ಎಂಕೆ)– ನೃತ್ಯ ಕಲಾ ಪ್ರಕಾರಗಳ ಉಳಿವು ಹಾಗೂ ಅವುಗಳ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸುವ ನಿಟ್ಟಿನಲ್ಲಿ ನೃತ್ಯೋತ್ಸವದಂತಹ ಹಬ್‌ಗಳು ನಿರಂತರವಾಗಿ ನಡೆಯಬೇಕು ಎಂದು ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ ಹೇಳಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಶಾಂಭವಿ ಸ್ಕೂಲ್ ಆಫ್ ಡ್ಯಾನ್ಸ್ ವತಿಯಿಂದ ಆಯೋಜಿಸಿರುವ 'ಮೂಲಂ-2023(ದಿ ರೂಟ್ಸ್)' ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ನೃತ್ಯೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನೃತ್ಯ ಅಥವಾ ನರ್ತನ ಎಂಬುದು ದೇವ ಸ್ಥಾನಗಳಿಗೆ ಹೆಚ್ಚು ಸೀಮಿತವಾಗಿತ್ತು ಎಂಬುದನ್ನು ತಿಳಿಸಬಹುದಾಗಿದೆ. ಇದಕ್ಕೆ ದೇವಸ್ಥಾನದಲ್ಲಿರುವ ನೃತ್ಯ ಭಂಗಿಗಳ ಶಿಲಾನ್ಯಾಸಗಳು ಸಾಕ್ಷಿಯಾಗಿವೆ. ನರ್ತನ ಕಲೆಯನ್ನು ಉಳಿಸುವ ಹಾಗೂ ಅದನ್ನು ಮುಂದಿನ ಪೀಳಿಗೆಗೆ ಕಲಿಸುವ ನಿಟ್ಟಿನಲ್ಲಿ ನೃತ್ಯೋತ್ಸವಗಳು ನಿರಂತರವಾಗಿರಬೇಕು. ಇದರಿಂದ ಹೊಸ ಬರಿಗೆ ಅವಕಾಶಗಳು ದೊರೆಯುತ್ತವೆ ಎಂದರು.

ಸಂಗೀತವೆಂಬುದು ಧ್ಯಾನಕ್ಕೆ ಸಂಬಂಧಿಸಿದ್ದಾಗಿದೆ. ನಾನು 'ಮಂದ್ರ' ಕಾದಂಬರಿ ಬರೆಯುವಾಗ ವಿದುಷಿ ತುಳಸಿ ರಾಮಚಂದ್ರ ಅವರನ್ನು ಭೇಟಿ ಮಾಡಿ ಭರತನಾಟ್ಯದ ಬಗ್ಗೆ ಕೇಳಿದ್ದೆ. ಕಾದಂಬರಿ ಬರೆಯಲು ಎಷ್ಟು ಮಾಹಿತಿ ಬೇಕಿತ್ತೋ ಅಷ್ಟೂ ಅಂಶವನ್ನು ಪಾಯಿಂಟ್ ಮಾಡಿಕೊಂಡಿದ್ದೇ. ಸುಮಾರು ಒಂದು ತಿಂಗಳ ಕಾಲ ನೃತ್ಯ ಬಗ್ಗೆಯೇ ಅಧ್ಯಯನ ನಡೆಸಿದ್ದೆ ಎಂದು ಸ್ಮರಿಸಿದರು.

ಮನಸೆಳೆದ ಭರತನಾಟ್ಯ...

ಖ್ಯಾತ ಭರತನಾಟ್ಯ ಹಿರಿಯ ಕಲಾವಿದೆಯರಾದ ಪದ್ಮಶ್ರೀ ಪುರಸ್ಕೃತರಾದ ಗೀತಾ ಚಂದ್ರನ್, ಕೇಂದ್ರ ಸಂಗೀತ ನೃತ್ಯ ಅಕಾಡೆಮಿ ಪುರಸ್ಕೃತರಾದ ವೈಜಯಂತಿ ಕಾಶಿ ಹಾಗೂ ಶಾಶ್ವತಿ ಸೇನ್ ಭರತನಾಟ್ಯಂ, ಕೂಚುಪುಡಿ ಹಾಗೂ ಕಥಕ್ ನೃತ್ಯ ಪ್ರಸ್ತುತಪಡಿಸಿದರು. ಸಂಗೀತ, ತಾಳ-ವಾದ್ಯಗಳ ಸಮ್ಮಿಲನಕ್ಕೆ ಹೆಜ್ಜೆಹಾಕಿ ಗಜ್ಜೆ ನಾದ ಪಸರಿಸಿದ ಹಿರಿಯ ಕಲಾವಿದರ ನೃತ್ಯ ನೆರೆದಿದ್ದ ಪ್ರೇಕ್ಷಕರ ಮನ ಸೆಳೆಯಿತು.

ಮೈಸೂರಿನಲ್ಲಿ ತಡ: ನೃತ್ಯ, ಸಂಗೀತ ಕಾರ್ಯಕ್ರಮಗಳಲ್ಲಿ ವೀಕ್ಷಣೆಗೆ ಬರುವ ಆಸಕ್ತು ತಡವಾಗಿ ಬರುತ್ತಾರೆ. ಅದರಲ್ಲೂ ಮೈಸೂರಿನಲ್ಲಿ ತಡವಾಗಿ ಭಾಗವಹಿಸುವುದು ಪರಿಪಾಠವಾಗಿದೆ. ನೃತ್ಯ, ಸಂಗೀತ ಕಾರ್ಯಕ್ರಮಗಳಿಗೆ ಸರಿಯಾದ ಸಮಯಕ್ಕೆ ಭಾಗವಹಿಸಿ ಪ್ರೋತ್ಸಾಹ ನೀಡಿದರಷ್ಟೇ ಸಂಗೀತ ಕಲಾ ಪ್ರಕಾರಗಳು ಹಾಗೂ ಕಲಾವಿದರಿಗೆ ಪ್ರೋತ್ಸಾಹ ದೊರೆಯುವುದು ಎಂದರು.

ಅವಿನಾಭಾವ ಸಂಬಂಧ: ನಂತರ 'ಗುರು-ಶಿಷ್ಯ ಪರಂಪರೆ' ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಪದ್ಮಶ್ರೀ ಪುರಸ್ಕೃತರಾದ ಗೀತಾ ಚಂದ್ರನ್, ಕೇಂದ್ರ ಸಂಗೀತ ನೃತ್ಯ ಅಕಾಡೆಮಿ ಪುರಸ್ಕೃತರಾದ ವೈಜಯಂತಿ ಕಾಶಿ ಹಾಗೂ ಶಾಶ್ವತಿ ಸೇನ್, ಗುರು-ಶಿಷ್ಯರ ನಡುವೆ ಅವಿನಾಭಾವ ಸಂಬಂಧವಿರುತ್ತದೆ. ಕಲಿಕೆಯಲ್ಲಿ ಪುನರಾವರ್ತನೆ ಇದ್ದರಷ್ಟೇ ಪರಿಪಕ್ವತೆ ಪಡೆಯಲು ಸಾಧ್ಯ. ಗುರುವಿನ ಮಾರ್ಗದರ್ಶನ, ತರಬೇತಿ, ಹಿರಿಯ ಅನುಕರಣೆ, ಏಕಾಗ್ರತೆ ಮತ್ತು ಸಂಸ್ಕಾರ ಭರನಾಟ್ಯ ಕಲಿಕೆಯಲ್ಲಿರಬೇಕಾದ ಪ್ರಮುಖ ಅಂಶಗಳಾಗಿವೆ ಎಂದು ತಿಳಿಸಿಕೊಟ್ಟರು. ವಿದುಷಿ ತುಳಸಿ ರಾಮಚಂದ್ರ ಉಪಸ್ಥಿತರಿದ್ದರು.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ವಾಹನ ಚಾಲಕರಿಗೆ ಟೀಂ ಮೈಸೂರಿನಿಂದ ಸಂಚಾರ ಜಾಗೃತಿ



ಮೈಸೂರು, ಜು.9(ಎಸ್‌ಬಿಡಿ)– ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಹೆಚ್ಚು ಅಪಘಾತ ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಟೀಂ ಮೈಸೂರು ತಂಡದ ವತಿಯಿಂದ ಭಾನುವಾರ ಸಂಚಾರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ ಕನ್ನಡ ಮತ್ತು ಇಂಗ್ಲಿಷ್ ಜಾಗೃತಿ ಫಲಕಗಳನ್ನು ಪ್ರದರ್ಶಿಸುವ ಮೂಲಕ ಎಕ್ಸ್‌ಪ್ರೆಸ್ ವೇನಲ್ಲಿ ಸಂಚರಿಸುತ್ತಿದ್ದ ವಾಹನಗಳ ಚಾಲಕರಿಗೆ ಅರಿವು ಮೂಡಿಸಲಾಯಿತು.

ಕಾರಿನಲ್ಲಿ ಸಂಚರಿಸುವವರು ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸಿ, ಎಕ್ಸ್‌ಪ್ರೆಸ್ ವೇನಲ್ಲಿರುವ ಲೇನ್‌ಗಳ ಶಿಸ್ತು ಪಾಲನೆ ಮಾಡಿ, ಮದ್ಯಪಾನ ಮಾಡಿ ವಾಹನ ಚಾಲಿಸಬೇಡಿ, ರಸ್ತೆ ಒದ್ದೆಯಾಗಿರುವಾಗ ತುಂಬಾ ಎಚ್ಚರಿಕೆಯಿಂದ ಚಾಲನೆ ಮಾಡಿ, ರಸ್ತೆಯಲ್ಲಿ ಅತೀ ವೇಗದ ಚಾಲನೆಯ ಪರೀಕ್ಷೆ ನಡೆಸಬೇಡಿ, ಇದು ರೇಸಿಂಗ್ ಟ್ರ್ಯಾಕ್ ಅಲ್ಲ ಎನ್ನುವುದನ್ನು ಮರೆಯಬೇಡಿ, ಅಜಾಗರೂಕತೆಯಿಂದ ಸಾವು-ನೋವಿಗೆ ಈಡಾಗಿ ನಿಮ್ಮ ಕುಟುಂಬವನ್ನು ಕಷ್ಟಕ್ಕೆ ದೂಡಬೇಡಿ. ಹೀಗೆ ಚಾಲಕರ ಮನಸ್ಸು ತಟ್ಟುವಂತಹ ಹತ್ತಾರು ಘೋಷಣಾ ಫಲಕಗಳನ್ನು ಪ್ರದರ್ಶಿಸಲಾಯಿತು.

ಈ ವೇಳೆ ತಂಡದ ಸಂಚಾಲಕ ಗೋಕುಲ್ ಗೋವರ್ಧನ್ ಮಾತನಾಡಿ, ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ನಿತ್ಯ ಅಪಘಾತಗಳು ಸಂಭವಿಸಿ, ಸಾವು-ನೋವಾಗುತ್ತಿದೆ. ಈಗಾಗಲೇ ತಜ್ಞರ ಸಮಿತಿ ಪರಿಶೀಲನೆ ನಡೆಸಿ, ಹೆದ್ದಾರಿ ಪ್ರಾಧಿಕಾರದವರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಿದೆ. ಜೊತೆಗೆ ಅತೀ ವೇಗದ ಹಾಗೂ ಸಂಚಾರ ನಿಯಮ ಪಾಲಿಸದಿರುವುದು ಅಪಘಾತಕ್ಕೆ ಕಾರಣವೆಂದು ಅರಿತು, ವೇಗ ನಿಯಂತ್ರಣಕ್ಕೂ ಕ್ರಮ ವಹಿಸಲಾಗಿದೆ. ಹಾಗಾಗಿ ವಾಹನ ಚಾಲಕರು ಎಚ್ಚರಿಕೆ ವಹಿಸಿದರೆ ಅಪಘಾತ ತಡೆಯಬಹುದು. ಈ ನಿಟ್ಟಿನಲ್ಲಿ ಎಕ್ಸ್‌ಪ್ರೆಸ್ ವೇ ಬಳಿ ಜಾಗೃತಿ ಕಾರ್ಯಕ್ರಮ ನಡೆಸುವ ಮೂಲಕ ಚಾಲಕರ ಗಮನ ಸೆಳೆಯಲಾಯಿತು ಎಂದು ತಿಳಿಸಿದರು.

ಎನ್.ಆರ್.ಸಂಚಾರ ಠಾಣೆಯ ಎಎಸ್‌ಐ ರಾಜು, ಸಿಬ್ಬಂದಿ ಮಹೇಶ್ ಪಂಡಿತ್ ಹಾಗೂ ಮಹದೇವ ಪ್ರಸಾದ್, ಸಂಚಾರ ನಿಯಮ ಪಾಲನೆ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಟೀ ಮೈಸೂರು ತಂಡದ ಯಶ್ವಂತ್, ಕಿರಣ್ ಜೈರಾಮ್ ಗೌಡ, ಅನಿಲ್ ಜೈನ್, ಹಿರಿಯಣ್ಣ, ಸುನೀಲ್, ಮಂಜುನಾಥ್, ಹರೀಶ್ ಶೆಟ್ಟಿ ಆನಂದ್, ಮನೋಹರ್, ಯತೀಶ್, ಸುಮಂತ್, ಜಯಂತ್, ಮಂಜುನಾಥ್ ಜೈಶಂಕರ್, ಚಂದ್ರು, ರವಿಶಂಕರ್, ಸಂಜಯ್, ಮನೋಜ್, ಅಭಿ, ಪ್ರವೀಣ್, ರವಿ, ಸಹನಾ ಮತ್ತಿತರರು ಪಾಲ್ಗೊಂಡಿದ್ದರು.



ಭಾನುವಾರ ಚಾಮುಂಡಿ ಬೆಟ್ಟಕ್ಕೆ ಆಗಮಿಸಿದ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು ನಾಯಕ ಸಮಾಜದ ಮುಖಂಡರು ಅಭಿನಂದಿಸಿದರು. ಈ ವೇಳೆ ನಾಯಕರ ಸಂಘದ ಅಧ್ಯಕ್ಷ ಆರ್ ಶಂಭು ಲಿಂಗು, ಜಿಪಂ ಮಾಜಿ ಅಧ್ಯಕ್ಷ ಹೆಚ್. ಸಿ.ಬಸವರಾಜು, ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ, ಉದ್ದುರು ಗ್ರಾಪಂ ಅಧ್ಯಕ್ಷ ಕೃಷ್ಣ, ಮಂಜು ನಾಯಕ್, ಉತ್ತನಹಳ್ಳಿ ಶಿವಣ್ಣ, ಕುಮಾರ್ ಬಂಡಹಳ್ಳಿ ಹಾಗೂ ಚಾಮುಂಡಿ ಬೆಟ್ಟದ ಗ್ರಾಮಸ್ಥರು ಹಾಜರಿದ್ದರು.

ಮೋಡದ ನಡುವೆ ಆಗಸದಲ್ಲಿ ಗಾಳಿಪಟಗಳ ಚಿತ್ತಾರ







ಮೈಸೂರು, ಜು. 9(ಸಿಎನ್)– ಮೋಡ ಕವಿದ ವಾತಾವರಣ ಮಧ್ಯೆಯೂ ಗಾಳಿಪಟ ಹಾರಿಸುವವರ ಉತ್ಸಾಹ ಕುಗ್ಗಿರಲಿಲ್ಲ... ಸಾಮಾನ್ಯ ಗಾಳಿಪಟ, ಡೈಮಂಡ್ ಪಟ, ಲಾಂಡ ಪಟ(ಬಾಲವಿಲ್ಲ), ಫ್ಯಾನ್ಸಿ ಪಟ, ಚೈನಾ ಪಟ, ಬಾನಂಗಳದಲ್ಲಿ ಹಾರಿ ಎಲ್ಲರಲ್ಲೂ ರೋಮಾಂಚನ ಸೃಷ್ಟಿಸಿದವು. ಮಕ್ಕಳು, ಹಿರಿಯರು ಎಂಬ ಭೇದಭಾವ ಇಲ್ಲದೆ ಎಲ್ಲರೂ ಗಾಳಿಪಟ ಹಾರಿಸಿ ಸಂಭ್ರಮಿಸಿದರು.

ಮೈಸೂರು ವೀರಶೈವ ಸಜ್ಜನ ಸಂಘವು ಭಾನುವಾರ ಮಧ್ಯಾಹ್ನ ಲಲಿತಮಹಲ್ ಹೆಲಿಪ್ಯಾಡ್‌ನ ಪಕ್ಕದ ಮೈದಾನದಲ್ಲಿ ಸಂಘದ 25ನೇ ವರ್ಷದ ಬೆಳ್ಳಿಹಬ್ಬ ಪ್ರಯುಕ್ತ, ಸಂಘದ ಸದಸ್ಯರಿಗೆ ಗಾಳಿಪಟ ಹಾರಿಸುವ ಸ್ಪರ್ಧೆ ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ನೂರಾರು ಮಂದಿ ಪಾಲ್ಗೊಂಡು ವಿವಿಧ ಬಗೆಯ ಗಾಳಿಪಟಗಳನ್ನು ಹಾರಿಸಿ ಸಂಭ್ರಮಿಸಿದರು.

ಗಾಳಿಪಟ ಎಂದರೆ ಚಿಕ್ಕ ಮಕ್ಕಳಿಗಂತೂ ಪಂಚ ಪ್ರಾಣ. ನೋಡುಗರಿಗೆ ನಯನಮನೋಹರ ದೃಶ್ಯ ನೀಡುವ ಗಾಳಿಪಟಕ್ಕೆ ಎಲ್ಲ ವಯೋಮಾನದವರನ್ನು ಆಕರ್ಷಿಸುವ ತಾಕತ್ತು ಇದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳು ಹಾರಿಸುವ ಗಾಳಿಪಟಗಳನ್ನು ಬಿಟ್ಟರೆ ಇನ್ನುಳಿದಂತೆ ಎಲ್ಲಿಯೂ ಕಂಡು ಬರುವುದೇ ಇಲ್ಲ. ಈ ಕೊರತೆ ನೀಗಿಸಲು ಎಂಬಂತೆ ಮೈಸೂರಿನಲ್ಲಿ ಆಯೋಜನೆಯಾಗಿದೆ. ಆ ಮೂಲಕ ಗಾಳಿಪಟ ಪ್ರೇಮಿಗಳಿಗೆ ಹೊಸ ಉತ್ಸಾಹ ನೀಡಿದೆ.

ರಂಗುರಂಗಿನ ವಿವಿಧ ಕಲ್ಪನೆಗಳಲ್ಲಿ ಸಾಕಾರಗೊಂಡ, ಪಕ್ಷಿ, ಪ್ರಾಣಿಗಳ ಗಾಳಿಪಟಗಳು ಆಕಾಶದಲ್ಲಿ ಹಾರಿ ಹೊಂಗನಸು ಸೃಷ್ಟಿಸುತ್ತವೆ. ಚಿತ್ತಾರದ ಮೂಲಕ ಮಾಯಾಂಗನೆಯಂತೆ ಕಣ್ಮುಂದೆ ಹಾಯ್ದುಹೋಗುತ್ತವೆ. ಬಣ್ಣಬಣ್ಣದ ಹಕ್ಕಿಗಳು ಸಾಲಾಗಿ ಹೋಗುವಂತೆ ಕಂಡು ಬರುವ ದೃಶ್ಯಾವಳಿ ಪುಳಕಗೊಳಿಸಿತು. ಹಾವು, ತಿಮಿಂಗಲ, ಹುಲಿ, ಹದ್ದು, ಮಹಿಷಾ, ಗಣೇಶ 100 ಪಟ ಜೋಡಣೆಯ ಪಟ ಸೇರಿದಂತೆ ವಿವಿಧ ಪ್ರಾಣಿಗಳ ಚಿತ್ರಗಳನ್ನು ಹೊಂದಿದ ಗಾಳಿ ಪಟಗಳು ಆಕಾಶದಲ್ಲಿ ಹಾರುವ ಮೂಲಕ ಮನಸೂರೆಗೊಂಡವು.

> ಗಾಳಿಪಟ ಹಬ್ಬಕ್ಕೆ ರಾಜರ ಕಾಲದ ನಂಟಿದೆ. ಈ ಹಿಂದೆ ರಾಜರ ಕಾಲದಲ್ಲಿ ಪ್ರತಿವರ್ಷದಲ್ಲಿ ಬರುವ ಪ್ರಥಮ ಏಕಾದಶಿ ಯಂದು ನೂತನವಾಗಿ ವಿವಾಹವಾದ ದಂಪತಿಗಳಿಗೆ ಚಿನ್ನದ ಪಟ ಹಾಗೂ ಬೆಳ್ಳಿಯ ದಾರ ಕೊಟ್ಟು ಪಟ ಹಾರಿಸುವ ಪದ್ಧತಿ ರೂಢಿಯಲ್ಲಿತ್ತು. ಕಾಲಾನುಕ್ರಮೇಣ ಆಧುನಿಕ ಜಗತ್ತಿಗೆ ತಕ್ಕಂತೆ, ಶಕ್ತ್ಯಾನುಸಾರ ಗಾಳಿಪಟ ಹಬ್ಬವನ್ನು ಹಲವು ಸಂಘ ಸಂಸ್ಥೆಗಳು ಆಯೋಜಿಸುವ ಮೂಲಕ ಮುಂದುವರಿಸಿವೆ.
>
> -ಮಧುಸೂದನ್, ಗಾಳಿಪಟ ತಯಾರಕರು.



ಸ್ಪರ್ಧೆ ಬಳಿಕ ವಿವಿಧ ವಿಭಾಗಗಳಲ್ಲಿ ಉತ್ತಮ ಗಾಳಿ ಪಟಗಳನ್ನು ಆಯ್ಕೆಮಾಡಿ ಬಹುಮಾನ ವಿತರಿಸಲಾಯಿತು. ಸುಂದರ ಅಲಂಕೃತ ಗಾಳಿಪಟಗಳ ಆಯ್ಕೆಯಲ್ಲಿ ಸ್ವದೇಶಿ ನಿರ್ಮಿತ ಪಟದ ಹಾರಿಸಿದ, ಜ್ಯೋತಿ ಪ್ರಭುದೇವು, ವಿನುತ ವಿರೇಶ್, ಎಚ್.ಎನ್ ನಿತಿನ್ ಕ್ರಮವಾಗಿ ಬಹುಮಾನ ಪಡೆದರು. ಇನ್ನು ವಿದೇಶಿ ನಿರ್ಮಿತ ಪಟಗಳ ಪೈಕಿ, ಆಟೋ ನಾಗರಾಜ್, ಎಚ್.ಎನ್ ಕಾಶಿ, ರಿಷಿ ಕೌಶಿಕ್ ಕ್ರಮವಾಗಿ ಬಹುಮಾನ ಪಡೆದು ಮಿಂಚಿದರು. ದೊಡ್ಡ ಗಾಳಿಪಟಗಳ ವಿಭಾಗದಲ್ಲಿ, ಶರತ್ ನಾಗರಾಜು(12 ಅಡಿ), ವಸುದ ವೀರೇಶ್ (8 ಅಡಿ), ಮನೋಹರ್ ಉಮೇಶ್(6 ಅಡಿ) ಬಹುಮಾನ ಪಡೆದರು. ಆದಿತ್ಯ ಶಶಿಶೇಖರ್, ಭವ್ಯ ವಿಶ್ವಾಸ್ ಶಿವಕುಮಾರ್, ಎಂ.ಎನ್. ನಿಶ್ಚಯ್, ವಿ.ಸೌಮ್ಯ ನಿತಿನ್ ಸಮಾಧಾನಕರ ಬಹುಮಾನ ಪಡೆದರು.

ಗಾಳಿಪಟ ಸ್ಪರ್ಧೆ: ಇದೇ ಜುಲೈ 30 ರಂದು ವಸ್ತು ಪ್ರದರ್ಶನದಲ್ಲಿ ಗಾಳಿಪಟ ಸ್ಪರ್ಧೆ ಆಯೋಜನೆ ಮಾಡಲಾಗಿದೆ ಎಂದು ಪಟ ಮಾರಾಟಗಾರರೊಬ್ಬರು ಮಾಹಿತಿ ನೀಡಿದರು. ಸ್ಪರ್ಧೆ ಬಗ್ಗೆ ಮಾತನಾಡಿ, ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ವ್ಯಾಪಾರ ಮಂಕಾಗಿದೆ ಸುಮಾರು 30 ರಿಂದ 100 ರೂ.ವರೆಗೂ ಗಾಳಿಪಟ ಮಾರಾಟವಾಗುತ್ತಿವೆ. ಕಳೆದ ವರ್ಷ ಉತ್ತಮ ವ್ಯಾಪಾರ ಆಗಿತ್ತು ಆದರೆ ಈಗ ವ್ಯಾಪಾರ ಕಳೆಗುಂದಿದೆ ಎಂದರು.

ಈ ವೇಳೆ ಮುಖ್ಯ ಅತಿಥಿಗಳಾಗಿ ಮೈಸೂರು ಬಿ.ನಾಗರಾಜು ಆಗಮಿಸಿದ್ದರು. ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಸ್. ರಮಾನಂದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎಂ.ಎಸ್. ರಮೇಶ್, ಉಪಾಧ್ಯಕ್ಷ ಎಂ.ಟಿ. ಮಲ್ಲಿಕಾರ್ಜುನ್, ಗೌರವ ಕಾರ್ಯದರ್ಶಿ ಕೆ.ವಿ. ಪ್ರದೀಪ್ ಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.